॥ ಶ್ರೀ ॥

# ಶ್ರೀಭಾಷ್ಯತಾತ್ಪರ್ಯಸಾರ

ಲೇಖಕರು :

**ಎಂ. ಬಿ. ಎಸ್. ಅಯ್ಯಂಗಾರ್, ಬಿ.ಇ., ಎ.ಎಂ.ಐ.ಇ.,**

**ಡೆಪ್ಯುಟಿ ಚೀಫ್ ಇಂಜಿನೀಯರ್,**

**ಸದರ್ನ್ ರೈಲ್ವೆ, ಮದ್ರಾಸ್.**

**ಮುದ್ರಕರು :**

ಹಿಂದೂಸ್ಥಾನ್ ಪ್ರೆಸ್, ಮೈಸೂರು.

1953

**ಬೆಲೆ:** ೧—೦—೦

ಅಜ್ಞನಾದ ದಾಸನಿಗೆ ಈ ಮಹದ್‌ಗ್ರಂಥದ ಪ್ರಚಾರದಯೋಗ್ಯತೆ ಇಲ್ಲ ವೆಂಬುದು ಹೇಳಬೇಕಾದ್ದೇ ಇಲ್ಲ. ಆದರೆ ಹಿರಿಯರು ಅಡಿಗಡಿಗೆ ಪ್ರೋತ್ಸಾಹಿಸಿದುದರಿಂದ ಇದನ್ನು ಪ್ರಚಾರಕ್ಕೆ ತರಬೇಕಾಯಿತು. ಸಂಸ್ಕೃತ ಪರಿಚಯವಿಲ್ಲದವರಿಗೂ ವೇದಾಂತಾರ್ಥವು ವಿಶದವಾಗಿ ತಿಳಿಯುವಂತೆ ಬರೆದಿರುವುದರಿಂದ ಈ ಪುಸ್ತಕವು ಅನೇಕರಿಗೆ ಉಪಯೋಗವಾಗುವುದರಲ್ಲಿ ಸಂದೇಹವಿಲ್ಲ. ಭಾಗವತರ ಅಡಿದಾವರೆಗಳಲ್ಲಿ ಇದನ್ನು ಕಾಣಿಕೆಯಾಗಿ ಸಮರ್ಪಿಸಿರುತ್ತೇನೆ,

ಇತಿ,

ಭಕ್ತಾಂಘ್ರಿರೇಣು,

**ಎಂ. ಬಿ. ಎಸ್. ಅಯ್ಯಂಗಾರ್**

# ಮುನ್ನುಡಿ

ಈ ಗ್ರಂಥಕರ್ತರೂ ನನ್ನ ಆಪ್ತಬಂಧುಗಳಾದ ರಿಟೈರ್ಡ್ ವಿದ್ಯಾ ಇಲಾಖಾ ಇನ್ಸ್ಪೆಕ್ಟರ್ ಗಣಿತಕಲಾನಿಧಿ ಆರ್. ಆಳ್ವಾರಯ್ಯಂಗಾರ್ಯರೂ ಈ ಗ್ರಂಥವನ್ನು ಕಳುಹಿಸಿ ಶೋಧಿಸಿಕೊಡಬೇಕೆಂದು ನಿಯಮಿಸಿದುದರಿಂದ ನನ್ನ ದೇಹೇಂದ್ರಿಯಾದ್ಯಪಾಟವದಿಂದಲೂ ಪ್ರವಚನರೂಪ ಕಾರ್ಯಾಂತರ ದಿಂದಲೂ ಬಹಳ ವಿಳಂಬದಿಂದ ಈ ಶೋಧನಕಾರ್ಯವನ್ನು ಮಾಡಿದೇನೆ. ಈ ಸಮಯದಲ್ಲಿ ಗ್ರಂಥಕರ್ತರನ್ನೇ ಪತ್ರಿಕಾಮೂಲಕ ನಾನು ಕೇಳ ಬೇಕಾಯಿತು. ಅವರು "ಅರವುಲಿಪಿ ಅರವುಭಾಷೆಯ ಭಾಷ್ಯಾ ಪರಿವರ್ತನೆ ಪುಸ್ತಕವೊಂದೂ, ತೆನಗುಲಿಪಿ ಅರವುಭಾಷೆಯ ವೇದಾಂತ ದೀಪದ ಪರಿವರ್ತನೆ ಪುಸ್ತಕವೊಂದೂ, ಇವೆರಡರ ಸಹಾಯದಿಂದ ಬರೆದೆನು; ಸಂಸ್ಕೃತಭಾಷಾ ಪರಿಚಯವು ವಿಶೇಷವಾಗಿಲ್ಲ"ವೆಂದು ಬರೆದರು.

ಯದ್ಯಪಿ ಒಂದು ಭಾಷಾಗ್ರಂಥವು ಮತ್ತೊಂದು ಭಾಷೆಯಿಂದ ಪರಿವರ್ತನೆ ಮಾಡಲ್ಪಟ್ಟರೆ ಸ್ವಲ್ಪ ತೂಕವಿಳಿಯುವುದು ಸಹಜ. ಅದಕ್ಕೂ ಮತ್ತೊಂದು ಭಾಷೆಯಿಂದ ಪರಿವರ್ತನೆಯಾದುದರಿಂದ ಇನ್ನೂ ತೂಕವಿಳಿ ಯಬೇಕಾದ್ದು ಸಹಜವಾದರೂ ಈ ಗ್ರಂಥಕರ್ತರಿಗೆ ವಿಶಿಷ್ಟಾದ್ವೈತ ವೇದಾಂತದಲ್ಲಿರುವ ಅಭಿಮಾನವೂ, ಕುತೂಹಲವೂ, ಇದರ ಪ್ರಚಾರದಲ್ಲಿ ಶ್ರದ್ಧಾವಿಶೇಷವೂ ಇವರ ಸಂಸ್ಕೃತಭಾಷಾನಭಿಜ್ಞತೆಯನ್ನು ಮರೆಮಾಡಿದೆ. ಅತ್ಯಂತ ಸಂಗ್ರಹವಾಗಿ ಗ್ರಂಥವನ್ನು ಬರೆದಿರುವುದರಿಂದ ಅನೇಕ ಅಧಿಕರಣ ಗಳ ಅರ್ಥಗಳನ್ನು ಬಿಟ್ಟಿರುತ್ತಾರಾದರೂ ಸಿದ್ಧಾಂತಗಳಿಗೆ ಅವಶ್ಯಕವಾದ ವಿಷಯಗಳನ್ನು ಪ್ರೇಕ್ಷಕರಿಗೆ ಚೆನ್ನಾಗಿ ತಿಳಿಯುವಂತೆ ಬರೆದಿರುವುದು ಬಹಳ ಶ್ಲಾಘ್ಯವಾಗಿದೆ. ನಾನು ನನ್ನ ಶಕ್ತ್ಯಾನುಸಾರ ಯಥೋಚಿತವಾಗಿ ಶೋಧಿಸಿಧೇನೆ. ವಿಶಿಷ್ಟಾದ್ವೈತಮತಾಭಿಮಾನಿಗಳಾದ ಮಹನೀಯರೂ ಇವರ ಶ್ರಮವನ್ನು ಸಫಲಗೊಳಿಸುವರೆಂದು ನಂಬಿಧೇನೆ.

ಸಾಹಿತ್ಯರತ್ನಂ, ಆಸ್ಥಾನ ಮಹಾವಿದ್ವಾನ್,
ಸಾಹಿತ್ಯಾಲಂಕಾರ, ಸಾಂಖ್ಯವೇದಾಂತ ವಿದ್ವಾನ್,
ಸಾಂಖ್ಯತೀರ್ಥಶಾಸ್ತ್ರನವರತ್ನಂ,
**ಜಗ್ಗು ವೆಂಕಟಾಚಾರ್.**

ಮೇಲುಕೋಟೆ,
31—12—50

ಶ್ರೀ ಉ. ಎಂ. ಒ. ಎಸ್. ಅಯ್ಯಂಗಾರ್ಯರು ಕನ್ನಡಭಾಷೆಯಲ್ಲಿ ಬರೆದಿರುವ "ಶ್ರೀಭಾಷ್ಯತಾತ್ಪರ್ಯಸಾರ" ಎಂಬ ಗ್ರಂಥವನ್ನು ನಾನು ನೋಡಿ ಶೋಧಿಸಿ ತಾ|| 31–12--50 ರಲ್ಲೂ ಒಂದು ಮುನ್ನುಡಿಯನ್ನು ಬರೆದುಕೊಟ್ಟಿದ್ದೆನು. ಈ ವೇಳೆಗೆ ಗ್ರಂಥ ಪ್ರಿಂಟಾಗಿರಬಹುದೆಂದು ಬಹಳ ಕುತೂಹಲಿಯಾಗಿದ್ದೆನು. ಕಾರಣಾಂತರದಿಂದ ಪ್ರಿಂಟಾಗಿಲ್ಲವೆಂದು ಈಗ ತಿಳಿಯಿತು. ಪಶ್ಚಾತ್ತಾಪದಿಂದ ಈ ಗ್ರಂಥಕಾರರಲ್ಲಿ ನಾನು ಅರಿಕೆಮಾಡುವುದೇನೆಂದರೆ, "ನಿಮ್ಮ ಈ ಮೇಲ್ಕಂಡ ಗ್ರಂಥವು ಸಂಸ್ಕೃತ ಪರಿಚಯವಿಲ್ಲದವರಿಗೂ ವಿಶದವಾಗಿ ವೇದಾನ್ತಾರ್ಥವು ತಿಳಿಯುವಂತೆ ಇರುವುದರಿಂದ ಇದನ್ನು ಶೀಘ್ರವಾಗಿ ಮುದ್ರಿಸಿ ಪಂಡಿತಪಾಮರರಿಗೆಲ್ಲಾ ವೇದಾನ್ತಾರ್ಥಜ್ಞಾನವನ್ನುಂಟುಮಾಡಿ ಎಲ್ಲರನ್ನೂ ಸಂತೋಷಪಡಿಸಬೇಕಾಗಿ ಪುನಃಪುನಃ ಪ್ರಾರ್ಥಿಸುತ್ತೇನೆ."

ಮೇಲುಕೋಟೆ,
22–7–52

ಆಸ್ಥಾನ ಮಹಾವಿದ್ವಾನ್,
**ಜಗ್ಗು ವೆಂಕಟಾಚಾರ್.**

# ಉಪೋದ್ಘಾತ

ಶ್ರೀಯಃಪತಿಯಾದ ಸರ್ವೇಶ್ವರನು ಲೀಲಾವಿಭೂತಿಯಲ್ಲಿರುವ ಸಂಸಾರಿಚೇತನರ ಉಜ್ಜೀವನಾರ್ಥವಾಗಿ ಅಪೌರುಷೇಯವಾದ ವೇದಾಂತ ಶಾಸ್ತ್ರವನ್ನು ಚತುರ್ಮುಖನ ಮೂಲಕ ಅನುಗ್ರಹಿಸಿದನು. ಈ ವೇದಾಂತ ಶಾಸ್ತ್ರದ ಅರ್ಥಗ್ರಹಣವು ಸರ್ವೇಶ್ವರನ ಅನುಗ್ರಹಲಬ್ಧವಾದ ಜ್ಞಾನವುಳ್ಳವರಿಗೆ ಉಂಟಾಗುವುದೇಹೊರತು ಇತರರಿಗೆ ಸುಲಭಸಾಧ್ಯವಲ್ಲ. ಕಾಲಕ್ರಮೇಣ ಈ ತತ್ತ್ವಜ್ಞಾನವು ಲೀನವಾಗಿ ಜನರು ವೇದಾಂತವಾಕ್ಯಗಳಿಗೆ ತಮ್ಮ ಇಷ್ಟಪ್ರಕಾರವಾಗಿ ಅರ್ಥಮಾಡಿ ದೇಹಾಭಿಮಾನಪೂರಿತರಾಗಿ ಸಂಸಾರವರ್ಧಕರಾಗಿ ಪರಮಪುರುಷಾರ್ಥ ಸಾಧನವಾದ ಪರಬ್ರಹ್ಮಸ್ವರೂಪ ಜ್ಞಾನವನ್ನೂ, ತತ್ಫಲವಾದ ಬ್ರಹ್ಮಾನಂದ ಸುಖವನ್ನೂ ಕಳೆದುಕೊಂಡು, ಸಂಸಾರಚಕ್ರದಲ್ಲಿ ತೊಳಲುತ್ತಿರುವುದನ್ನು ಕಂಡು ಪರಮಾತ್ಮನು ಹಂಸಾದಿ ಅವತಾರಗಳನ್ನು ಎತ್ತಿ ವೇದಶಾಸ್ತ್ರ ಪ್ರತಿಪಾದ್ಯವಾದ ತತ್ತ್ವಜ್ಞಾನವನ್ನು ಪ್ರಕಾಶಪಡಿಸಿದನು. ಈ ಜ್ಞಾನವೂ ಕಾಲಕ್ರಮೇಣ ಕ್ಷೀಣವಾಗಿ ನಿಜವಾದ ತತ್ತ್ವಜ್ಞಾನವು ಮರೆಯಾದುದರಿಂದ ಪರಮಾತ್ಮನೇ ವೇದವ್ಯಾಸಾವತಾರದಲ್ಲಿ ವೇದಗಳನ್ನೆಲ್ಲಾ ವಿಂಗಡಿಸಿ ಬರೆದು ಪರಬ್ರಹ್ಮಪ್ರಾಪ್ತಿಗೆ ಅವಶ್ಯಕವಾದ ವೇದಾಂತ ಶಾಸ್ತ್ರವನ್ನು ಸೂತ್ರರೂಪವಾಗಿ ಬರೆದಿಟ್ಟನು. ಇದೇ ಬ್ರಹ್ಮಸೂತ್ರವು.

ಈ ಬ್ರಹ್ಮಸೂತ್ರಕ್ಕೆ "ಬೋಧಾಯನ" ಋಷಿಯು ವೇದವ್ಯಾಸ ಮಹರ್ಷಿಯ ಅಭಿಪ್ರಾಯಾನುಸಾರವಾಗಿ "ವೃತ್ತಿ" ಎಂಬ ಹೆಸರಿನಿಂದ ಒಂದು ವಿಸ್ತಾರವಾದ ವ್ಯಾಖ್ಯಾನವನ್ನು ಬರೆದಿಟ್ಟರು. ಈ ಸೂತ್ರಕ್ಕೆ ವಾಕ್ಯಕಾರರು ಸಂಗ್ರಹವಾಗಿ ವ್ಯಾಖ್ಯಾನವನ್ನು ಸೂತ್ರಚ್ಛಾಯೆಯಿಂದಲೇ ರಚಿಸಿದರು. ಈ ವಾಕ್ಯಕ್ಕೆ "ದ್ರಮಿಡಾಚಾರ್ಯರು" ಒಂದು ಭಾಷ್ಯವನ್ನು ಸಂಗ್ರಹವಾಗಿ ರಚಿಸಿದರು.

ಶಂಕರ, ಭಾಸ್ಕರ, ಯಾದವಪ್ರಕಾಶಾದಿಗಳು ಬ್ರಹ್ಮಸೂತ್ರಕ್ಕೆ ವ್ಯಾಖ್ಯಾನವನ್ನು ಬರೆಯುವುದಕ್ಕೆ ಆರಂಭಿಸಿ ಬೋಧಾಯನವೃತ್ತಿ ಮುಂತಾದ ವ್ಯಾಖ್ಯಾನಗಳನ್ನು ಅನುಸರಿಸದೆ ತಮ್ಮ ತಮ್ಮ ಜ್ಞಾನ ಮಹಾತ್ಮ್ಯದಿಂದ ತಮಗೆ ತೋರಿದಂತೆ ಅರ್ಥಮಾಡಿ ಗ್ರಂಥಗಳನ್ನು ರಚಿಸಿದರು. ಇದರಿಂದ ಬ್ರಹ್ಮಸೂತ್ರದ ನಿಜವಾದ ಅರ್ಥವು ಮರೆಸಲ್ಪಟ್ಟಿತು.

ಶ್ರೀವೈಕುಂಠದಲ್ಲಿ ಪರವಾಸುದೇವನಾದ ಶ್ರೀಮನ್ನಾರಾಯಣನು ತನ್ನ ಆದಿಶೇಷನನ್ನು ಭೂಲೋಕದಲ್ಲಿ ಅವತರಿಸಿ ಸರಿಯಾದ ತತ್ವಜ್ಞಾನವನ್ನು ಪ್ರಚಾರಿಸಬೇಕೆಂದು ಕಳುಹಿಸಲು, ಆ ಆದಿಶೇಷನು ಶ್ರೀಮದ್ರಾಮಾನುಜಾಚಾರ್ಯರಾಗಿ ಅವತರಿಸಿ ವ್ಯಾಸಮಹರ್ಷಿಗಳ ಬ್ರಹ್ಮಸೂತ್ರಕ್ಕೆ ಬೋಧಾಯನವೃತ್ತಿಯನ್ನೂ ಮತ್ತು ವಾಕ್ಯದ್ರಮಿಡಭಾಷ್ಯಗಳನ್ನು ಅನುಸರಿಸಿ ಒಂದು ವ್ಯಾಖ್ಯಾನವನ್ನೂ ರಚಿಸಿದರು. ಇದೇ ಶ್ರೀಭಾಷ್ಯ ಗ್ರಂಥವು.

ಈ ಶ್ರೀಭಾಷ್ಯಗ್ರಂಥವೇ ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಮೂಲ ಗ್ರಂಥವು.

ಈ ಬ್ರಹ್ಮಸೂತ್ರವು ನಾಲ್ಕು ಅಧ್ಯಾಯಗಳುಳ್ಳದ್ದಾಗಿಯೂ, ಅಧ್ಯಾಯವೊಂದಕ್ಕೆ ನಾಲ್ಕು ಪಾದಗಳುಳ್ಳದ್ದಾಗಿ, ೧೫೬ ಅಧಿಕರಣಗಳುಳ್ಳದ್ದಾಗಿಯೂ ೫೪೫ ಸೂತ್ರಗಳುಳ್ಳದ್ದಾಗಿಯೂ ಇದೆ. ಶ್ರೀಭಾಷ್ಯಗ್ರಂಥವು ಇಷ್ಟಕ್ಕೂ ವ್ಯಾಖ್ಯಾನರೂಪವಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಸಮಸ್ತ ಸೂಕ್ಷ್ಮಚಿದಚಿದ್ವಿಶಿಷ್ಟನಾದ ಶ್ರೀಮನ್ನಾರಾಯಣನೇ ಜಗತ್ಕಾರಣನೆಂಬ ವಿಷಯವು ನಿರ್ಧರಿಸಲ್ಪಟ್ಟಿದೆ. ಎರಡನೆಯ ಅಧ್ಯಾಯದಲ್ಲಿ ಮೊದಲನೆಯ ಪ್ರಕರಣದಲ್ಲಿ ಸ್ಥಾಪಿಸಿದ ಪರಬ್ರಹ್ಮ ನಿರ್ಧಾರಣ ವಿಷಯದಲ್ಲಿ ಇತರ ಮತಗಳಲ್ಲಿರುವ ಶಾಸ್ತ್ರಗಳು ಅಸಮಂಜಸಗಳು ಮತ್ತು ಅನಾದರಣೀಯಗಳು ಎಂಬುವು ಚರ್ಚಿಸಿ ಸಿದ್ಧಾಂತ ಮಾಡಲ್ಪಟ್ಟಿದೆ. ಮೂರನೆಯ ಅಧ್ಯಾಯದಲ್ಲಿ ಉಪಾಯಸ್ವರೂಪವಾದ ಭಕ್ತಿ ಅಥವಾ ಉಪಾಸನಗಳ ವಿಷಯವು ಸಿದ್ಧಾಂತ ಮಾಡಲ್ಪಟ್ಟಿದೆ. ನಾಲ್ಕನೆಯ ಅಧ್ಯಾಯದಲ್ಲಿ ಮೋಕ್ಷಸ್ವರೂಪವೂ ಮತ್ತು ಮೋಕ್ಷಾನುಭವ ವಿಷಯವೂ ಹೇಳಲ್ಪಟ್ಟಿವೆ.

ಈ ಶ್ರೀಭಾಷ್ಯಗ್ರಂಥದಲ್ಲಿರುವ ಮುಖ್ಯಸಾರಾಂಶಭಾಗವನ್ನು ಮಾತ್ರ ಈ ಸಣ್ಣ ಪುಸ್ತಕದಲ್ಲಿ ಪ್ರಕಟಿಸಿದೆ.

ಭಕ್ತಾಂಘ್ರಿರೇಣು,

19-9-52. ಎಂ. ಒ. ಎಸ್. ಅಯ್ಯಂಗಾರ್.



ಶ್ರೀ ಭಾಷ್ಯಕಾರರು.

|| ಶ್ರೀರಾಮ ||

|| ಶ್ರೀಮತೇ ರಾಮಾನುಜಾಯನಮಃ ||

# ಶ್ರೀ ಭಾಷ್ಯ ತಾತ್ಪರ್ಯ ಸಾರ

## ೧ ನೇ ಪ್ರಕರಣ—ಪರಬ್ರಹ್ಮಪ್ರಕರಣವು

**ಬ್ರಹ್ಮಜ್ಞಾನವಿಚಾರ:—**

ಬ್ರಹ್ಮಸೂತ್ರದಲ್ಲಿ ಮೊದಲನೆಯದಾದ "ಜಿಜ್ಞಾಸಾಧಿಕರಣ"ದಲ್ಲಿ "ಅಥಾತೋಬ್ರಹ್ಮಜಿಜ್ಞಾಸಾ" ಎಂದು ಪರಬ್ರಹ್ಮನ ವಿಚಾರವು ಆರಂಭಿಸಲ್ಪಡುತ್ತದೆ.

**"ಬ್ರಹ್ಮಜಿಜ್ಞಾಸೆ"** ಎಂದರೆ ಪರಬ್ರಹ್ಮಜ್ಞಾನದಲ್ಲಿ ಇಚ್ಛೆ. ಇದು ಯಾವಾಗ ಉಂಟಾಗುವುದು?

ವೇದದ ಪೂರ್ವಭಾಗವಿಚಾರರೂಪವಾದ ಕರ್ಮಮೀಮಾಂಸೆಯಲ್ಲಿ ವರ್ಣಾಶ್ರಮಧರ್ಮಗಳಿಗನುಸಾರವಾದ ನಿತ್ಯನೈಮಿತ್ತಿಕಾದಿ ಕರ್ಮಗಳನ್ನೂ ಮತ್ತು ಸ್ವರ್ಗಾದಿ ಪುಣ್ಯಲೋಕಗಳನ್ನೂ ಹೊಂದುವುದಕ್ಕಾಗಿ ಮಾಡಬೇಕಾದ ಕಾಮ್ಯಕರ್ಮಗಳನ್ನೂ ಓದಿ ತಿಳಿದುಕೊಂಡನಂತರ ಈ ಕಾಮ್ಯಕರ್ಮಗಳ ಫಲವು ಅಲ್ಪಗಳು ಮತ್ತು ಅಸ್ಥಿರಗಳು ಎಂಬ ವಿಷಯವು ತಿಳಿದುಬರುವುದು. ಹೇಗೆಂದರೆ—ಕಾಮ್ಯಕರ್ಮಗಳ ಫಲರೂಪವಾಗಿ ಮನುಷ್ಯನು (ಎಂದರೆ ಜೀವನು) ಶರೀರಾವಸಾನಾನಂತರ ಲಿಂಗಶರೀರದೊಡನೆ ಸ್ವರ್ಗಾದಿ ಲೋಕಗಳಿಗೆ ಪ್ರಯಾಣಮಾಡಿ ಅಲ್ಲಿ ಉತ್ತಮವಾದ ಹೊಸ ಶರೀರವನ್ನು ಪರಿಗ್ರಹಿಸಿ ಸುಖಾನುಭವಗಳನ್ನು ಪಡೆಯುವನು. ಇವನ ಕಾಮ್ಯ (ಎಂದರೆ ಪುಣ್ಯ) ಕರ್ಮಗಳು ಅಧಿಕವಾಗಿಯೂ ವಿಶೇಷವಾದದ್ದಾಗಿಯೂ ಇದ್ದಷ್ಟೂ ಪುಣ್ಯಲೋಕಗಳೂ ಮತ್ತು ಸುಖಾನುಭವ

ಕಾಲವೂ ಅಧಿಕವಾಗಿರುವುವು. ಕರ್ಮಗಳು ಅವುಗಳ ಫಲಾನುಭವ ದಿಂದ ಕ್ಷೀಣವಾದಮೇಲೆ ಆಯಾ ಪುಣ್ಯಲೋಕಗಳಿಂದ ತಳ್ಳಲ್ಪಟ್ಟು ಪುನಃ ಭೂಲೋಕಕ್ಕೆ ಬಂದು ಅವನ ಕರ್ಮಾನುಗುಣವಾಗಿ ಪುನಃ ಬೇರೆ ಶರೀರ ವನ್ನು ಪಡೆಯುವನು. ಅವನ ಈ ಪುನರ್ಜನ್ಮದಲ್ಲಿಯೂ, ಅವನು ಸತ್ಕರ್ಮನಿರತನಾಗಿದ್ದು ಶರೀರಾವಸಾನಾನಂತರ ಮೊದಲಿನಂತೆಯೇ ಸ್ವರ್ಗಾದಿ ಪುಣ್ಯಲೋಕಗಳಲ್ಲಿ ಸುಖವನ್ನು ಅನುಭವಿಸಿ ಆ ಕರ್ಮಫಲಗಳು ನಶಿಸಿದ ಒಡನೆಯೇ ಪುನಃ ಭೂಲೋಕಕ್ಕೆ ಇಳಿದು ಶರೀರವನ್ನು ಪಡೆ ಯುವನು. ಭೂಲೋಕದಲ್ಲಿರುವ ಕಾಲದಲ್ಲಿ ಅವನು ಪಾಪಕರ್ಮಗಳನ್ನು ಮಾಡಿದರೆ ತತ್ಫಲವಾಗಿ ಶರೀರಾವಸಾನಾನಂತರ ಯಮಲೋಕದಲ್ಲಿ ನರಕ ಯಾತನೆಯನ್ನು ಅನುಭವಿಸುವನು. ಮನುಷ್ಯನ ದುಷ್ಕರ್ಮಗಳು ಕ್ರೂರವಾಗಿದ್ದರೆ ಪುನರ್ಜನ್ಮದಲ್ಲಿ ಅವನು ನೀಚಯೋನಿಯಲ್ಲಿ ಎಂದರೆ ಪಶು, ಪಕ್ಷಿ, ಮೃಗಾದಿಗಳಾಗಿ ಜನಿಸುವನು. ಅತಿ ಪಾಪಿಷ್ಠನಾಗಿದ್ದಲ್ಲಿ ಕ್ರಿಮಿಕೀಟಾದಿಗಳಾಗಿ ಹುಟ್ಟುವನು. ಈರೀತಿಯಾಗಿ ಸಂಸಾರಚಕ್ರದಲ್ಲಿ ಪ್ರತಿ ಜೀವನೂ ಅನಾದಿಯಾಗಿ (From time immemorial) ಸುತ್ತುತ್ತಲೇ ಇರುತ್ತಾನೆ. ಅವನ ಕರ್ಮಗಳೂ ಅದಕ್ಕನುಗುಣವಾಗಿ ಅನಾದಿಯಾಗಿಯೇ ಇವೆ.

ಈ ಅನೇಕ ಜನ್ಮಗಳಲ್ಲಿ ಜೀವನ ಕರ್ಮಗಳ ಜೊತೆಗೆ ಅವನು ಸಂಪಾದಿಸುವ ಜ್ಞಾನವೂ ಅನುಸರಿಸಿ ಬರುತ್ತಿರುತ್ತದೆ. ಜ್ಞಾನವೆಂದರೆ ಭಗವದ್ಭಾಗವತಾದಿಗಳ ವಿಷಯದಲ್ಲಿ ಅವನು ಓದಿ ಕಲಿತಿರುವ ವಿಷಯ ಗಳು ಮತ್ತು ಅವನ ವಿದ್ಯಾಫಲವಾಗಿ ಅವನು ಅನುಷ್ಠಿಸುತ್ತಿರುವ ಒಳ್ಳೆಯ ನಡತೆಗಳು. ಈ ಜ್ಞಾನವು ಅವನ ಕರ್ಮಗಳಿಗೆಲ್ಲಾ ಸಹಕಾರಿಯಾಗಿ ಅನಾದಿಯಾಗಿ ಅನುಸರಿಸಿ ಬರುತ್ತಿರುತ್ತದೆ. ಈ ಜ್ಞಾನವು ಅಭಿವೃದ್ಧಿ ಯಾದಹಾಗೆಲ್ಲಾ ಮನುಷ್ಯನು ಸನ್ಮಾರ್ಗಪ್ರವರ್ತನೆಗೆ ಅಭಿಲಾಷೆಯನ್ನು ಪಡೆಯುತ್ತಾನೆ.

ಈ ವಿಧವಾದ ಅಲ್ಪಾಸ್ಥಿರರೂಪವಾದ ಸಂಸಾರ ಚಕ್ರದಿಂದ ತಪ್ಪಿಸಿ ಕೊಂಡು ಪುನರ್ಜನ್ಮವಿಲ್ಲದ ಶಾಶ್ವತವಾದ ಸುಖವನ್ನು ಅನುಭವಿಸುವುದಕ್ಕೆ

ಏನಾದರೂ ಮಾರ್ಗವಿದೆಯೇ? ಎಂಬ ಆಶೆಯು ಮನುಷ್ಯನಿಗೆ ಉಂಟಾಗುತ್ತದೆ. ಪುನರ್ಜನ್ಮವಿಲ್ಲದ ಶಾಶ್ವತಸುಖವು ಬ್ರಹ್ಮಾನುಗ್ರಹದಿಂದ ಬ್ರಹ್ಮಜ್ಞಾನಪೂರ್ವಕವಾಗಿ ಉಂಟಾಗುತ್ತದೆ ಎಂದು ಶಾಸ್ತ್ರದಲ್ಲಿ ಹೇಳಿರುವುದರಿಂದ ಆ ಬ್ರಹ್ಮನನ್ನು ಅರಿಯುವ ಇಚ್ಛೆಯು ಎಂದರೆ ಬ್ರಹ್ಮಜಿಜ್ಞಾಸೆಯು ಅವನಿಗೆ ಉಂಟಾಗುತ್ತದೆ.

ವೇದದ ಪೂರ್ವಭಾಗವಿಚಾರರೂಪವಾದ ಕರ್ಮಮೀಮಾಂಸೆಯು ಕರ್ಮಗಳ ಸ್ವರೂಪವನ್ನೂ ಮತ್ತು ಅವುಗಳನ್ನು ನಡೆಸುವ ಕ್ರಮವನ್ನೂ ಮತ್ತು ಆಚಾರಧರ್ಮಗಳನ್ನೂ ವಿವರಿಸುವುದು. ವೇದದ ಉತ್ತರಭಾಗ (ಎಂದರೆ ವೇದಾಂತದಲ್ಲಿ) ಪರಬ್ರಹ್ಮನ ವಿಚಾರವು ವಿವರಿಸಲ್ಪಡುತ್ತದೆ.

### ಪರಬ್ರಹ್ಮನು ಯಾರು?

ಪರಬ್ರಹ್ಮನೆಂದರೆ ಯಾರು? ಎಂಬ ಪ್ರಶ್ನೆಯು ಮೊದಲು ಹೊರಡುವುದು. ಸಾಧಾರಣವಾಗಿ ನಾವು ಯಾವುದಾದರೂ ಒಂದು ವಸ್ತುವನ್ನು ನೋಡಿದರೆ ಆ ವಸ್ತುವು ಹೇಗೆ ಉಂಟಾಯಿತು? ಎಲ್ಲಿಂದ ಬಂದಿತು? ಇತ್ಯಾದಿಯಾಗಿ ಆ ವಸ್ತುವಿನ ಮೂಲಕಾರಣವನ್ನು ಅರಿಯುವುದಕ್ಕೆ ಪ್ರಯತ್ನಿಸುತ್ತೇವೆ. ಮೇಲೆ ಹೇಳಿದ ಉದಾಹರಣೆಯಲ್ಲಿ "ನಾವು" ಎಂಬ ಜೀವ, ಎಂದರೆ ಜ್ಞಾನವಿರುವ ಒಂದು ವಸ್ತುವೂ; ಒಂದು "ವಸ್ತು" ಎಂಬ ಜೀವರಹಿತವಾದ (ಎಂದರೆ ಅಚಿತ್ತಾದ) ಒಂದು ವಸ್ತುವೂ, ಇವೆರಡೂ ಇವೆ. ಮೂರನೆಯದಾಗಿ ಇವಕ್ಕೆ ಮೂಲಕಾರಣವ್ಯಾವುದು ಎಂಬ ಪ್ರಶ್ನೆಯೂ ಇದೆ. ಇದೇ ವಿಶಿಷ್ಟಾದ್ವೈತಸಿದ್ಧಾಂತಕ್ಕೆ ಸಹಕಾರಿಯಾಗಿಯೂ ಇದೆ.

### ತತ್ವತ್ರಯ :—

ಉಪನಿಷತ್ತಿನಲ್ಲಿ ತತ್ವಗಳು ಮೂರು ಎಂಬ ವಿಚಾರವನ್ನು "ಭೋಕ್ತಾ ಭೋಗ್ಯಂ ಪ್ರೇರಿತಾರಂಚಮತ್ವಾ" (ಶ್ವೇ. ೧-೧೨) ಎಂದು ಹೇಳಿದೆ. "ಭೋಕ್ತಾ" ಎಂದರೆ ಕರ್ಮಫಲಗಳನ್ನು ಅನುಭವಿಸುವ

"ಜೀವನು." "ಭೋಗ್ಯಂ" ಎಂದರೆ ಅವನಿಗೆ ಭೋಗೋಪಕರಣವಾಗಿ ಕಲ್ಪಿಸಲ್ಪಟ್ಟಿರುವ "ಅಚಿತ್" ಎಂದರೆ ಜೀವರಹಿತವಾದ ಭೂತೇಂದ್ರಿಯಾದಿರೂಪವಾದ ಪ್ರಪಂಚವು. "ಪ್ರೇರಿತಾರಂ" ಎಂದರೆ ಇವೆರಡಕ್ಕೂ "ಪ್ರೇರಕ" ಎಂದರೆ, ಸ್ಥಿತಿಗತಿಗಳನ್ನು ಕಲ್ಪಿಸಿರುವ "ಈಶ್ವರ" ಅಥವಾ "ಪರಬ್ರಹ್ಮ" ಇವು ಮೂರೇ ಸಮಸ್ತವೂ ಆಗಿರುವುವು. ವಿಶಿಷ್ಟಾದ್ವೈತ ಸಿದ್ಧಾಂತರೀತ್ಯಾ ತತ್ವಗಳು ಮೂರು—ಚಿತ್ತು, ಅಚಿತ್ತು ಮತ್ತು ಈಶ್ವರ. ಇವುಗಳನ್ನೇ ತತ್ವತ್ರಯಗಳೆಂದು ಕರೆಯುತ್ತಾರೆ.

**ಜಗತ್ಕಾರಣವಸ್ತುವೇ ಪರಬ್ರಹ್ಮವು:—**

ಮೊದಲನೆಯದಾದ ಜಿಜ್ಞಾಸಾಧಿಕರಣದಲ್ಲಿ ಪರಬ್ರಹನಿರ್ಧಾರಣ ಸೂತ್ರವಾಗಿ "ಜನ್ಮಾದ್ಯಸ್ಯಯತಃ" ಎಂದು ಎರಡನೆಯ ಸೂತ್ರದಲ್ಲಿ ಹೇಳಿದೆ. ಇದಕ್ಕೆ ಅರ್ಥವೇನೆಂದರೆ:—ಈ ಚಿದಚಿದ್ರೂಪವಾದ ಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ಲಯಗಳು ಯಾರಿಂದ ಉಂಟಾಗಿರುವುವೋ ಅದೇ ಪರಬ್ರಹ್ಮವು.

**ಪರಬ್ರಹ್ಮನು ಗುಣಪೂರ್ಣನು:—**

ಮೇಲಿನ ಸೂತ್ರಾರ್ಥವು ಪರಬ್ರಹ್ಮನನ್ನು ಗುಣವಿಶಿಷ್ಟನಾದವನನ್ನಾಗಿ ಹೇಳಿರುವುದು. ಪ್ರಪಂಚವನ್ನು ಸೃಷ್ಟಿಸುವುದಕ್ಕೂ ಅದನ್ನು ತನ್ನಿಯಮನ ಪ್ರಕಾರ ಇಟ್ಟಿರುವುದಕ್ಕೂ ಮತ್ತು ಸಂಹಾರಮಾಡುವುದಕ್ಕೂ ಜ್ಞಾನಶಕ್ತ್ಯಾದಿಗಳು ಅವಶ್ಯಕವಾಗಿ ಬೇಕು.

ಕೆಲವರು ಪರಬ್ರಹ್ಮನನ್ನು "ಸತ್ಯಂ ಜ್ಞಾನಮನನ್ತಂ ಬ್ರಹ್ಮ...." (ತೈ.೨-೧-೧)ಎಂಬ ಶ್ರುತಿವಾಕ್ಯವನ್ನು ಅನುಸರಿಸಿ ಪರಬ್ರಹ್ಮನು ನಿರ್ಗುಣನು ಎಂದು ವಾದಿಸುತ್ತಾರೆ. ಪರಬ್ರಹ್ಮನು ಗುಣಪೂರ್ಣನು ಎಂಬುದಕ್ಕೆ ಅನೇಕ ಶ್ರುತಿಸ್ಮೃತ್ಯಾದಿ ವಚನಗಳಿವೆ. ಇದೇ ಬ್ರಹ್ಮಸೂತ್ರದಲ್ಲಿ "ಶಾಸ್ತ್ರಯೋನಿತ್ವಾತ್" ಎಂಬ ಸೂತ್ರದಲ್ಲಿ ಶಾಸ್ತ್ರಪ್ರಮಾಣವೇದ್ಯತ್ವವೆಂಬ ಗುಣವೂ; "ಈಕ್ಷತೇರ್ನಾಽಶಬ್ದಂ" ಎಂಬ ಸೂತ್ರದಲ್ಲಿ ಸಂಕಲ್ಪಾತ್ಮಕ ಜ್ಞಾನವೆಂಬ

ಗುಣವೂ, ಹೀಗೆ ಪ್ರತಿಯೊಂದು ಸೂತ್ರದಲ್ಲಿಯೂ ಹೇತುನಿರ್ದೇಶ ಮಾಡಿರುವುವೆಲ್ಲಾ ಒಂದೊಂದು ಗುಣವಾಗಿಯೇ ಇರುವು ದಾದ್ದರಿಂದ ಶಾರೀರಕ ಮೀಮಾಂಸವೆಲ್ಲಾ ಸಗುಣಬ್ರಹ್ಮವನ್ನೇ ಪ್ರತಿಪಾದಿಸುವುದು.

"ಯತೋ ವಾ ಇಮಾನಿ ಭೂತಾನಿ ಜಾಯನ್ತೇ| ಯೇನಜಾತಾನಿ ಜೀವನ್ತಿ | ಯತ್ಪ್ರಯನ್ತ್ಯಭಿಸಂವಿಶನ್ತಿ | ತದ್ವಿಜಿಜ್ಞಾಸಸ್ವ | ತದ್ಬ್ರಹ್ಮ| (ತೈ. ಉ. ೩-೧-೧) ಎಂದರೆ ಯಾರಿಂದ ಈ ಸಮಸ್ತ ಭೂತಗಳೂ ಜನಿಸಿ ವುವೋ; ಜನಿಸಿದ ಈ ಚಿದಚಿತ್ತುಗಳು ಯಾವನ ಆಧಾರದಿಂದ ಜೀವಿಸು ತ್ತಿವೆಯೋ; ಮತ್ತು ಕಡೆಯಲ್ಲಿ ಇವುಗಳೆಲ್ಲಾ ಯಾವನಲ್ಲಿ ಲಯವನ್ನು ಹೊಂದುವುವೋ ಅವನೇ ಪರಬ್ರಹ್ಮನು, ಮತ್ತು ಅವನೇ ತಿಳಿಯಬೇಕಾದ ತತ್ವವು ಎಂಬ ಶ್ರುತಿವಾಕ್ಯವು ಈ ಮೇಲಿನ ಸೂತ್ರಕ್ಕೆ ಆಧಾರರೂಪ ವಾಗಿದೆ. ಮಹೋಪನಿಷತ್ತಿನಲ್ಲಿ "ಏಕೋಹವೈನಾರಾಯಣಆಸೀತ್ | ನಾರಾಯಣಾತ್ಪ್ರಾಣೋಜಾಯತೇ| ನಾರಾಯಣಾದ್ಬ್ರಹ್ಮಾಜಾಯತೇ | ನಾರಾಯಣಾದ್ರುದ್ರೋಜಾಯತೇ....|" ಇತ್ಯಾದಿ ಶ್ರುತಿವಾಕ್ಯಗಳಿಂದ ಗುಣವಿಗ್ರಹವಿಶಿಷ್ಟನಾದ ಶ್ರೀಮನ್ನಾರಾಯಣನೇ ಪರತತ್ವವೆಂದು ಸಿದ್ಧಿಸುವುದು.

**ವೇದಾಂತ ಸ್ಮೃತೀತಿಹಾಸಾದಿ ಶಾಸ್ತ್ರಗಳೇ ಪರಬ್ರಹ್ಮಜ್ಞಾನಕ್ಕೆ ಆಧಾರಗಳು :—**

ಈ ವಿಧವಾದ ಗುಣವಿಗ್ರಹವಿಶಿಷ್ಟನಾದ ಪರಬ್ರಹ್ಮನು ಎಲ್ಲಿಂದ ಉಂಟಾದನು ? ಹ್ಯಾಗೆ ಬಂದನು ? ಅವನ ಸ್ವರೂಪರೂಪ ಗುಣಾದಿ ಗಳೇನು ? ಇತ್ಯಾದಿ ಪ್ರಶ್ನೆಗಳು ಸಾಧಾರಣವಾಗಿ ಸರ್ವರಲ್ಲಿಯೂ ಪ್ರಥಮತಃ ಹೊರಡುವುವು.

ಪರಬ್ರಹ್ಮನ ಸ್ವರೂಪರೂಪಗುಣಾದಿಗಳನ್ನು ಹ್ಯಾಗೆ ಅರಿಯಬೇಕು ? ಇದಕ್ಕೆ ವೇದಾಂತ ಸ್ಮೃತೀತಿಹಾಸಾದಿ ಶಾಸ್ತ್ರಗಳನ್ನು ಓದಿ ತಿಳಿಯಬೇಕು. ಶಾಸ್ತ್ರಗಳಿಂದಲೇ ಪರಬ್ರಹ್ಮನ ಜ್ಞಾನವು ನಮಗೆ ಜನಿಸುವುದು. ಈ ಅರ್ಥವನ್ನೇ ಮೂರನೆಯ ಸೂತ್ರದಲ್ಲಿ "ಶಾಸ್ತ್ರಯೋನಿತ್ವಾತ್" ಎಂದರೆ

ಪರಬ್ರಹ್ಮನು ಶಾಸ್ತ್ರಗಳಿಂದ ನಮ್ಮ ಜ್ಞಾನಕ್ಕೆ ತೋರುವನು ಎಂದು ಹೇಳಿದೆ.

**ತ್ರಿವಿಧಪ್ರಮಾಣಗಳು :—**

ಪ್ರಮಾಣಗಳು ಮೂರು ವಿಧವಾಗಿರುವುವು—ಪ್ರತ್ಯಕ್ಷ, ಅನುಮಾನ, ಮತ್ತು ಶಬ್ದ.

ಪ್ರತ್ಯಕ್ಷ ಪ್ರಮಾಣಗಳು ಇಂದ್ರಿಯಗಳಿಗೆ ನೇರವಾಗಿ ಗೋಚರಿಸುವ ಪದಾರ್ಥಗಳು. ಇಂದ್ರಿಯಗಳಿಗೆ ಗೋಚರವಾದದ್ದನ್ನೆಲ್ಲಾ ನಾವು ನಂಬುತ್ತೇವೆ. ಎರಡನೆಯದಾದ ಅನುಮಾನವು ತರ್ಕದಿಂದ (from logic and reasoning) ಸಿದ್ಧಿಸುವ ವಿಷಯವು. ಇದನ್ನೂ ನಂಬುತ್ತೇವೆ. ಇದಕ್ಕೆ ಉದಾಹರಣೆಯಾಗಿ "ಹೊಗೆಯಿದ್ದ ಕಡೆಯಲ್ಲಿ ಬೆಂಕಿಯು ಇದ್ದೇಯಿರಬೇಕು" ಇತ್ಯಾದಿಗಳು.

ಆದರೆ, ಇವೆರಡು ಪ್ರಮಾಣಗಳಿಗೂ ಸಿಕ್ಕದಂತೆ ಬ್ರಹ್ಮಾಂಡದಲ್ಲಿ ಮನುಷ್ಯರಿಗೆ ಸಾಧ್ಯಾಂಶಗಳಾದ ಅನೇಕ ವಿಷಯಗಳಿರುತ್ತವೆ. ಮನುಷ್ಯನ ಪುಣ್ಯಪಾಪಗಳಿಗನುಸಾರವಾಗಿ ಸ್ವರ್ಗ-ನರಕಗಳೂ, ಯಾಗಹೋಮಾದಿಗಳಿಂದ ಉತ್ತಮಗಳಾದ ಪರಲೋಕಪ್ರಾಪ್ತಿಯೂ, ಬ್ರಹ್ಮೋಪಾಸನದಿಂದ ಮೋಕ್ಷವೂ ಉಂಟಾಗುವ ವಿಷಯವು ಪ್ರತ್ಯಕ್ಷಾನುಮಾನಾದಿ ಪ್ರಮಾಣಗಳಿಗೆ ಗೋಚರವಾಗುವುದಿಲ್ಲ. ಇವುಗಳನ್ನೆಲ್ಲಾ ನಮಗೆ ತಿಳಿಸುವುದು ವೇದಶಾಸ್ತ್ರವು. ಇದನ್ನೇ ಶಬ್ದಪ್ರಮಾಣವೆನ್ನುತ್ತಾರೆ. ವೇದಶಾಸ್ತ್ರದಲ್ಲಿ ಹೇಳಿರುವ ವಿಷಯಗಳನ್ನು ಪ್ರತ್ಯಕ್ಷಾನುಮಾನಾದಿ ಪ್ರಮಾಣರೀತ್ಯಾ ತರ್ಕಿಸಿ ತಿಳಿಯುವುದಕ್ಕಾಗುವುದಿಲ್ಲ. ವೇದಶಾಸ್ತ್ರಗಳಲ್ಲಿ ನಂಬಿಕೆಯೇ ಪ್ರಮಾಣವು. ಈ ನಂಬಿಕೆಯನ್ನೇ "ಆಸ್ತಿಕತ್ವ"ವೆಂದೂ ಇದನ್ನು ನಂಬದವರನ್ನು "ನಾಸ್ತಿಕ"ರೆಂದೂ ಹೇಳುವರು. ವೇದಶಾಸ್ತ್ರವೇ ಪರಬ್ರಹ್ಮಜ್ಞಾನಕ್ಕೆ ಕಾರಣವು.

ಈ ವಿಧವಾದ ಶಾಸ್ತ್ರಯೋನಿತ್ವವು ಬ್ರಹ್ಮಕ್ಕೆ ಇರುವುದು ಎಂಬ ವಿಷಯವನ್ನು ತಿಳಿಯಬೇಕಾದರೆ ಆ ಶಾಸ್ತ್ರಗಳನ್ನು ಓದಿ ಅಭ್ಯಾಸ

ಮಾಡಿದರೆ ತಿಳಿಯುವುದು. ಆ ಶಾಸ್ತ್ರಗಳು ಯಾವುವೆಂದರೆ—ವೇದಗಳು, ಸ್ಮೃತಿಗಳು, ಇತಿಹಾಸಗಳು ಮತ್ತು ಸಾತ್ವಿಕ ಪುರಾಣಗಳು. ಇವು ಗಳೆಲ್ಲಾ ಪರಬ್ರಹ್ಮನ ಸ್ವರೂಪಗುಣಾದಿಗಳನ್ನು ಪ್ರತಿಪಾದಿಸುವುವು. ಆದ್ದ ರಿಂದ ಪರಬ್ರಹ್ಮಕ್ಕೆ ಶಾಸ್ತ್ರಯೋನಿತ್ವವು ಸಮನ್ವಯಿಸುವುದು.

**ಬ್ರಹ್ಮಜ್ಞಾನವು ಭಗವತ್ಕೃಪೆಯಿಂದಲೇ ಲಭಿಸಬೇಕು:—**

ಪರಬ್ರಹ್ಮಜ್ಞಾನಕ್ಕೆ ವೇದಾಂತಶಾಸ್ತ್ರವೇ ಆಧಾರವೆಂದು ಸ್ಥಾಪಿಸಿದ ನಂತರ ಆ ವೇದಾಂತಶಾಸ್ತ್ರವ್ಯಾಸಂಗದಲ್ಲಿ ವಿದ್ವಾಂಸರಿಗೆ ಉಂಟಾಗ ಬಹುದಾದ ಅನೇಕ ಅನುಮಾನಗಳನ್ನು ಹೋಗಲಾಡಿಸಿ ನಿಜವಾದ ಜ್ಞಾನ ವನ್ನು ಮುಂದಿನ ಸೂತ್ರಗಳು ಸ್ಥಾಪಿಸುತ್ತವೆ.

ಶಾಸ್ತ್ರಜ್ಞಾನವು ಬಹಳ ಕಷ್ಟತಮವಾದದ್ದು. ವೇದವು ಅತ್ಯಂತ ಅಗಾಧವಾಗಿಯೂ, ಅರ್ಥಗಾಂಭೀರ್ಯಗರ್ಭಿತವಾಗಿಯೂ, ಸಾರಾಸಾರ ವಿವೇಕಿಗಳಲ್ಲದ ಇತರರಿಗೆ ಇದರ ಅರ್ಥವು ತಿಳಿಯಲಶಕ್ಯವಾಗಿಯೂ ಇರುವುದು. ವೇದವಾಕ್ಯಗಳು ಸುಲಭವಾಗಿ ಅರ್ಥವಾಗುವುದಿಲ್ಲ, ಒಂದು ವಿಷಯವನ್ನು ತಿಳಿಯಬೇಕಾದರೆ ಆ ವಿಷಯವಾಗಿ ವೇದವೇದಾಂತ ಸ್ಮೃತೀತಿಹಾಸ ಪುರಾಣಾದಿಗಳಲ್ಲೆಲ್ಲಾ ಎಲ್ಲೆಲ್ಲಿ ಯಾವಯಾವ ಕಡೆಯಲ್ಲಿ ಆ ವಿಷಯವು ಹೇಳಲ್ಪಟ್ಟಿರುವುದೋ ಅವುಗಳನ್ನೆಲ್ಲಾ ಸಂಪೂರ್ಣವಾಗಿ ಪರಿಶೀಲಿಸಿ ಆಯಾ ಅರ್ಥಗಳೆಲ್ಲವೂ ಸಮಂಜಸವಾಗುವಂತೆಯೇ ಅರ್ಥ ಮಾಡಬೇಕು. ಆ ಅರ್ಥವು ಬೇರೆ ವೇದವಾಕ್ಯಗಳ ಅರ್ಥಕ್ಕೆ ವಿರೋಧ ವಾಗಿ ಇರಕೂಡದು. ಇದರಿಂದ ವೇದಾರ್ಥವು ಎಷ್ಟು ಕಷ್ಟವೆಂಬುದು ವ್ಯಕ್ತವಾಗುವುದು. ಸಾಹಿತ್ಯವ್ಯಾಕರಣಾದಿಗಳಲ್ಲಿ ಪಾಂಡಿತ್ಯವನ್ನು ಪಡೆದ ಮಾತ್ರದಿಂದಲೇ ವೇದವಾಕ್ಯಗಳಿಗೆ ಅರ್ಥಮಾಡುವುದಕ್ಕಾಗುವುದಿಲ್ಲ.

"ನಾಯಮಾತ್ಮಾ ಪ್ರವಚನೇನಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ | ಯಮೇವೈಷಶ್ರುಣುತೇ ತೇನ ಲಭ್ಯಸ್ತಸ್ಯೈಷಾ ಆತ್ಮಾ ವಿವೃಣುತೇ ತನೂಂ ಸ್ವಾಂ ||" (ಕಠ. ಉ. ೧-೨-೨೩) ಎಂಬ ಶ್ರುತಿವಾಕ್ಯ ದಂತೆ ಭಗವದನುಗ್ರಹವಿಲ್ಲದಿದ್ದರೆ ವೇದಾಂತಶಾಸ್ತ್ರದ ನಿಜವಾದ ಅರ್ಥ

ವನ್ನು ಗ್ರಹಿಸುವುದಕ್ಕಾಗುವುದಿಲ್ಲ. ಸಾಮಾನ್ಯ ಜ್ಞಾನದ ಜೊತೆಗೆ ಭಗವದನುಗ್ರಹವೂ ಬ್ರಹ್ಮಜ್ಞಾನಕ್ಕೆ ಅವಶ್ಯಕವು ಎಂದು ಮೇಲಿನ ಶ್ರುತಿ ವಾಕ್ಯದಿಂದ ತಿಳಿಯತಕ್ಕದ್ದು.

ಈಗ ಸಾಧಾರಣವಾಗಿ ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಭಾಸ್ಕರ, ಯಾದವಪ್ರಕಾಶ, ಇತ್ಯಾದಿ ಅನೇಕ ಮತಗಳು ವೇದವಾಕ್ಯಗಳಿಗೆ ಬೇರೆ ಬೇರೆ ಅರ್ಥ ಕಲ್ಪನೆಗಳಿಂದ ಉಂಟಾಗಿವೆ. ಒಂದು ವಾಕ್ಯಕ್ಕೆ ಆ ವಾಕ್ಯವನ್ನು ಹೇಳಿದವನ ಅಭಿಪ್ರಾಯದಂತೆ ಒಂದು ಅರ್ಥವೇ ಇರಬೇಕೇ ವಿನಾ ಅನೇಕಾರ್ಥಗಳು ಇರಲಾರವು. ಸತ್ಯವಾದ ಆ ಒಂದು ಅರ್ಥವನ್ನು ಬಿಟ್ಟರೆ ಬೇರೆ ಅರ್ಥಗಳೆಲ್ಲಾ ಅಸತ್ಯಗಳು. ಹೀಗಿರುವಲ್ಲಿ ವೇದ ವಾಕ್ಯಗಳಿಗೆ ಬೇರೆ ಬೇರೆ ಅರ್ಥಗಳನ್ನು ಮಾಡಿದಷ್ಟೂ, ಅಷ್ಟು ಅಪಾರ್ಥಗಳು ವೃದ್ಧಿಯಾಗುತ್ತಾ ಬರುವುವೇ ವಿನಾ ನಿಜಾಂಶವು ತಿಳಿಯುವುದಿಲ್ಲ.

## ಶ್ರೀಭಾಷ್ಯಗ್ರಂಥೋತ್ಪತ್ತಿಗೆ ಕಾರಣವು :—

ಈ ರೀತಿಯಾದ ಅಪಾರ್ಥಗಳಿಂದ ತತ್ತ್ವವು ಮರೆಯಾಗಿದ್ದುದರಿಂದ ವೈಕುಂಠದಲ್ಲಿ ಬಿಜಯಮಾಡಿರುವ ಪರವಾಸುದೇವನಾದ ಶ್ರೀಮನ್ನಾರಾಯಣನು ತನ್ನ ಆದಿಶೇಷನನ್ನು ಭೂಲೋಕದಲ್ಲಿ ಅವತರಿಸಿ ವೇದವಾಕ್ಯಗಳಿಗೆ ಸರಿಯಾದ ಅರ್ಥವನ್ನೂ, ತದರ್ಥಾನುಸಾರವಾಗಿ ತತ್ತ್ವಸ್ವರೂಪವನ್ನೂ ಸ್ಥಾಪಿಸುವುದಕ್ಕಾಗಿ ನಿಯಮಿಸಿದ ಪ್ರಕಾರ, ಆದಿಶೇಷನು ಶ್ರೀಮತ್ ರಾಮಾನುಜಾಚಾರ್ಯರಾಗಿ ಅವತರಿಸಿ, ಬ್ರಹ್ಮಸೂತ್ರಗಳಿಗೂ ವೇದವಾಕ್ಯಗಳಿಗೂ ಸರಿಯಾದ ಅರ್ಥವನ್ನು ಹೇಳಿ ಶ್ರೀಭಾಷ್ಯಾದಿ ಗ್ರಂಥಗಳನ್ನು ರಚಿಸಿ ನಮಗೆ ಅನುಗ್ರಹಿಸಿದುದರಿಂದ ಆ ಭಾಷ್ಯಾದಿಗಳಲ್ಲಿರುವ ವಿಷಯಗಳೇ ಸತ್ಯವೆಂದೂ, ಅವರು ಹೇಳಿರುವ ಚಿದಚಿದ್ವಿಶಿಷ್ಟವಾದ ಪರಬ್ರಹ್ಮವೇ ಪರತತ್ತ್ವವೆಂದೂ ಸಿದ್ಧಾಂತವು.

ಈ ರೀತಿಯಾಗಿ ಸಿದ್ಧಾಂತವನ್ನು ಸ್ಥಾಪಿಸುವ ಕಾಲದಲ್ಲಿ ಭಾಸ್ಕರಾದಿ ಮತಸ್ಥಾಪಕಾಚಾರ್ಯರುಗಳು ವೇದವಾಕ್ಯಗಳಿಗೆ ತಮ್ಮ ತಮ್ಮ ಬುಧ್ಯನುಸಾರವಾಗಿ ಹೇಳಿರುವ ಅರ್ಥಗಳಲ್ಲಿ ತಪ್ಪಾಗಿರುವ ಸ್ಥಳಗಳಲ್ಲಿ ಅವರುಗಳು

ಹೇಳಿರುವ ಅರ್ಥಗಳನ್ನು ಖಂಡಿಸಿ ವೇದವಾಕ್ಯಪ್ರಮಾಣದಿಂದಲೇ ಅವುಗಳನ್ನು ತರ್ಕಿಸಿ ಸರಿಯಾದ ಅರ್ಥವನ್ನು ಸ್ಥಾಪಿಸಬೇಕಾದ್ದರಿಂದ ತಮ್ಮ ಶ್ರೀಭಾಷ್ಯ ಗ್ರಂಥದಲ್ಲಿ ಶ್ರೀಮದ್ರಾಮಾನುಜಾಚಾರ್ಯರು ಮುಖ್ಯವಾಗಿ ಈ ಕಾರ್ಯವನ್ನೇ ನಡೆಯಿಸಿ ತಮ್ಮ ಸಿದ್ಧಾಂತವನ್ನು ಸ್ಥಾಪಿಸಿರುತ್ತಾರೆ. ಸಿದ್ಧಾಂತಗಳಿಗೆ ಅವಶ್ಯಕವಾದ ವಿಷಯಗಳೊಂದೊಂದನ್ನೂ ವಿಷಯ, ಸಂಶಯ, ಪೂರ್ವಪಕ್ಷ, ಸಿದ್ಧಾಂತ, ಪ್ರಯೋಜನಗಳೆಂಬ ಐದು ಅಂಶಗಳೊಡನೆ ತರ್ಕಿಸಿ ಒಂದೊಂದು ವಿಷಯವನ್ನೂ ಸಂಪೂರ್ಣವಾದ ಸಂಶಯ ನಿವೃತ್ತಿಪೂರ್ವಕವಾಗಿ ಸ್ಥಾಪಿಸಿರುತ್ತಾರೆ. ಈ ತರ್ಕಭಾಗಗಳೆಲ್ಲಾ ನಮಗೆ ತಿಳಿದುಕೊಳ್ಳಲು ಅವಶ್ಯಕವಾದರೂ ಸಾರಾಂಶವನ್ನು ಮಾತ್ರ ಸಂಗ್ರಹಿಸಿ ಬರೆಯಬೇಕೆಂದಿರುವ ಈ ಗ್ರಂಥದಲ್ಲಿ ಸ್ಥಳಸಂಕೋಚದಿಂದ ಅವುಗಳನ್ನು ಬಿಟ್ಟು ಸಾಧಾರಣವಾಗಿ ಎಲ್ಲರಿಗೂ ತಿಳಿಯುವಂತೆ ಮುಖ್ಯವಾದ ವಿಷಯಗಳನ್ನು ಮಾತ್ರ ಸಂಗ್ರಹಿಸಿ ಬರೆದಿದೆ.

**ತತ್ವತ್ರಯವು:** ಅಚಿತ್ ಎಂದರೆ ಮೂಲಪ್ರಕೃತಿ ಮತ್ತು ಅದರ ಪರಿಣಾಮಗಳು, ಚಿತ್ ಎಂದರೆ ಜೀವಾತ್ಮರು, ಮತ್ತು ಈಶ್ವರ ಎಂದರೆ ಪರಬ್ರಹ್ಮ, ಎಂದು ಮೂರು.

"ಸದೇವಸೋಮ್ಯೇದಮಗ್ರಆಸೀತ್" (ಛಾಂ. ೬-೨-೧) ಎಂಬ ಶ್ರುತಿವಾಕ್ಯರೀತ್ಯಾ ಪರಬ್ರಹ್ಮನೊಬ್ಬನೇ ಮೊದಲು ಇದ್ದನು ಎಂದು ಅರ್ಥವಾಗುವುದು. ಆದರೆ ಶ್ರುತಿವಾಕ್ಯರೀತ್ಯಾ ಆತ್ಮರು (ಜೀವಾತ್ಮರು) ಗಳು ಶಾಶ್ವತರು, ಅವರಿಗೆ ಜನನಮರಣಗಳಿಲ್ಲವು, ಅವರು ಅನೇಕರು, ಜ್ಞಾನಸ್ವರೂಪರು ಇತ್ಯಾದಿ ಗುಣಗಳುಳ್ಳವರೆಂದು ಹೇಳಿರುವುದರಿಂದ ಅವರೂ ಅನಾದಿಯಾಗಿಯೇ ಇರುತ್ತಿರುವರು ಎಂದು ಶ್ರುತಿವಾಕ್ಯಾಧಾರದಿಂದಲೇ ತಿಳಿದು ಬರುವುದು.

ಪ್ರಕೃತಿಯೂ ಕೂಡ ಲಯಕಾಲದಲ್ಲಿ ಅವಿಭಕ್ತತಮಸ್ಸ್ವರೂಪದಿಂದ ಪರಬ್ರಹ್ಮನಲ್ಲಿ ಲಯಿಸಿದ್ದು ಸೃಷ್ಟಿಕಾಲದಲ್ಲಿ ಸ್ಥೂಲಪ್ರಪಂಚರೂಪವಾಗುವುದು. ಇದು ಶಾಶ್ವತವಾಗಿಯೂ, ಅನೇಕ ರೂಪ ಮತ್ತು ಗುಣ

ಗಳುಳ್ಳದ್ದಾಗಿಯೂ, ಕಾಲಾನುಗುಣವಾಗಿ ಯಾವಾಗಲೂ ಸ್ವರೂಪದಲ್ಲಿ ಬದಲಾವಣೆಗಳನ್ನು ಹೊಂದುತ್ತಿರುವುದಾಗಿಯೂ, ಶಾಸ್ತ್ರಪ್ರಮಾಣದಿಂದ ತಿಳಿಯಲ್ಪಡುವುದು.

## ಮೂಲಪ್ರಕೃತಿ ಜಗತ್ಕಾರಣತ್ವಖಂಡನ:—

ಒಂದು ಮತದವರು "ಮೂಲಪ್ರಕೃತಿಯೇ ಜಗತ್ಕಾರಣ ವಸ್ತು" ಎಂದು ಅಲ್ಲಲ್ಲಿ ಹೇಳಿರುವ ಶ್ರುತಿವಾಕ್ಯಗಳಿಂದ ವಾದಿಸುವರು. ಇನ್ನೊಂದು ಮತದವರು ಹೀಗೆಯೇ ಬೇರೆ ಕೆಲವು ಶ್ರುತಿವಾಕ್ಯಗಳನ್ನು ಹೇಳಿ ಆತ್ಮವೇ ಜಗತ್ಕಾರಣವಸ್ತು ಮತ್ತು ಪರಬ್ರಹ್ಮವೇ ಆ "ಆತ್ಮ" ವೆಂದು ಕರೆಯು ಲ್ಪಟ್ಟು ಮಾಯಾವೃತವಾಗಿ ಅನೇಕ ಆತ್ಮರುಗಳಾಗಿ ಪ್ರತಿಬಿಂಬಿಸ ತ್ತದೆ ಇತ್ಯಾದಿಯಾಗಿ ಹೇಳುತ್ತಾರೆ. ಮೂಲಪ್ರಕೃತಿಯೇ ಜಗತ್ಕಾರಣ ವಸ್ತುವೆಂದು ಕಪಿಲ ಮತವು. ಈ ಕೆಳಗೆ ವಿವರಿಸಿರುವ ಸಮಾಧಾನ ಗಳಿಂದ ಮೂಲಪ್ರಕೃತಿಯು ಜಗತ್ಕಾರಣವಸ್ತುವಾಗಲಾರದು ಎಂದು ಸಿದ್ಧಾಂತಮಾಡಲ್ಪಡುತ್ತದೆ. "ಸದೇವಸೋಮ್ಯೇದಮಗ್ರಆಸೀತ್" (ಛಾಂ. ಉ. ೬-೨-೧) ಎಂದರೆ "ಸತ್" ಎಂಬುದೇ ಮೊದಲು ಇದ್ದಿತು. "ತದೈಕ್ಷತಬಹುಸ್ಯಾಂ" (ಛಾಂ. ಉ. ೬-೨-೩) ಎಂದರೆ ಅದು ತಾನು ಬಹುವಾಗಬೇಕೆಂದು ಇಚ್ಛಿಸಿತು. ಇತ್ಯಾದಿ ಶ್ರುತಿವಾಕ್ಯಗಳಿಂದ ಮೊಟ್ಟ ಮೊದಲು ಇದ್ದದ್ದು "ಸತ್" ಎಂಬುದು. ಅದು ತಾನು ಬಹುವಾಗ ಬೇಕೆಂದು ಇಚ್ಛಿಸಿ ಜಗತ್ತಾಗಿ ಪರಿಣಮಿಸಿತು. ಎಂದು ಸತ್ತಾದ ಪದಾರ್ಥವೂ ಅದಕ್ಕೆ "ಇಚ್ಛೆ" ಎಂಬ ಸಂಕಲ್ಪ ರೂಪಜ್ಞಾನವೂ ಶ್ರುತಿ ಯಲ್ಲಿ ಹೇಳಿರುವುದರಿಂದಲೂ, ಮತ್ತು "ಇಚ್ಛೆ"ಯು ಚೇತನನ ಗುಣ ವಾದ್ದರಿಂದಲೂ ಜಡವಾಗಿರುವ ಮೂಲಪ್ರಕೃತಿಯು ಜಗತ್ಕಾರಣವಾಗ ಲಾರದು.

"ಐತದಾತ್ಮ್ಯಮಿದಂಸರ್ವಂ ತತ್ಸತ್ಯಂ ಸ ಆತ್ಮಾ" (ಛಾಂ. ಉ. ೬-೮-೭) ಎಂದು ಈ ಪ್ರಪಂಚಕ್ಕೆ ಸಚ್ಛಬ್ದವಾಚ್ಯನು "ಆತ್ಮಾ" ಎಂದು ಹೇಳಿರುವುದರಿಂದಲೂ ಆತ್ಮನು ಚೇತನಸ್ವರೂಪನಾದ್ದರಿಂದಲೂ,

ಅಚೇತನವಾದ ಮೂಲಪ್ರಕೃತಿಗೆ (ಅಂದರೆ ಪ್ರಧಾನಕ್ಕೆ) ಜಗತ್ಕಾರಣತ್ವವು ಕೂಡುವುದಿಲ್ಲ.

"ತಸ್ಯತಾವದೇವಚಿರಂ ಯಾವನ್ನ ವಿಮೋಕ್ಷ್ಯೆ" (ಛಾಂ. ಉ. ೬-೧೪-೨) ಎಂದು ಜಗತ್ಕಾರಣವಾದ ಸಚ್ಛಬ್ದ ವಾಚ್ಯವಾದ ಜಗತ್ಕಾರಣ ವಸ್ತುವನ್ನು ಉಪಾಸಿಸಿದವರಿಗೆ ಮೋಕ್ಷಪ್ರಾಪ್ತಿಯು ಫಲವಾಗಿ ಹೇಳಿದೆ. ಅಚೇತನವಾದ ಮೂಲಪ್ರಕೃತಿಯ ಸಂಬಂಧದಿಂದ ಸಂಸಾರವೇ ವೃದ್ಧಿಯಾಗುವುದಲ್ಲದೆ ಮೂಲಪ್ರಕೃತಿಗೆ ಮೋಕ್ಷಪ್ರದಾನಶಕ್ತಿಯು ಇಲ್ಲದ್ದರಿಂದ ಪ್ರಧಾನಕ್ಕೆ ಜಗತ್ಕಾರಣತ್ವವು ಕೂಡುವುದಿಲ್ಲ.

"ಯೇನಾ ಶ್ರುತಂ ಶ್ರುತಂ ಭವತಿ" (ಛಾಂ. ಉ. ೬-೧-೩) ಎಂದರೆ ಯಾವನನ್ನು (ಎಂದರೆ ಆ ಪರಬ್ರಹ್ಮನನ್ನು) ತಿಳಿದರೆ ಸಮಸ್ತವೂ ತಿಳಿದಂತಾಗುವುದು ಎಂದು ಅರ್ಥವು. ಪರಬ್ರಹ್ಮನನ್ನು ತಿಳಿದರೆ ಅವನಿಂದ ಸೃಷ್ಟಿಸಲ್ಪಟ್ಟ ಸಮಸ್ತ ಚಿದಚಿತ್ತುಗಳೂ ತಿಳಿಯುವುವು. ಆಗ ಸಮಸ್ತವೂ ತಿಳಿದಂತಾಗುವುದು. ಆದರೆ ಇವುಗಳಲ್ಲಿ "ಅಚಿತ್ತು" ಒಂದನ್ನು ಮಾತ್ರ ತಿಳಿದರೆ "ಆತ್ಮ"ನ ಸಮಾಚಾರವು ತಿಳಿಯಲಾರದು. ಆದ್ದರಿಂದ ಈ ಮೇಲಿನ ಪ್ರತಿಜ್ಞಾವಾಕ್ಯದಿಂದ ಪ್ರಧಾನವು ಜಗತ್ಕಾರಣವಾಗಲಾರದು.

"ಯತ್ರೈತತ್ಪುರುಷಃ ಸ್ವಪಿತಿ" (ಛಾಂ. ಉ. ೬-೮-೧) ಎಂದರೆ ಜೀವಾತ್ಮನು ಸುಷುಪ್ತಿಯಲ್ಲಿ ತನ್ನ ಕಾರಣವಸ್ತುವಿನಲ್ಲಿ ಲಯಿಸುವುದು ಎಂದು ಅರ್ಥವು. ಚೇತನಸ್ವರೂಪನಾದ ಜೀವನಿಗೆ ಅಚೇತನವಾದ ಪ್ರಧಾನವು ಕಾರಣವಾಗಲಾರದಾದ್ದರಿಂದ ಪ್ರಧಾನವು ಸಚ್ಛಬ್ದವಾಚ್ಯವಾಗಲಾರದು.

ಇತ್ಯಾದಿ ಇನ್ನೂ ಅನೇಕ ಶ್ರುತಿವಾಕ್ಯಗಳ ಆಧಾರದಿಂದ ಅಚಿತ್ತಾದ ಮೂಲಪ್ರಕೃತಿಯು ಜಗತ್ಕಾರಣವಾಗಲಾರದು ಎಂದು ಸಿದ್ಧಾಂತ ಮಾಡಲ್ಪಟ್ಟಿದೆ.

**ಜೀವಾತ್ಮ ಜಗತ್ಕಾರಣತ್ವಖಂಡನ :—**

ಕೆಳಗೆ ಜೀವಾತ್ಮನಿಗೆ ಜಗತ್ಕಾರಣತ್ವವು ಖಂಡಿಸಲ್ಪಡುವುದು.

"ಆತ್ಮಾವಾ ಇದಮೇಕ ಏವಾಗ್ರ ಆಸೀತ್" (ಐ. ಉ. ೧-೧-೧) ಎಂದರೆ ಎಲ್ಲಕ್ಕಿಂತಲೂ ಮೊದಲು "ಆತ್ಮ"ವೊಂದೇ ಇದ್ದಿತು. ಎಂಬ ಶ್ರುತಿವಾಕ್ಯವನ್ನೇ ಆಧಾರವಾಗಿ ಇಟ್ಟುಕೊಂಡು ಜೀವಾತ್ಮನು ಯಾತಕ್ಕೆ ಜಗತ್ಕಾರಣನಾಗಬಾರದು? ಜೀವಾತ್ಮನು ಶಾಶ್ವತನಾಗಿಯೂ, ಆನಂದ ಸ್ವರೂಪನಾಗಿಯೂ, ಚೇತನಸ್ವರೂಪನಾಗಿಯೂ, ಇರುವುದರಿಂದ ಶಾಶ್ವತ, ಆನಂದಮಯ, ಸತ್ ಇತ್ಯಾದಿ ಪರಬ್ರಹ್ಮನಿರೂಪಕವಾದ ಗುಣಗಳೆಲ್ಲಾ ಆತ್ಮನಲ್ಲಿರುವುದರಿಂದ ಜಗತ್ಕಾರಣತ್ವವು ಸಮನ್ವಯಿಸಬೇಕಲ್ಲವೇ ಎಂದು ವಾದಿಸಬಹುದು. ಇದಕ್ಕೆ ಕೆಳಗೆ ಸಮಾಧಾನವು ಹೇಳಲ್ಪಡುವುದು.

ತೈತ್ತಿರಿಯೋಪನಿಷತ್ತಿನಲ್ಲಿ (೨-೮....) ''ಸೈಷಾನಂದಸ್ಯ ಮೀಮಾ ಗ್ಂಸಾಭವತಿ...'' ಎಂದು ಆರಂಭಿಸಿ "ಯತೋ ವಾಚೋ ನಿವರ್ತಂತೆ" ಎಂಬ ಶ್ರುತಿವಾಕ್ಯರೀತ್ಯಾ ಜೀವನಲ್ಲಿರುವ ಆನಂದಪ್ರಮಾಣವನ್ನು ಆರಂಭಿಸಿ ಒಂದು ಜೀವನ ಆನಂದಕ್ಕಿಂತ ಚತುರ್ಮುಖಬ್ರಹ್ಮನ ಆನಂದವು ಅನೇಕ ಸಹಸ್ರಲಕ್ಷ ಕೋಟಿಯಷ್ಟು ಇರುವುದೆಂದು ಹೇಳಿ ನಂತರ ಪರಬ್ರಹ್ಮನ ಆನಂದವು ವಾಕ್ಕಿನಿಂದ ವರ್ಣಿಸಲಶಕ್ಯವು ಎಂದು ಹೇಳಿದೆ. ಜೀವನ ಆನಂದವು ಅತ್ಯಲ್ಪವಾಗಿ (ಕೋಟಿಸೂರ್ಯಪ್ರಕಾಶದ ಮುಂದೆ ಮಿಂಚಿನ ಹುಳುವಿನ ಪ್ರಕಾಶದಷ್ಟು) ಇರುವುದರಿಂದ ಜೀವಾತ್ಮನಿಗೆ "ಆನಂದ ಮಯ" ಎಂಬ ಪಟ್ಟವೂ ತದನುರೂಪವಾದ ಜಗತ್ಕಾರಣತ್ವವೂ ಸಿದ್ಧಿಸು ವುದಿಲ್ಲ. ಅದೂ ಅಲ್ಲದೆ ''ಏಷಹ್ಯೇವಾನಂದಯಾತಿ" (ತೈ. ಉ. ೨-೭-೧) ಎಂದರೆ ಜೀವನ ಆನಂದಕ್ಕೆ ಜಗತ್ಕಾರಣನಾದ ಆ ಪರಬ್ರಹ್ಮನೇ ಕಾರಣನು ಎಂದು ಹೇಳಿದೆ. ಇದರಿಂದ ಲಾದರೂ ಈ ದುರನುಮಾನವು ಬಿಟ್ಟುಹೋಗಬೇಕು.

---

**ಚತುರ್ಮುಖಬ್ರಹ್ಮನ ಆನಂದವು ಮನುಷ್ಯನ ಆನಂದದ ೧೦೦೦೦೦೦೦೦೦೦೦೦೦೦೦೦೦೦೦೦೦ ರಷ್ಟು ಇರುವುದಾಗಿ ಹೇಳಿದೆ.**

ಮುಕ್ತನಾದ ಜೀವನ ಆನಂದವು ಚತುರ್ಮುಖನ ಆನಂದಕ್ಕಿಂತಲೂ ಅತ್ಯಧಿಕವಾಗಿರುವುದೆಂದು ಶಾಸ್ತ್ರಪ್ರಮಾಣವಿರುವುದರಿಂದ ಅವನು (ಎಂದರೆ ಆಮುಕ್ತನು) ಜಗತ್ಕಾರಣನಾಗಬಾರದೇಕೆ ಎಂದರೆ, ಮುಕ್ತನು ಮೊದಲು ಅಜ್ಞಾನಕರ್ಮವಾಸನೆಗಳಲ್ಲಿ ಮುಗ್ನನಾಗಿದ್ದು ಆಕಸ್ಮಿಕ ಭಗವತ್ಕಟಾಕ್ಷ ದಿಂದ ಜ್ಞಾನಶಕ್ತ್ಯಾದಿಗಳು ಅಭಿವೃದ್ಧಿಯಾಗಿ, ಅಂತ್ಯದಲ್ಲಿ ಮುಕ್ತನಾಗಿರು ವುದೂ ಆ ಪರಬ್ರಹ್ಮನ ಅನುಗ್ರಹದಿಂದಲೇ ಆದ್ದರಿಂದ, ಮುಕ್ತನು "ಆನಂದಮಯ" ವಾಚ್ಯನಾಗಲಾರನು. ಅದರಿಂದ ಜಗತ್ಕಾರಣನೂ ಆಗಲಾರನು.

"ಏತಮಿತಃ ಪ್ರೇತ್ಯಾಭಿ ಸಂಭವಿತಾಸ್ಮಿ" (ಛಾಂ. ಉ. ೩-೧೪-೪) ಎಂದರೆ ಮರಣಾನಂತರದಲ್ಲಿ ನಾನು ಪರಬ್ರಹ್ಮನಲ್ಲಿ ಸೇರುತ್ತೇನೆ ಎಂದು ಜೀವನನ್ನು ಪ್ರಾಪ್ತೃವಾದವನನ್ನಾಗಿಯೂ, ಪರಬ್ರಹ್ಮನನ್ನು ಪ್ರಾಪ್ಯ ನನ್ನಾಗಿಯೂ, ಶ್ರುತಿಯು ಹೇಳುವುದರಿಂದ ಜೀವನು ಜಗತ್ಕಾರಣನಾದ ಪರಬ್ರಹ್ಮನಾಗಲಾರನು.

"ಏಷ ಆತ್ಮಾಽನ್ತರ್ಹೃದಯೇ" (ಛಂ. ಉ. ೩-೧೪-೩) ಎಂದರೆ ಜೀವನ ಹೃದ್ಗತನಾದ ಪರಮಾತ್ಮನು ಎಂದು ಪರಮಾತ್ಮನನ್ನು ಜೀವನಿಂದ ಬೇರೆಯಾಗಿ ಅವನ ಅಂತರಾತ್ಮನನ್ನಾಗಿ ಹೇಳಿರುವುದರಿಂದಲೂ, "ಯ ಆತ್ಮನಿ ತಿಷ್ಠನ್ನಾತ್ಮನೋಽನ್ತರೋಯಂ ಮಾತ್ಮಾನವೇದ ಯಸ್ಯಾತ್ಮಾ ಶರೀರಂ ಯ ಆತ್ಮಾನಮನ್ತರೋ ಯಮಯತ್‌ಸತ ಆತ್ಮಾಽನ್ತರ್ಯಾ ಮ್ಯಮೃತಂ" (ಬೃ. ಉ. ೩-೭-೨೨) ಎಂಬ ಶ್ರುತಿವಾಕ್ಯರೀತ್ಯಾ ಎಂದರೆ ಯಾರು ಆತ್ಮನಲ್ಲಿ ಅಂತರ್ಯಾಮಿಯಾಗಿ ಆ ಆತ್ಮನಿಗೆ ಆಧಾರವಾಗಿರುವನೋ ಮತ್ತು ಯಾವನನ್ನು ಆತ್ಮವೂ ಅರಿಯಲಾರದೋ ಈ ಆತ್ಮನಿಗೂ ಸ್ವರೂಪಾವಿರ್ಭಾವಕನಾದವನು ಪರಮಾತ್ಮನು ಎಂದು ವ್ಯಕ್ತವಾಗುವುದು.

ಈ ಮೇಲಿನ ಶ್ರುತಿಪ್ರಮಾಣಗಳಿಂದ ಜೀವನು ಜಗತ್ಕಾರಣನಾಗ ಲಾರನು ಎಂಬುದು ಸಿದ್ಧಿಸುವುದು.

ಆದರೆ ಸಾಧಾರಣ ಜೀವರುಗಳ ಆತ್ಮವನ್ನು ಬಿಟ್ಟು ಅಸಾಧಾರಣ ಸ್ವರೂಪನಾದ ಸೂರ್ಯನ ಆತ್ಮವು ಜಗತ್ಕಾರಣವಾಗಬಾರದೇ ಎಂದು ಶಂಕಿಸಿ

ದ್ದೇಯಾದರೆ—“ ಯ ಆದಿತ್ಯೇ ತಿಷ್ಠನ್ ಆದಿತ್ಯಾದನ್ತರೋಯ ಮಾದಿತ್ಯೋನವೇದ ಯಸ್ಯಾದಿತ್ಯ ಶರೀರಂ...” (ಬೃ. ಉ. ೩-೭-೯)ಎಂಬ ಶ್ರುತಿವಾಕ್ಯರೀತ್ಯಾ ಆ ಆದಿತ್ಯನಿಗೂ ಆತ್ಮನಾಗಿ ಅವನ ಸ್ಥಿತಿಗತಿಗಳಿಗೂ ಪರಬ್ರಹ್ಮನು ಕಾರಣನಾದ್ದರಿಂದ ಸೂರ್ಯನು ಜಗತ್ಕಾರಣನಾಗಲಾರನು.

ಇದೇ ರೀತಿಯಿಂದ ಬ್ರಹ್ಮರುದ್ರೇಂದ್ರಾದಿಗಳನ್ನೂ ಗ್ರಹಿಸತಕ್ಕದ್ದು. ಇದರಿಂದ ಪರಬ್ರಹನೊಬ್ಬನೇ ಜಗತ್ಕಾರಣ ವಸ್ತುವೆಂಬುದು ಸಿದ್ಧಿಸುವುದು.

**ಪರಬ್ರಹ್ಮನ ಪರವಾಗಿ ಉಪಯೋಗಿಸಲ್ಪಡುವ ಕೆಲವು ಪದಗಳ ಅರ್ಥವು :—**

ಶ್ರುತಿವಾಕ್ಯಗಳನ್ನು ಓದುವಾಗ ಕೆಲವು ಕಡೆಗಳಲ್ಲಿ ಆಕಾಶ, ಪ್ರಾಣ, ಜ್ಯೋತಿ, ಗಾಯಿತ್ರಿದೇವತೆ, ವೈಶ್ವಾನರ, ದ್ಯುಭ್ವಾದ್ಯಾಯತನ (ಎಂದರೆ ಭೂಲೋಕ ಸ್ವರ್ಗಲೋಕಗಳಿಗೆ ಆಧಾರನು), ಭೂಮಾ, ಅಕ್ಷರ (ಎಂದರೆ ಪ್ರಕೃತಿ), ದಹರ ಇತ್ಯಾದಿ ಪದಗಳು ಪರಮಾತ್ಮಪರಗಳಾಗಿ ಉಪಯೋಗಿಸಲ್ಪಟ್ಟು ಆಯಾ ಹೆಸರಿನಿಂದಲೇ ಉಪಾಸನೆಗಳು ವಿಧಿಸಲ್ಪಟ್ಟಿವೆ. ಇವು ಪರಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಭೂತಾತಿಗಳ ಹೆಸರಾದ್ದರಿಂದ ಈ ಉಪಾಸನೆಗಳೂ ಆಯಾ ದೇವತೆಗಳಿಗೆ ಸಂಬಂಧಪಟ್ಟವುಗಳೋ ಅಥವಾ ಅವು ಪರಮಾತ್ಮಪರವಾದ ಉಪಾಸನವೋ ಎಂಬ ಅನುಮಾನವು ಉಂಟಾಗುವುದು.

ಭಗವದ್ಗೀತೆಯಲ್ಲಿ

ಯೋ ಯೋ ಯಾಂಯಾಂ ತನುಂಭಕ್ತಃ | ಶ್ರದ್ಧಯಾರ್ಚಿತುಮಿಚ್ಛತಿ |
ತಸ್ಯತಸ್ಯಾಚಲಾಂಶ್ರದ್ಧಾಂ | ತಾಮೇವ ವಿದಧಾಮ್ಯಹಂ || (೭-೨೧)
ಸತಯಾ ಶ್ರದ್ಧಯಾ ಯುಕ್ತ | ಸ್ತಸ್ಯಾರಾಧನ ಮಾಹತೇ |
ಲಭತೇಚತತಃ ಕಾಮಾನ್ | ಮಯೈವ ವಿಹಿತಾನ್ಹಿತಾನ್ || (೭-೨೨)
ಅಂತವತ್ತು ಫಲಂ ತೇಷಾಂ | ತದ್ಭವತ್ಯಲ್ಪಮೇಧಸಾಂ |
ದೇವಾನ್ ದೇವಯಜೋಯಾಂತಿ | ಮದ್ಭಕ್ತಾಯಾಂತಿಮಾಮಪಿ ||
(೭-೨೩)

ಎಂದು ಶ್ರೀಕೃಷ್ಣನು ಚರಾಚರಗಳಲ್ಲಿಯೂ ನಾನು ಅಂತರ್ಯಾಮಿಯಾಗಿರುವುದರಿಂದ ಸಮಸ್ತ ದೇವತೆಗಳ ಆರಾಧನೆಗಳೂ ನನ್ನನ್ನೇ ಸೇರುತ್ತವೆ.

ಉಪಾಸಕನು ಆರಾಧಿಸುವ ದೇವತೆಗಳಲ್ಲಿ ಕಾಮ್ಯಫಲಾಪೇಕ್ಷೆಯಿಂದ ಆಯಾ ದೇವತೆಗಳನ್ನು ಆರಾಧಿಸಿದರೆ ನನ್ನ ಅನುಗ್ರಹದಿಂದ ಅವನು ಆಯಾ ದೇವತೆಗಳ ಲೋಕವನ್ನೇ ಸೇರುವನು. ಫಲಾಪೇಕ್ಷಾರಹಿತನಾಗಿ ಆಯಾ ದೇವತೆಗಳಲ್ಲಿ ಅಂತರ್ಯಾಮಿಯಾಗಿರುವ ನನ್ನನ್ನೇ ಭಜಿಸಿದವನಿಗೆ ನನ್ನ ಅನುಗ್ರಹದಿಂದ ಅಂತ್ಯದಲ್ಲಿ ಮೋಕ್ಷವೂ ದೊರಕುವುದು ಎಂದು ಸೂಚಿಸಿರುವನು.

ಈ ಭಗವದ್ಗೀತಾ ಶ್ಲೋಕದ ಅರ್ಥವನ್ನೇ ಬ್ರಹ್ಮಸೂತ್ರದಲ್ಲಿ ಸಿದ್ಧಾಂತಮಾಡಿದೆ. ಈ ಹೆಸರುಗಳಲ್ಲಿ ಎರಡನ್ನು ಕೆಳಗೆ ವಿವರಿಸಿದೆ.

**ಆಕಾಶ :—**

"ಅಸ್ಯಲೋಕಸ್ಯಕಾಗತಿರಿತಿ ಆಕಾಶ ಇತಿ ಹೋವಾಚಸರ್ವಾಣಿ-ಹವಾ ಇಮಾನಿ ಭೂತಾನ್ಯಾಕಾಶದೇವ ಸಮುತ್ಪದ್ಯನ್ತೇಆಕಾಶಂಪ್ರತ್ಯಸ್ತಂಯನ್ತಿ ಆಕಾಶೋಹ್ಯೇವೈಭ್ಯೋಜ್ಯಾಯಾನಾಕಾಶಃ ಪರಾಯಣಮಿತಿ" (ಛಾಂ. ಉ. ೧-೯-೧) ಎಂಬ ವಾಕ್ಯದಲ್ಲಿ ಹೇಳಿರುವ ಆಕಾಶವು ಭೂತಾಕಾಶವೋ ಎಂದು ಸಂಶಯವುಂಟಾಗಬಹುದು. ಆದರೆ, ಅಚೇತನವಾದ ಆಕಾಶವು ಪರಬ್ರಹ್ಮವಾಗಲಾರದು. ಈ ಶ್ರುತಿವಾಕ್ಯದಲ್ಲಿ ಆಕಾಶಕ್ಕೆ ಪರಮಾತ್ಮನ ಲಕ್ಷಣಗಳನ್ನು ಹೇಳಿರುವುದರಿಂದ ಆಕಾಶಶಬ್ದವಾಚ್ಯನು ಪರಬ್ರಹ್ಮನೇ. "ಆಸಮಂತಾತ್ಕಾಶತೆ" ಎಂಬ ವ್ಯುತ್ಪತ್ತಿಯಿಂದ ಅಪರಿಚ್ಛಿನ್ನ ಸ್ವಪ್ರಕಾಶನೆಂಬ ಅರ್ಥದಿಂದ ಪರಮಾತ್ಮನು ಆಕಾಶಶಬ್ದವಾಚ್ಯನಾಗಿ ಹೇಳಲ್ಪಡುವನು.

**ಪ್ರಾಣ :—**

ಮೇಲೆ ಹೇಳಿದ ಕಾರಣದಿಂದಲೇ "ಪ್ರಾಣ" ಶಬ್ದವೂ ಪರಬ್ರಹ್ಮನ ಗುಣಗಳನ್ನು ಅದಕ್ಕೆ ಉಪಯೋಗಿಸಿದಾಗ ಅದು ಪರಮಾತ್ಮಪರವಾಗುವುದು.

"ಸರ್ವಾಣಿಹವಾ ಇಮಾನಿ ಭೂತಾನಿ ಪ್ರಾಣಮೇವಾಭಿಸಂವಿಶನ್ತಿ" (ಛಾಂ. ಉ. ೧-೯- ) ಇತ್ಯಾದಿ ಶ್ರುತಿವಾಕ್ಯಗಳಿಂದ ಪ್ರಾಣವು ಹ್ಯಾಗೆ

ಮಿತ್ವವಿಲ್ಲದಿದ್ದರೆ ಜೀವರಿಗಾಗಲೀ, ಪ್ರಕೃತಿಗಾಗಲೀ ತಮ್ಮ ಸ್ವರೂಪಮತ್ತು ಸತ್ತೆಗಳು ಇಲ್ಲವು. ಅವುಗಳ ಇರುವಿಕೆಯೇ ಪರಬ್ರಹ್ಮನ ಅಂತರ್ಯಾಮಿತ್ವ ದಿಂದ ಉಂಟಾಗಿರುವುದು. ಆದ್ದರಿಂದ ಪರಬ್ರಹ್ಮನು ಇವುಗಳಿಗೆ ಆತ್ಮ ನಾಗಿಯೂ ಕಾರಣನಾಗಿಯೂ ಇರುವನು. ಸೂರ್ಯನಿಲ್ಲದಿದ್ದರೆ ಅವನ ಕಿರಣಗಳಿಗೆ ಹ್ಯಾಗೆ ಇರುವಿಕೆಯೇ ಇಲ್ಲವೋ ಹಾಗೆಯೇ ಪರಬ್ರಹ್ಮನಿಲ್ಲದೆ ಚಿದಚಿತ್ತುಗಳಿಗೆ ಇರುವಿಕೆಯೇ ಇಲ್ಲ. ಆದ್ದರಿಂದ ಚಿದಚಿತ್ತುಗಳೆರಡೂ ಪರಬ್ರಹ್ಮನ ಶರೀರಗಳಾಗಿ ಅವನ ಅಂತರ್ಯಾಮಿತ್ವದಿಂದ ತಮ್ಮ ಸ್ವರೂಪ ಗಳನ್ನು ಪಡೆದಿರುವುವು.

ಆದ್ದರಿಂದ ಚಿದಚಿದ್ವಿಶಿಷ್ಟನಾದ ಪರಬ್ರಹ್ಮನೊಬ್ಬನೇ ಪರತತ್ವವು ಎಂಬುದು ವಿಶಿಷ್ಟಾದ್ವೈತಸಿದ್ಧಾಂತವು. ಒಬ್ಬನೇ ಆದ ಪರಬ್ರಹ್ಮನಲ್ಲಿ ವಿಲಕ್ಷಣಗಳಾದ ಚಿತ್ತು ಮತ್ತು ಅಚಿತ್ತುಗಳು ಹ್ಯಾಗೆ ಸೇರಿರಬಲ್ಲವು ಎಂದು ಪ್ರಶ್ನೆಮಾಡಬಹುದು. ಒಂದು ಮಾವಿನಹಣ್ಣನ್ನು ತೆಗೆದುನೋಡಿದರೆ ಅದರಲ್ಲಿ ಬೀಜ, ತಿರುಳು, ಸಿಪ್ಪೆ ಇತ್ಯಾದಿ ಬೇರೆಬೇರೆ ಗುಣಗಳುಳ್ಳ ಮೂರು ಪದಾರ್ಥಗಳು ಸೇರಿರುವುವು. ಇವೆಲ್ಲಾ ಒಟ್ಟಿಗೆ ಸೇರಿ ಮಾವಿನ ಹಣ್ಣು ಎಂಬ ಒಂದೇ ಹೆಸರಿನಿಂದ ಕರೆಯಲ್ಪಡುವುದು. ಇದೇ ರೀತಿ ಯಲ್ಲಿ ಚಿದಚಿತ್‌ಶರೀರಿಯಾಗಿ ಪರಮಾತ್ಮನು ಒಬ್ಬನೇ ಇರುತ್ತಾನೆ. ನಮಗೆ ಶ್ರುತಿವಾಕ್ಯಗಳೇ ಇದಕ್ಕೆ ಆಧಾರಗಳು. "ಆಕಾಶಶರೀರಂ ಬ್ರಹ್ಮ....ಯಸ್ಯಾತ್ಮಶರೀರಂ......ಯಸ್ಯವಾಯುಶರೀರಂ....." ಇತ್ಯಾದಿ ಶ್ರುತಿವಾಕ್ಯಗಳಿಂದ ಮೇಲೆ ಹೇಳಿದ ಶರೀರಶರೀರಿಭಾವವು ವ್ಯಕ್ತ ವಾಗುವುದು.

**ಮೂರು ವಿಧವಾದ ಉಪಾಸನಗಳು :—**

ಉಪಾಸನಗಳಲ್ಲಿ ಉಪಾಸ್ಯವಾದ ದೈವವು ನಮಗೆ ಸುಲಭಸಾಧ್ಯ ವಾಗಿರಬೇಕು. ಶರೀರರಹಿತನಾಗಿ ಇಂದ್ರಿಯಗಳಿಗೆ ಅಗೋಚರನಾದ ಪರಬ್ರಹ್ಮನನ್ನು ಉಪಾಸಿಸುವುದು ಕಷ್ಟವಾದ್ದರಿಂದ ಉಪಾಸನಾರ್ಥವಾಗಿ ಪಂಚಭೂತಾದಿಗಳಲ್ಲೂ, ಪ್ರತಿಮೆಗಳಲ್ಲೂ, ಅಂತರ್ಯಾಮಿಯಾಗಿರುವ ಪರಮಾತ್ಮನನ್ನು ನಿರ್ದೇಶಿಸಿ ಪೂಜಿಸುತ್ತೇವೆ. ತೈತ್ತಿರೀಯೋಪನಿಷತ್ತಿ

ನಲ್ಲಿ (೨-೧-೧; ೨-೬-೧; ೩-೬-೧) ಹೇಳಿರುವಂತೆ ಉಪಾಸನೆಗಳು ಮೂರು ವಿಧವಾಗಿವೆ.

೧. ಸತ್ಯಜ್ಞಾನಾನಂದಾದ್ಯನಂತಗುಣವಿಶಿಷ್ಟನಾದ ದಿವ್ಯಮಂಗಳ ವಿಗ್ರಹೋಪಾಸನೆ.

೨. ಭೋಕ್ತೃವರ್ಗಶರೀರನಾಗಿ ಉಪಾಸಿಸುವುದೊಂದು.

೩. ಭೋಗ್ಯಭೋಗೋಪಕರಣಶರೀರಕತ್ವೇನ ಉಪಾಸಿಸುವುದೊಂದು.

ಹೀಗೆ ಮೂರು ವಿಧವಾಗಿರುವುದು. ಇದನ್ನೇ ಇನ್ನೊಂದು ವಿಧವಾಗಿ ಹೇಳಬಹುದು.

೧. ಗುಣವಿಗ್ರಹವಿಶಿಷ್ಟನಾದ ಪರಬ್ರಹ್ಮೋಪಾಸನೆ.

೨. ಜೀವಾತ್ಮರು ಅವನಿಂದ ಶರೀರವನ್ನು ಪಡೆದು ಸರ್ವಜಗತ್ತಿನಲ್ಲಿಯೂ ಹರಡಿಕೊಂಡಿದಾರೆ. ಜೀವಾತ್ಮರುಗಳೆಲ್ಲಾ ಪರಮಾತ್ಮನಿಗೆ ಶರೀರಗಳು. ಪರಮಾತ್ಮನೇ ಶರೀರಿ. ಈ ಭಾವದಿಂದ ಶರೀರವನ್ನು ಉಪಾಸಿಸುವುದು. ಇಂದ್ರನು ತನ್ನನ್ನು ಈ ಭಾವದಿಂದ ಉಪಾಸಿಸುವಂತೆ ಪ್ರತರ್ದನನಿಗೆ ಇಂದ್ರಪ್ರತರ್ದನರ ಸಂವಾದದಲ್ಲಿ ಹೇಳಿರುವನು.

(ಕೌ. ಉ. ೩-೧-೨)

೩. ಆ ಪರಮಾತ್ಮನೇ ಸ್ಥೂಲಪ್ರಪಂಚರೂಪವಾಗಿ ಪರಿಣಮಿಸಿ ಪಂಚಭೂತಮಯನಾಗಿ ದೃಗ್ಗೋಚರನಾಗಿ ಅದರಲ್ಲಿ ಅಡಗಿರುವನು. ಆದ್ದರಿಂದ ಪಂಚಭೂತಗಳನ್ನು ಪರಮಾತ್ಮನಿಗೆ ಶರೀರವನ್ನಾಗಿ ಭಾವಿಸಿ ಉಪಾಸಿಸುವುದು.

ಶ್ರುತಿಯಲ್ಲಿ ಹೇಳಿರುವ ಉಪಾಸನೆಗಳಲ್ಲಿ ಯಾವ ದೇವತೆಯಲ್ಲಿ ಪರಮಾತ್ಮಲಕ್ಷಣಗಳನ್ನು ಸ್ಪಷ್ಟವಾಗಿ ಹೇಳಿರುವುದೋ ಮತ್ತು ತತ್ಫಲವಾಗಿ ಮೋಕ್ಷವು ನಿರ್ದೇಶಿಸಲ್ಪಟ್ಟಿರುವುದೋ ಆಯಾ ದೇವತೆಗಳನ್ನು ಪರಮಾತ್ಮಪರವೆಂದೇ ತಿಳಿಯತಕ್ಕದ್ದು. ಎಲ್ಲಿ ಪರಮಾತ್ಮ ಲಕ್ಷಣಗಳು ಸ್ಪಷ್ಟವಾಗಿ

ಹೇಳಿಲ್ಲವೋ ಮತ್ತು ಮೋಕ್ಷವು ತತ್ಫಲವಾಗಿ ಸೂಚಿಸಿಲ್ಲವೋ ಆಯಾ ಉಪಾಸನೆಗಳು ಪರಮಾತ್ಮಪರಗಳಲ್ಲವೆಂದು ತಿಳಿಯತಕ್ಕದ್ದು. ಇದೇ ಶ್ರುತಿವಾಕ್ಯಗಳಲ್ಲಿ ಪರಬ್ರಹ್ಮಪರವೆಂಬುದನ್ನು ನಿರ್ದೇಶಿಸುವ ಒಳಗುಟ್ಟು.

**ಪರಬ್ರಹ್ಮೋಪಾಸನೆಗೆ ಸರ್ವಜೀವರಿಗೂ ಅಧಿಕಾರವುಂಟು:—**

ಮೇಲೆ ವಿವರಿಸಿದ ಉಪಾಸನವು ಮನುಷ್ಯರಿಗೆ ಮಾತ್ರವೋ ಅಥವಾ ದೇವತೆಗಳಿಗೂ ಉಂಟೋ ಎಂದು ಪ್ರಶ್ನೆ.

ದೇವತೆಗಳಿಗೆ ಶರೀರವಿಲ್ಲವಾದ್ದರಿಂದ ಅವರಿಗೆ ನಿತ್ಯಕರ್ಮಾನುಷ್ಠಾನ ಯೋಗ್ಯತೆಯಿರಲಾರದು ಮತ್ತು ಅದರಿಂದ ಉಂಟಾಗಬೇಕಾದ ಚಿತ್ತ ನೈರ್ಮಲ್ಯವೂ ಇಲ್ಲ ಎಂದು ಕೆಲವರು ಹೇಳುತ್ತಾರೆ.

ಆದರೆ ಹೀಗೆ ಹೇಳುವುದು ಸರಿಯಲ್ಲ. ಶರೀರ, ನಿತ್ಯಕರ್ಮಾನುಷ್ಠಾನಗಳು, ಅರ್ಥಿತ್ವ ಇತ್ಯಾದಿಗಳು ದೇವತೆಗಳಿಗೂ ಉಂಟು ಎಂಬುದೇ ಸಿದ್ಧಾಂತವು.

"ಅನೇನ ಜೀವೇನಾನುಪ್ರವಿಶ್ಯ ನಾಮರೂಪೇವ್ಯಾಕರವಾಣಿ" ಎಂದು ನಾಮರೂಪಗಳುಳ್ಳ ದೇವತೆಗಳಿಗೆಲ್ಲಾ ಶರೀರಗಳುಂಟು. ಪುರಾಣೇತಿಹಾಸಾದಿಗಳಲ್ಲಿಯೂ ದೇವತೆಗಳು ಮೋಕ್ಷಾರ್ಥವಾಗಿ ಉಪಾಸನಗಳನ್ನು ಮಾಡಿರುವುದಾಗಿ ಕೇಳಿದ್ದೇವೆ.

ದೇವತೆಗಳಿಗೆ ಶರೀರವನ್ನು ಒಪ್ಪಿಕೊಂಡರೆ ಏಕಕಾಲದಲ್ಲಿ ನಡೆಯುವ ಅನೇಕ ಯಜ್ಞಗಳಲ್ಲಿ ಅವರು ಸಶರೀರರಾಗಿ ಅನೇಕ ಕಡೆ ಹ್ಯಾಗೆ ಇರಬಲ್ಲರು ಎಂದು ಕೇಳಿದರೆ—ಸೌಭರಿಋಷಿಯು ಏಕಕಾಲದಲ್ಲಿ ಅನೇಕ ಶರೀರಗಳೊಡನೆ ಇದ್ದುದನ್ನು ನಾವು ಇತಿಹಾಸಗಳಲ್ಲಿ ಓದಿರುವಂತೆ ದೇವತೆಗಳಿಗೂ ಆ ಶಕ್ತಿಯಿರುವುದು. ಅದೂ ಅಲ್ಲದೆ ಚತುರ್ಮುಖ ಬ್ರಹ್ಮನ ವೇದಮಂತ್ರೋಚ್ಚಾರಣದಿಂದಲೇ ಇಂದ್ರಾದಿ ದೇವತೆಗಳು ಉದ್ಭವಿಸುತ್ತಾರೆಂದು ಶಾಸ್ತ್ರಗಳಲ್ಲಿ ಹೇಳಿರುವುದು.

" ಧಾತಾಯಥಾಪೂರ್ವಮಕಲ್ಪಯತ್ " ಎಂಬ ವಾಕ್ಯ ರೀತ್ಯಾ ಚತುರ್ಮುಖಬ್ರಹ್ಮನು ಪ್ರಪಂಚಸೃಷ್ಟಿಗಾಗಿ ವೇದ ಮಂತ್ರೋಚ್ಚಾರಣದಿಂದಲೇ ಇಂದ್ರಾದಿ ದೇವತೆಗಳನ್ನೂ, ವಿಶ್ವಾಮಿತ್ರಾದಿ ಋಷಿಗಳನ್ನೂ ಸೃಷ್ಟಿಸುತ್ತಾನೆ. ಇದಕ್ಕಾಗಿ ಪುಣ್ಯವಂತರಾದ ಜೀವಾತ್ಮ ರನ್ನು ಇಂದ್ರಾದಿ ಸ್ಥಾನಗಳಿಗೆ ನೆನೆದು ವೇದಮಂತ್ರಗಳಿಂದ ಸೃಷ್ಟಿಸು ತ್ತಾನೆಂಬುದನ್ನು ಶಾಸ್ತ್ರಗಳಿಂದ ತಿಳಿಯುವೆವು.

ಈ ದೇವತೆಗಳಂತೆಯೇ ವಸ್ವಾದಿ ಉಪಾಸನಾ ದೇವತೆಗಳಿಗೂ ಅವರ ಮೋಕ್ಷಪ್ರಾಪ್ತಿಗಾಗಿ ಉಪಾಸನಾಧಿಕಾರವುಂಟು ಎಂದು ಬ್ರಹ್ಮ ಸೂತ್ರದಲ್ಲಿ ನಿರೂಪಿಸಿರುವುದು. ಸರ್ವರಿಗೂ ಉಪಾಸನಾ ಯೋಗ್ಯತೆಯುಂಟು

ಆದರೆ ಶೂದ್ರರಿಗೆ ಬ್ರಹ್ಮವಿದ್ಯಾಧಿಕಾರವಿಲ್ಲ. ಬ್ರಹ್ಮವಿದ್ಯೆಗೆ ಉಪನಯನಾದಿ ಸಂಸ್ಕಾರಗಳು ವಿಧಿಸಿರುವುದರಿಂದಲೂ, ಶೂದ್ರರಿಗೆ ಆ ಸಂಸ್ಕಾರಾದಿಗಳು ನಿಷೇಧಿಸಲ್ಪಟ್ಟಿರುವುದರಿಂದಲೂ ಅವರಿಗೆ ಬ್ರಹ್ಮೋ ಪಾಸನಾಧಿಕಾರವಿಲ್ಲ.

# ಎರಡನೇ ಪ್ರಕರಣವು

ಮೊದಲನೆಯ ಪ್ರಕರಣದಲ್ಲಿ ಪರಬ್ರಹ್ಮಸ್ವರೂಪವನ್ನು ಸ್ಥಾಪಿಸಿ ಎರಡನೆಯ ಪ್ರಕರಣದಲ್ಲಿ ಜಗತ್ಕಾರಣ ವಸ್ತುವಿನ ವಿಷಯದಲ್ಲಿ ಇತರ ಮತಸ್ಥರ ಸಿದ್ಧಾಂತಗಳನ್ನು ಖಂಡಿಸುತ್ತಾರೆ. ಮೊಟ್ಟಮೊದಲು ಕಪಿಲ ಸ್ಮೃತಿ ಮತ್ತು ಯೋಗಸ್ಮೃತಿಗಳು ವ್ಯವಹರಿಸಲ್ಪಡುತ್ತವೆ.

**ಕಪಿಲಸ್ಮೃತಿಖಂಡನ :—**

ಕಪಿಲಸ್ಮೃತಿಯಲ್ಲಿ ಮೂಲಪ್ರಕೃತಿಯೇ ಜಗತ್ಕಾರಣವಸ್ತುವೆಂದು ಹೇಳಿದೆ. ಕಪಿಲಸ್ಮೃತಿಯನ್ನು ಆಧಾರ ಗ್ರಂಥವನ್ನಾಗಿ ಅಂಗೀಕರಿಸದಿದ್ದರೆ ಅದಕ್ಕೆ ಅವಕಾಶವನ್ನು ಕೊಡಲಿಲ್ಲವೆಂಬ ದೋಷವು ಬರುವುದು ಎಂದು

ಕಾಪಿಲರು ಹೇಳುತ್ತಾರೆ. ಆದರೆ ಮನುಸ್ಮೃತಿ ಮತ್ತು ಇನ್ನೂ ಅನೇಕ ಸ್ಮೃತಿಗಳಲ್ಲಿ ಪರಬ್ರಹ್ಮನೇ ಜಗತ್ಕಾರಣವಸ್ತುವೆಂದು ಹೇಳಿದೆ. ಕಪಿಲ ಸ್ಮೃತಿಯನ್ನು ಅಂಗೀಕರಿಸಿದ್ದೇ ಆದರೆ ಈ ಇತರೆ ಅನೇಕ ಸ್ಮೃತಿಗಳನ್ನು ಅನಾದರಿಸಿದ ದೋಷವು ಬರುವುದು. ಮನುಸ್ಮೃತಿಯಲ್ಲಿ ಮೊದಲಿಂದ ಎಲ್ಲಾ ಭಾಗವೂ ಕರ್ಮಕಾಂಡವಾಗಿಯೂ, ಕೊನೆಯಲ್ಲಿ ಬ್ರಹ್ಮಕಾಂಡ ವಾಗಿಯೂ ಇದೆ. ಮನುಸ್ಮೃತಿಯ ಕರ್ಮಕಾಂಡವನ್ನು ಪ್ರಮಾಣವಾಗಿ ಸರ್ವರೂ ಪರಿಗ್ರಹಿಸಿದಾರೆ. ಈ ಕರ್ಮಕಾಂಡವನ್ನು ಅಧಾರವಾಗಿ ಇಟ್ಟುಕೊಂಡು ಬರೆದಿರುವ ಬ್ರಹ್ಮಕಾಂಡವನ್ನು ಕಪಿಲಸ್ಮೃತಿ ಪರಿಗ್ರಹ ಣಾರ್ಥವಾಗಿ ಅನಾದರಿಸಿದರೆ ಅದೇ ಮನುವಿನ ಕರ್ಮಕಾಂಡವನ್ನೂ ಅನಾದರಿಸಬೇಕಾಗುವುದು. ಅನೇಕ ಸ್ಮೃತಿಗಳನ್ನು ಅನಾದರಿಸುವುದಕ್ಕೆ ಬದಲು ಕಪಿಲಸ್ಮೃತಿಯು ಅನಾದರಿಸಲ್ಪಡಬಹುದು. ಪ್ರಕೃತಿಯು ಜಗತ್ಕಾರಣವಾಗಲಾರದು ಎಂದು ಹಿಂದೆಯೇ ಹೇಳಲ್ಪಟ್ಟಿತು. ಮುಂದೆಯೂ ಆ ವಿಷಯವು ಸೂಚಿಸಲ್ಪಡುವುದು.

ಜಗತ್ತು ಕರ್ಮಸಂಬಂಧವಾದ್ದರಿಂದ ಅಜ್ಞಾನ ಕಲ್ಪಿತವಾಗಿ ಪರಬ್ರಹ್ಮನಿಗಿಂತ ವಿಲಕ್ಷಣವಾಗಿರುವುದು. ಆದ್ದರಿಂದ ಅದಕ್ಕೆ ಜಗತ್ಕಾ ರಣತ್ವವು ಕೂಡುವುದಿಲ್ಲ. ಆದರೆ ಶ್ರುತಿಯಲ್ಲಿ "ಆಪೋವಾ ಅಕಾಮಯಂತ ....ತಂಪೃಥಿವ್ಯಬ್ರವೀತ್...." (ಯಜುಷಿ ೩-೫-೫೨) ಎಂದರೆ ಜಲವು ಇಚ್ಛಿಸಿತು....ಅದನ್ನು ಪೃಥ್ವಿಯು ಹೇಳಿತು ಎಂದು ಚೇತನಗುಣಗಳನ್ನು ಪೃಥಿವೀ ಮತ್ತು ಅಪ್ಪುಗಳಿಗೆ ಹೇಳಿರುವುದರಿಂದ ಜಗತ್ಕಾರಣತ್ವವು ಯಾತಕ್ಕೆ ಕೂಡಬಾರದು ಎಂದು ಕೇಳಬಹುದು. ಆದರೆ ಪೃಥಿವೀ ಮತ್ತು ಅಪ್ಪುಗಳು ನಿಜವಾಗಿಯೂ ಅಚೇತನಗಳು. ಅವುಗಳಲ್ಲಿ ಅಂತ ರ್ಯಾಮಿಯಾಗಿರುವ ದೇವತೆಗಳು ಮಾತನಾಡುತ್ತಾರೆ. "ಅಗ್ನಿರ್ವಾ ಗ್ಭೂತ್ವಾ ಮುಖಂ ಪ್ರಾವಿಶತ್........ಆದಿತ್ಯಶ್ಚಕ್ಷುರ್ಭೂತ್ವಾಽಕ್ಷಿಣೀ ಪ್ರಾವಿಶತ್........" (ಐ. ಉ. ೧-೨-೪) ಎಂದರೆ ಅಗ್ನಿಯು ವಾಗ್ದೇವತೆ ಯಾಗಿ ಮುಖವನ್ನು ಪ್ರವೇಶಿಸಿದನು, ಸೂರ್ಯನು ದೃಗ್ದೇವತೆಯಾಗಿ ಕಣ್ಣಿ ನೊಳಗೆ ಪ್ರವೇಶಿಸಿದನು. ಇತ್ಯಾದಿ ಶ್ರುತಿವಾಕ್ಯರೀತ್ಯಾ ಪೃಥಿವ್ಯಂತರ್ಭೂತ ರಾದ ದೇವತೆಗಳನ್ನು ಈ ಚೇತನಕಾರ್ಯಕಾರಣರನ್ನಾಗಿ ಅಂಗೀಕರಿಸಬೇಕು.

ಪ್ರಕೃತಿಯು ತ್ರಿಗುಣಾತ್ಮಕವಾಗಿ ಕ್ಷಣಕ್ಷಣಕ್ಕೂ ವಿಕಾರಾಸ್ಪದವಾದ ಹೇಯವಸ್ತುವಾದ್ದರಿಂದ ಇದು ಜಗತ್ಕಾರಣವಾದದ್ದೇ ಆದರೆ ಚೇತನರಿಗೆ ಅಜ್ಞಾನ ನಿವೃತ್ತಿಯಾಗುವಹಾಗೆಯೇ ಇಲ್ಲ ಮತ್ತು ಅಜ್ಞಾನವೂ ಇದ್ದೇ ಇರಬೇಕಾಗುವುದು. ಈ ವಿಧವಾದ ದೋಷಗಳಿರುವುದರಿಂದ ಪ್ರಧಾನವು ಜಗತ್ಕಾರಣವಾಗಲಾರದು.

ಅದೂ ಅಲ್ಲದೆ ಕಪಿಲಸಿದ್ಧಾಂತವು ವೇದವ್ಯತಿರಿಕ್ತವಾಗಿ ಬರೀ ತರ್ಕದಿಂದಲೇ ವಾದಿಸಲ್ಪಟ್ಟಿದೆ. ಕಾಪಿಲರ ತರ್ಕವು ಬೌದ್ಧಾದಿಗಳು ವಾದಿಸಿದ ನಾಸ್ತಿಕತರ್ಕದಿಂದ ಪ್ರತಿಹತವಾದುದರಿಂದಲೂ ಮತ್ತು ಯುಕ್ತಿಗೆ ತತ್ವ ವಿಮರ್ಶೆಯಲ್ಲಿ ಸ್ಥಿರವಾದ ಸ್ಥಾನವು ಏರ್ಪಡಲಾರದಾದ್ದರಿಂದಲೂ ಯುಕ್ತಿಯನ್ನೇ ಮುಖ್ಯವಾಗಿ ಇಟ್ಟುಕೊಂಡಿರುವ ಕಪಿಲಸ್ಮೃತಿಯು ತತ್ವದರ್ಶನಕ್ಕೆ ಅಯುಕ್ತವು.

**ತರ್ಕಗಳಿಂದ ತತ್ವವನ್ನು ಸ್ಥಾಪಿಸುವುದಕ್ಕಾಗುವುದಿಲ್ಲ:—**

ಇದೇ ರೀತಿಯಲ್ಲಿ ಊಹೆಗಳನ್ನು ಹೆಚ್ಚಾಗಿ ತರ್ಕಿಸಿದಷ್ಟೂ ಇಂತಹ ಊಹೆಗಳಿಗೆ ಕೊನೆಮೊದಲಿಲ್ಲದಿರುವುದರಿಂದಲೂ, ಇಂತಹ ಊಹಾತರ್ಕಗಳನ್ನು ಲಕ್ಷವಿಧವಾಗಿ ಚರ್ಚಿಸಬಹುದಾದ್ದರಿಂದಲೂ ನಿಜವಾಗಿಯೂ ಒಂದೇ ಆಗಿರುವ ತತ್ವವು ಯುಕ್ತಿವಾದದಿಂದ ಸ್ಥಿರಪಡುವುದಿಲ್ಲ.

ಹೀಗೆಯೇ ಯುಕ್ತಿವಾದಗಳಿಂದ ಕ್ಷಣ, ಭಕ್ಷಾದಿಗಳ ಸ್ಮೃತಿಗಳೂ ಅನಾದರಣೀಯಗಳು.

**ಸಾಂಖ್ಯಮತಖಂಡನ:—**

ಜಗತ್ಸೃಷ್ಟಿಯಲ್ಲಿ ಚೇತನನಿಗೆ ಮೊದಲು ಸಂಸಾರವೂ, ಅನಂತರ ಮೋಕ್ಷವೂ ಪ್ರಯೋಜನಗಳು ಎಂದು ಸಮಸ್ತರೂ ಒಪ್ಪಿಕೊಂಡಿರುವರು. ನಿರ್ವಿಕಾರನಾದ ಜೀವನಿಗೆ ಪ್ರಕೃತಿಸನ್ನಿಧಾನದಿಂದ ಪ್ರಕೃತಿಧರ್ಮಗಳು ಫಲಿಸಿದಾಗ ಸಂಸಾರವುಂಟಾಗುವುದು. ಪ್ರಕೃತಿಪುರುಷ ವಿವೇಕದಿಂದಲೂ, ಯೋಗಾಭ್ಯಾಸ ಸಿದ್ಧಿಯಿಂದಲೂ ಪ್ರಕೃತಿಸನ್ನಿಧಾನದಲ್ಲಿದ್ದರೂ ಪ್ರಕೃತಿ

ಧರ್ಮಗಳು ಸೇರದಂತೆ ಸಿದ್ಧಿಸಿದರೆ ಅದೇ ಮೋಕ್ಷವು—ಎಂದು ಪೂರ್ವ ಪಕ್ಷದವರೂ ಒಪ್ಪಿಕೊಂಡಿರುವರು.

ಯಾವ ಪ್ರಕೃತಿಯು ಸಂಸಾರ ಹೇತುವೋ ಅದೇ ಜಗತ್ಕಾರಣ ವಾದರೆ ಜೀವನಿಗೆ ಪ್ರಕೃತಿಧರ್ಮದ ಸಹವಾಸವು ಬಿಡುವುದೇ ಇಲ್ಲ. ಈ ಕಾರಣದಿಂದ ಅವನು ಶಾಶ್ವತವಾಗಿ ನಿತ್ಯಸಂಸಾರಿಯಾಗಿಯೇ ಇರಬೇಕಾ ಗುವುದು. ಮೋಕ್ಷಕ್ಕೂ ಈ ಪ್ರಕೃತಿಸನ್ನಿಧಾನವೇ ಕಾರಣವಾದರೆ, ಮೋಕ್ಷವೂ ಸಿದ್ಧಿಸುವುದಿಲ್ಲ. ಈ ಕಾರಣಗಳಿಂದ ಸಾಂಖ್ಯತರ್ಕವೂ ಮತ್ತು ಪ್ರಧಾನ ಜಗತ್ಕಾರಣತ್ವವನ್ನು ಪ್ರತಿಪಾದಿಸುವ ಇತರ ಮತತರ್ಕ ಗಳೂ ಅನಾದರಣೀಯಗಳು.

**ವೈಶೇಷಿಕಮತಖಂಡನವು :—**

ವೈಶೇಷಿಕರು (ಕಾಣಾದರು) ಪರಮಾಣುಗಳೇ ಜಗತ್ಕಾರಣವೆನ್ನು ತ್ತಾರೆ. ಪರಮಾಣುಗಳು ಒಂದಕ್ಕೊಂದು ಸೇರಿ "ದ್ವ್ಯಣುಕ" ಅಥವಾ "ತ್ರ್ಯಣುಕ"ಗಳಾಗಿಯೂ, ಈ ದ್ವ್ಯಣುಕ ಮತ್ತು ತ್ರ್ಯಣುಕಗಳು ಒಂದಕ್ಕೊಂದು ಸೇರಿ ದೊಡ್ಡದೊಡ್ಡ ಪದಾರ್ಥಗಳಾಗಿಯೂ ಆಗುವುವು ಎಂದು ಹೇಳುತ್ತಾರೆ.

ಒಂದು ವಸ್ತುವು ಮತ್ತೊಂದರೊಡನೆ ಸೇರಬೇಕಾದರೆ ಅವು ಗಳೊಂದೊಂದಕ್ಕೂ ಕೊನೇಪಕ್ಷ ಆರು ಪಕ್ಕಗಳು (sides) (ನಾಲ್ಕು ಪಕ್ಕಗಳು, ಮೇಲೆ, ಕೆಳಗೆ ಹೀಗೆ ಆರು ಪಕ್ಕಗಳು) ಇರಬೇಕು. ಪರಮಾಣುಗಳು ಸೇರಿ ದ್ವ್ಯಣುಕಗಳಾಗಬೇಕಾದರೆ ಪರಮಾಣುಗಳಿಗೂ ಆರು ಪಕ್ಕಗಳಿರಬೇಕು. ಇದರಿಂದ ಪರಮಾಣುಗಳಿಗಿಂತಲೂ ಸಣ್ಣ ಭಾಗಗಳಿರಬೇಕಾಗುವುದು. ಈ ವಿಧವಾದ ತರ್ಕವನ್ನು ಹೀಗೆಯೇ ಅಂತ್ಯವಿಲ್ಲದೆ ಹೇಳುತ್ತಿರಬಹುದು. ಆದಾಗ್ಯೂ ಈ ತರ್ಕದಲ್ಲಿ ಕಾರಣ ವಸ್ತುವಿಗೆ ಚೈತನ್ಯಾದಿ ಶಕ್ತಿಗಳ ವಿಚಾರವೇ ಇಲ್ಲದಿರುವುದರಿಂದ ಉಪ ಯೋಗವೇ ಇಲ್ಲ.

ಅಣುಗಳಿಗೆ ದ್ವ್ಯಣುಕಗಳಾಗಿಯೂ ಮತ್ತು ದೊಡ್ಡ ವಸ್ತು ಗಳಾಗಿಯೂ ಆಗುವುದಕ್ಕೆ ಇಚ್ಛೆ, ಚಲನ, ಸಂಯೋಗಶಕ್ತಿ ಇತ್ಯಾದಿ ಗಳಿರಬೇಕು. ಅಣುಗಳು ಅಚೇತನಗಳಾದ್ದರಿಂದ ಚೇತನ ಲಕ್ಷಣಗಳಾದ ಗುಣಗಳು ಅವುಗಳಿಗಿಲ್ಲ. ಈ ತರ್ಕವನ್ನು ಸಾಧಿಸುವುದಕ್ಕಾಗಿ "ಸಮ ವಾಯ" ಎಂದರೆ ಅನ್ಯೋನ್ಯವಾಗಿ ಸೇರುವ ಗುಣ (Atomic or molecular attraction) ವೆಂಬ ಒಂದು ಸಂಬಂಧವಿದೆ ಎಂದು ಹೇಳಿದ್ದೇ ಆದರೆ ಈ ಗುಣವೂ ಅಣುಗಳ ಜೊತೆಯಲ್ಲಿ ಅನಾದಿಯಾಗಿ ಇದ್ದೇಯಿರಬೇಕಾಗುವುದೆಂದು ಸಿದ್ಧಿಸುವುದು. ಇದರಿಂದ ಅಣುಗಳಿಗೆ ಕಾರಣತ್ವವು ಸಿದ್ಧಿಸುವುದಿಲ್ಲ. ಅದೂ ಅಲ್ಲದೆ ಪೃಥಿವಿ, ಜಲ, ತೇಜಸ್ಸು, ವಾಯುಗಳೆಂಬ ಬೇರೆಬೇರೆ ಗುಣ ಮತ್ತು ರೂಪಗಳುಳ್ಳ ಅಣುಗಳು ಇರಬೇಕಾಗುವುದು. ಆದರೆ ರೂಪಾದಿ ವಸ್ತುಗಳಾದ ಘಟಾದಿಗಳು ಅನಿತ್ಯಗಳೆಂದು ಶ್ರುತ್ಯಾದಿಗಳಿಂದ ಕಾಣುವುದರಿಂದ ಪರಮಾಣುಗಳಿಗೆ ಅನಿತ್ಯತ್ವವು ಸಿದ್ಧಿಸುವುದು. ಈ ಕಾರಣಗಳಿಂದ ಈ ಮತವು ಶಿಷ್ಟ ಪರಿಗ್ರಹವಲ್ಲ.

**ಬೌದ್ಧಮತಖಂಡನವು :—**

ಚತುರ್ವಿಧ ಪರಿಮಾಣುಗಳುಂಟೆಂಬ ವಿಷಯದಲ್ಲಿ ಕಾಣಾದನಿಗೂ, ವೈಭಾಷಿಕ (ಬೌದ್ಧ) ರುಗಳಿಗೂ ಸಾಮ್ಯವಿರುವುದರಿಂದ ಬೌದ್ಧದರ್ಶನ ಖಂಡನವು ಇಲ್ಲಿ ಹೇಳಲ್ಪಡುವುದು.

ಬೌದ್ಧನ ಶಿಷ್ಯರು ನಾಲ್ಕುವಿಧ :—(೧) ವೈಭಾಷಿಕರು, (೨) ಸೌತ್ರಾಂತಿಕರು, (೩) ಯೋಗಾಚಾರರು ಮತ್ತು (೪) ಮಾಧ್ಯಮಿಕರು.

ಇವರಲ್ಲಿ (೧) ವೈಭಾಷಿಕರು—ಪೃಥಿವ್ಯಾದಿ ಸ್ಥೂಲದ್ರವ್ಯಗಳು ಪ್ರತ್ಯಕ್ಷ ಸಿದ್ಧಗಳೆಂದು ಹೇಳುತ್ತಾರೆ. (೨) ಸೌತ್ರಾನ್ತಿಕರು-ಆ ಪೃಥಿವ್ಯಾದಿಗಳು ಜ್ಞಾನದಿಂದ ಅನುಮಾನ ಪ್ರಮಾಣದಿಂದ ಅರಿಯತಕ್ಕುದ್ದೆಂದು ಹೇಳು ತ್ತಾರೆ. (೩) ಯೋಗಾಚಾರರು—ಬಾಹ್ಯಗಳಾದ ಪೃಥಿವ್ಯಾದಿಗಳು ಇಲ್ಲ; ಅಂತರವಾದ ವಿಜ್ಞಾನ ಸಂತಾನ ಮಾತ್ರವೇ ಸತ್ಯವೆಂದು ಹೇಳುತ್ತಾರೆ. ಈ ಮೇಲೆ ಹೇಳಿದ ಮೂರು ಪಂಗಡದವರೂ ಸ್ವಾಭ್ಯುಪಗತ (ಎಂದರೆ

ತಾವು ಒಪ್ಪಿಕೊಂಡ) ವಸ್ತುಗಳು ಕ್ಷಣಿಕಗಳೆನ್ನುತ್ತಾರೆ. (೪) ಮಾಧ್ಯಮಿಕರು—ಸರ್ವವಸ್ತುಗಳೂ ಶೂನ್ಯವೆಂದು ಹೇಳುತ್ತಾರೆ.

ವೈಭಾಷಿಕ ಮತ್ತು ಸೌತ್ರಾಂತಿಕರು ಹೇಳುವುದೇನೆಂದರೆ:— ಪೃಥಿವಿ, ಅಪ್ಪು (ಎಂದರೆ ಜಲ), ತೇಜಸ್ಸು ಮತ್ತು ವಾಯುಪರಮಾಣುಗಳು. ಗಂಧ, ರಸ, ರೂಪ, ಸ್ಪರ್ಶವಿಶಿಷ್ಟಗಳಾಗಿ ಪೃಥಿವ್ಯಾದಿ ರೂಪಗಳಿಂದ ಕೂಡುತ್ತವೆ. ಅವುಗಳಿಂದ ಶರೀರೇಂದ್ರಿಯ ವಿಷಯ ಸಂಘಾತಗಳುಂಟಾಗುತ್ತವೆ. ಅದರಲ್ಲಿ ಆಂತರವಾದ ವಿಜ್ಞಾನವೇ ಆತ್ಮವಾಗುವುದು. ಕ್ಷಣಿಕಗಳಾದಾಗ್ಯೂ ಸ್ಥಿರತ್ವ ಭ್ರಾಂತಿಯಿಂದ ಲೋಕವ್ಯವಹಾರಾದಿ ಸಮಸ್ತವೂ ಕೂಡುವುದು ಎಂದು ಹೇಳುತ್ತಾರೆ.

ಆದರೆ ಪರಮಾಣುಗಳಿಂದ ಪೃಥಿವ್ಯಾದಿ ಸಮುದಾಯಗಳೂ ಮತ್ತು ಈ ಸಮುದಾಯದಿಂದ ಶರೀರೇಂದ್ರಿಯ ಸಮುದಾಯಗಳೂ ಉಂಟಾಗಲಾರವು. ಯಾತಕ್ಕೆಂದರೆ:—ಕ್ಷಣಿಕಗಳಾದ ಪರಮಾಣುಗಳು ತಾವು ಸೇರುವ ವೇಳೆಯಲ್ಲಿಯೇ ನಶಿಸಿಹೋಗುವುದರಿಂದ ಪೃಥಿವ್ಯಾದಿಗಳುಂಟಾಗಲಾರವು. ಅಸ್ಥಿರಗಳಲ್ಲಿ ಸ್ಥಿರತ್ವಭ್ರಾಂತಿಯಿಂದ ಪೃಥಿವ್ಯಾದಿ ಸಂಘಾತೋತ್ಪತ್ತಿಯು ಹ್ಯಾಗೆ ಆಗಬಲ್ಲುದು? ಶುಕ್ತಿಯಲ್ಲಿ ರಜತತ್ವಭ್ರಾಂತಿಯಿಂದ ರಜತೋತ್ಪತ್ತಿಯು ನಿಜವಾಗಿಯೂ ಆಗುತ್ತದೆಯೇ? ಆದ್ದರಿಂದ ಇದು ಅಸಂಗತವು. ಸಂಕಲ್ಪವಸ್ತುಗಳು ಕ್ಷಣಿಕಗಳಾಗಿದ್ದರೂ ಅಸ್ಥಿರದಲ್ಲಿ ಸ್ಥಿರತ್ವವೆಂಬ ಅವಿದ್ಯೆಯಿಂದ ರಾಗದ್ವೇಷಾದಿಗಳುಂಟಾಗುತ್ತವೆ. ಈ ರಾಗದ್ವೇಷಾದಿಗಳಿಂದ ಪೃಥಿವ್ಯಾದಿಗಳೂ, ಅವುಗಳಿಂದ ಪುನಃ ಅವಿದ್ಯೆಯೂ ಹೀಗೆ ಇತರೇತರ ಒಂದಕ್ಕೊಂದು ಹೇತುವಾಗಿರುವುದರಿಂದ ಅನ್ವಯಿಸಬಹುದು ಎಂದರೆ ಅದು ಹಾಗೆ ಆಗಲಾರದು. ಯಾತಕ್ಕೆಂದರೆ:— ಸಂಘಾತಗಳಿಗೆ ಅವಿದ್ಯೆಯು ನಿಮಿತ್ತವಾಗಲಾರದು.

ಅಸ್ಥಿರವಾದ ವಸ್ತುವನ್ನು ವಿಷಯೀಕರಿಸುವ ಅವಿದ್ಯೆಯು ವಸ್ತುತಃ ಸ್ಥಿರವಾದ ಕಾರ್ಯವನ್ನು ಹ್ಯಾಗೆಮಾಡಬಲ್ಲುದು? ಅದೂ ಅಲ್ಲದೆ "ಉತ್ತರಘಟಕ್ಷಣ"ವು ಬರುವುದಕ್ಕೆ ಮೊದಲು "ಪೂರ್ವಘಟಕ್ಷಣ"ವು ನಶಿಸಿ

ಹೋಗುವುದರಿಂದ " ಉತ್ತರಘಟಕ್ಷಣ "ಕ್ಕೆ ಅಭಾವವೇ ಹೇತು (ಕಾರಣ) ವೆಂದು ಹೇಳಿದರೆ ಆ ಘಟಕ್ಷಣದಿಂದ " ಪಟಕ್ಷಣ"ವು ಹ್ಯಾಗೆ ಪ್ರಸರಿಸುವುದು ? ಮತ್ತು ಒಂದು ಘಟಕ್ಷಣವೇ ಸಮಸ್ತ ಜಗತ್ತಿಗೂ ಹೇತುವಾಗಿ ಹೇಳಲ್ಪಡುವಂತೆ ಅರ್ಥವಾಗುವುದು.

ಕಾರಣವಿಲ್ಲದೆಯೇ ಕಾರ್ಯವಾಗುವುದೆಂದು ಸಾಧಿಸಿದರೆ, ಇಂದ್ರಿಯಗಳು, ತೇಜಸ್ಸು, ವಿಷಯಗಳು ಮುಂತಾದ ಕಾರಣಗಳಿಂದ ಪದಾರ್ಥದರ್ಶನಾದಿ ಕಾರ್ಯಗಳುಂಟಾಗುವುದೆಂದು ಹೇಳುವ ಆ ಮತಸ್ಥರ ಪ್ರತಿಜ್ಞೆಗೆ ವಿರೋಧವು ಬರುವುದು.

ಪೂರ್ವಘಟಕ್ಷಣಕ್ಕೆ ಕಾರಣವಾದ ಘಟಕ್ಷಣವೇ ಈ ಘಟೋತ್ಪತ್ತಿಯಾಗುವವರೆವಿಗೂ ಇರುತ್ತದೆ ಎಂದು ಹೇಳಿದರೆ ಆಗ ಪೂರ್ವಘಟಕ್ಷಣವೂ ಮತ್ತು ಈ ಘಟಕ್ಷಣವೂ ಎರಡೂ ಏಕಕಾಲದಲ್ಲಿ ನೋಡಬೇಕಾಗುವುದು. ಹಾಗೆ ಪದಾರ್ಥಗಳು ದ್ವಿಗುಣವಾಗಿ ಕಾಣದೇ ಇರುವುದರಿಂದ ಈ ಕಾರ್ಯಕಾರಣವಾದವು ಸರಿಯಾಗಿಲ್ಲ. ಇವು ನಿಜವಾಗಿಯೂ ನಶಿಸುವುದಿಲ್ಲ. ಸ್ಥೂಲರೂಪದಿಂದ ಸೂಕ್ಷ್ಮರೂಪವಾಗಿಯೂ, ಪುನಃ ಸ್ಥೂಲರೂಪವಾಗಿಯೂ ಆಗುತ್ತಿರುವುದು ಎಂದರೆ ಅದೂ ಸಮನ್ವಯಿಸುವುದಿಲ್ಲ. ಯಾತಕ್ಕೆಂದರೆ:—ಕಾರ್ಯದಲ್ಲಿ ಕಾರಣಗಳ ಗುಣಗಳಿರಬೇಕು. ಶೂನ್ಯವಸ್ತುವಿನಿಂದಾದ ವಸ್ತುವು ಶೂನ್ಯವಾಗಿಯೇ ಇರಬೇಕು ; ಸ್ಥೂಲದಿಂದಾದ ವಸ್ತುವು ಸ್ಥೂಲವಾಗಿಯೇ ಇರಬೇಕು. ಹೀಗೆ ನಡೆಯುವುದಿಲ್ಲ. ಅದೂ ಅಲ್ಲದೆ ಗುಣಗಳು ಕ್ಷಣಕ್ಷಣಕ್ಕೂ ಬದಲಾಯಿಸುತ್ತಲೇ ಇರಬೇಕು. ಇದೂ ಪ್ರತ್ಯಕ್ಷಸಿದ್ಧವಲ್ಲದ್ದರಿಂದ ಈ ತರ್ಕವು ಅಸಮಂಜಸವು.

ಪೃಥಿವಿ, ಜಲ, ತೇಜಸ್ಸು, ವಾಯುಗಳಂತೆಯೇ ಆಕಾಶವೂ ಶ್ರುತಿವಾಕ್ಯರೀತ್ಯಾ ಸೃಷ್ಟಿಯಲ್ಲಿ ಸೇರಿರುವುದರಿಂದ ಅದೂ ಶೂನ್ಯಾಽಶೂನ್ಯಾವಸ್ಥೆಗಳನ್ನು ಹೊಂದುತ್ತಿರಬೇಕು. ಬೌದ್ಧರು ಆಕಾಶವನ್ನು ಇಲ್ಲ (Irrational non-entity) ವೆನ್ನುತ್ತಾರೆ. ಪೃಥಿವ್ಯಾದಿ ಚತುರ್ವಿಧ ಪದಾರ್ಥಗಳ ಕಾರ್ಯಕಾರಣಗಳನ್ನು ಸಾಧಿಸುವುದಕ್ಕಾಗಿ ಸ್ಥೂಲಸೂಕ್ಷ್ಮಗಳ

“ಘಟಕ್ಷಣ” ಸಿದ್ಧಾಂತವನ್ನು ಸ್ಥಾಪಿಸಿದರು. ಆಕಾಶವೂ ಇವುಗಳಿಗಿಂತ ಬೇರೆಯಾಗಿರಕೂಡದು. ಆಕಾಶವೇ ಇಲ್ಲವೆಂದು ಹೇಳಿದರೆ ಬೇರೆಬೇರೆಯಾದ ಪಕ್ಷಿ ಮತ್ತು ಪದಾರ್ಥಗಳಿರುವ ಪ್ರತ್ಯೇಕ ಸ್ಥಾನಗಳೇ ಇಲ್ಲವೆಂದಾಗುತ್ತದೆ. “ಆಗ ಇಲ್ಲಿ ಇತ್ತು-ಈಗ ಅಲ್ಲಿ ಹೋಯಿತು” ಎಂಬ ಸ್ಥಾನನಿರ್ದೇಶವೇ ಇಲ್ಲದಂತಾಗುವುದು. ಇದು ಪ್ರತ್ಯಕ್ಷ ವಿರುದ್ಧವಾದ ತರ್ಕವಾಗುವುದು. ಆಕಾಶವೂ ಶೂನ್ಯಾಽಶೂನ್ಯಾವಸ್ಥೆಗಳನ್ನು ಪಡೆಯುತ್ತಿದ್ದರೆ ಆದರಲ್ಲಿರುವ ವಸ್ತುಗಳಿಗೂ ದೃಶ್ಯಾದೃಶ್ಯ ಸ್ವಭಾವವನ್ನು ಅಂಗೀಕರಿಸಬೇಕು. ಇಲ್ಲದೆ ಏಕಕಾಲದಲ್ಲಿ ಪೂರ್ವಾಪರ ಘಟಕ್ಷಣಗಳು ಇದ್ದರೆ, ಪದಾರ್ಥಗಳು ದ್ವಿಗುಣವಾಗಿ ಕಾಣುತ್ತಿರಬೇಕು. ಈ ಗುಣಗಳು ಯಥಾರ್ಥವಾಗಿ ಇಲ್ಲದಿರುವುದರಿಂದ ಈ ತರ್ಕವು ತಪ್ಪು.

ಈಕ್ಷಣದಲ್ಲಿ ನೋಡಿದ ವಸ್ತುವನ್ನೇ ಉತ್ತರಕ್ಷಣದಲ್ಲಿ ನೋಡಿದುದಾಗಿ ಸ್ವಾಭಾವಿಕವಾದ ಜ್ಞಾನವು ಇರುವುದರಿಂದ ಘಟಾದಿಗಳು ಕ್ಷಣಿಕಗಳೆಂಬುವುದು ತಪ್ಪು. ಘಟ ಮತ್ತು ಇದರ ಜ್ಞಾತೃಗಳಿಬ್ಬರೂ ಕ್ಷಣಿಕಗಳಾಗಿದ್ದರೆ ಎರಡೂ ನಶಿಸಿ ಹೊಸದಾಗಿ ಎರಡೂ ಉತ್ಪತ್ತಿಯಾಗುತ್ತಿರಬೇಕು. ಆಗ ಜ್ಞಾತೃವಿಗೆ ಜ್ಞಾನಶಕ್ತಿಯೂ ಕ್ಷಣಿಕವಾಗಿಹೋಗಿ ಮೊದಲು ನೋಡಿದುದು ಮರೆತುಹೋಗಬೇಕು. ಈ ಅಸಂಭವಗಳಿಂದ ಈ ಮತವು ತಪ್ಪು. ಹಿಂದೆ ನೋಡಿದುದೂ ಮತ್ತು ಮುಂದೆ ನೋಡುವುದೂ ಎರಡು ಜ್ಞಾನವೂ ಇರುವುದರಿಂದ ಹಿಂದೆ ನೋಡಿದ ಕ್ಷೇತ್ರಜ್ಞನೇ ಈಗಲೂ ಇರುವನೆಂದು ಸಿದ್ಧಿಸುವುದು. ಕ್ಷೇತ್ರಜ್ಞನು ನಶಿಸಿಹೋಗುತ್ತಿದ್ದರೆ ಪೂರ್ವಕ್ಷಣದಲ್ಲಿ ಮಾಡಿದ ಕರ್ಮಫಲವನ್ನು ಅನುಭವಿಸುವುದಕ್ಕೆ ಉತ್ತರಕ್ಷಣದಲ್ಲಿ ಆ ಕ್ಷೇತ್ರಜ್ಞನೂ ಇಲ್ಲದಿರುವುದರಿಂದ ಆ ಕರ್ಮಫಲವು ಸೋಮಾರಿಯಾದ ಬೇರೊಬ್ಬ ಕ್ಷೇತ್ರಜ್ಞನಿಗೆ ಸೇರಿಹೋಗುವುದು. ಪಾಪದ ಫಲವೂ ಹೀಗೆಯೇ ಆಗುವುದು. ಈ ಕಾರಣಗಳಿಂದ ವೈಭಾಷಿಕ ಸೌತ್ರಾಂತಿಕರಿಬ್ಬರ ಮತವೂ ಅಸಮಂಜಸವು.

**ಯೋಗಾಚಾರಮತಖಂಡನವು:—**

ಯೋಗಾಚಾರಮತದಲ್ಲಿ ಜ್ಞಾನವು ಮಾತ್ರವೇ ಸತ್ಯವು; ಪದಾರ್ಥಗಳು ಅಸತ್ಯಗಳು ಮತ್ತು ಅವುಗಳು ಇಲ್ಲವೇ ಇಲ್ಲ. ಅಜ್ಞಾನ ಮಾತ್ರವೇ

ವಸ್ತುಗಳ ನೀಲಪೀತಾದಿ ವರ್ಣಸ್ವರೂಪವುಳ್ಳದ್ದು. ಈ ಆಕಾರಗಳನ್ನು ಗ್ರಹಿಸುವ ಹೃದಯದ ಜ್ಞಾನವೇ ಘಟಾದಿ ಪದಾರ್ಥಗಳಂತೆ ಭ್ರಮೆಯಿಂದ ಕಾಣುತ್ತದೆ.

ಜಡಗಳಾದ ಘಟಾದಿಗಳನ್ನೂ ಒಪ್ಪಿಕೊಂಡರೂ ಅವುಗಳು ತಾವಾಗಿಯೇ ಪ್ರಕಾಶಿಸಲಾರವಾದ್ದರಿಂದ ಅವುಗಳನ್ನು ಪ್ರಕಾಶಪಡಿಸುವುದಕ್ಕಾಗಿ ಜ್ಞಾನವನ್ನು ಒಪ್ಪಿಕೊಳ್ಳಬೇಕು. ಆಗ ಪದಾರ್ಥಗಳು ಮತ್ತು ಜ್ಞಾನ ಎಂಬ ಎರಡನ್ನೂ ಅಂಗೀಕರಿಸುವುದಕ್ಕಿಂತಲೂ ಜ್ಞಾನವೊಂದನ್ನೇ ಅಂಗೀಕರಿಸುವುದುಚಿತವು. ಇದರಿಂದಲೇ ಸಂಕಲ್ಪ ವ್ಯವಹಾರಗಳೆಲ್ಲಾ ನಡೆಯುವುವು ಎಂಬುದೇ ಇವರ ತತ್ವವು.

ಆದರೆ "ನಾನು ಇದನ್ನು ಅರಿಯುತ್ತೇನೆ" ಎಂಬ ವಾಕ್ಯದಲ್ಲಿ "ನಾನು" ಎಂಬ ಜ್ಞಾನಕ್ಕೆ ಆಶ್ರಯನಾದ ಒಬ್ಬ ಕರ್ತನೂ; "ಇದನ್ನು" ಎಂದು ಅರಿಯುವುದಕ್ಕೆ ವಿಷಯವಾದ ಒಂದು ವಸ್ತುವೂ ಮತ್ತು "ಅರಿಯುತ್ತೇನೆ" ಎಂಬ ಕರ್ತೃವಿನ ಜ್ಞಾನವೂ ಇವು ಮೂರೂ ಸಹಜವಾಗಿರುವಾಗ ಇವುಗಳಲ್ಲಿ ಎರಡು ವಿಷಯಗಳನ್ನು ಬಿಟ್ಟು ಒಂದನ್ನು ಮಾತ್ರ ಅಂಗೀಕರಿಸುವುದು ಅನುಚಿತವು. ಈ ಮತವನ್ನು ಒಪ್ಪಿಕೊಂಡರೆ ಸ್ವಪ್ನಗಳಲ್ಲಿ ಕಾಣುವ ಮಾಯಾಪದಾರ್ಥಗಳಿಗೂ ಜಾಗ್ರದವಸ್ಥೆಯಲ್ಲಿ ಕಂಡು ಅನುಭವಿಸುವ ಸತ್ಯವಾದ ಘಟಪಟಾದಿ ವಸ್ತುಗಳಿಗೂ ವ್ಯತ್ಯಾಸವೇ ಇರುವುದಿಲ್ಲ. ಇದರಿಂದ ಸ್ವಪ್ನವಿಷಯವೂ ಕೂಡ ಯಥಾರ್ಥವೆಂದೂ ತರ್ಕಿಸಬಹುದು. ಪ್ರತ್ಯಕ್ಷವಾದ ವಿಷಯಗಳನ್ನು ಒಪ್ಪಿಕೊಳ್ಳದೆ ಅಪ್ರತ್ಯಕ್ಷವಾದ ಜ್ಞಾನಮಾತ್ರವನ್ನೇ ಅಂಗೀಕರಿಸುವುದು ಯುಕ್ತಿಗೆ ತರವಲ್ಲ.

**ಮಾಧ್ಯಮಿಕ (ಎಂದರೆ ಸರ್ವಶೂನ್ಯ) ಮತಖಂಡನವು: —**

ಮಾಧ್ಯಮಿಕರ ಮತದಲ್ಲಿ ಜ್ಞಾನ, ಜ್ಞೇಯ, ಜ್ಞಾತ ಎಂಬ ಮೂರೂ ಇಲ್ಲವೇ ಇಲ್ಲ. ಸರ್ವ ಜಗತ್ತೂ ಭ್ರಾಂತಿಯಿಂದಲೇ ಕಾಣುತ್ತದೆ. ಪದಾರ್ಥಗಳನ್ನು ಒಪ್ಪಿಕೊಂಡರೆ ಅವುಗಳ ಉತ್ಪತ್ತಿಯು ಯಾವರೀತಿ ಆಯಿತು ಎಂದು ಹೇಳಬೇಕಾಗುವುದು. ಉತ್ಪತ್ತಿಗೆ ಕಾರಣವು ಭಾವವೊ ಅಥವಾ

ಅಭಾವವೊ ಇವುಗಳಲ್ಲಿ ಯಾವುದೊಂದನ್ನೂ ನಿರ್ಧರಿಸಿ ಹೇಳುವುದಕ್ಕಾಗು ವುದಿಲ್ಲ. ಭಾವದಿಂದ ಉಂಟಾಗುತ್ತದೆ ಎಂದರೆ—ಮೃತ್ಪಿಂಡದಿಂದ ಘಟವನ್ನು ಮಾಡುವಾಗ ಅದರ ಮೊದಲನೆಯ ಭಾವವಾದ ಪಿಂಡಾಕಾರದಿಂದ ಘಟ ವಾಗುವುದಿಲ್ಲ. ಘಟವಾಗುವುದಕ್ಕೆ ಮೊದಲು ಆ ಪಿಂಡವನ್ನು ತುಳಿದು, ಕಲಿಸಿ ಇತ್ಯಾದಿ ಕಾರ್ಯಗಳನ್ನು ಮಾಡಬೇಕು. ಆಗ ಪಿಂಡಾಕೃತಿಯು ಹೋಗಿ ಬಿಡುತ್ತದೆ. ಆದ್ದರಿಂದ ಅಭಾವದಿಂದ ಘಟೋತ್ಪತ್ತಿಯಿಲ್ಲ. ಅಭಾವ ದಿಂದ ಉತ್ಪತ್ತಿಯಾಗುತ್ತದೆ ಎಂದರೆ-ಅಭಾವ (Non-existance)ದಿಂದ ಉತ್ಪನ್ನವಾದ ವಸ್ತುವು ಅಭಾವವಾಗಿಯೇ ಆಗಬೇಕು. ಹಾಗಾದರೆ ಅದು ಒಂದು ಕೆಲಸಕ್ಕೂ ಉಪಯೋಗವಾಗಕೂಡದು. ಹೀಗೆ ಪದಾರ್ಥ ಗಳನ್ನು ನಿರೂಪಿಸುವುದಕ್ಕೆ ಆಗದೇ ಇರುವುದರಿಂದ ಸರ್ವವೂ ಶೂನ್ಯ ವೆಂದೇ ಸಿದ್ಧಿಸುವುದು ಎಂದು ಹೇಳುತ್ತಾರೆ.

ಆದರೆ-ಭಾವವೂ ಅಭಾವವೂ-ಎರಡೂ ಪದಾರ್ಥಗಳ ಅವಸ್ಥಾವಿಶೇ ಷಗಳು. ಭಾವ (ಸ್ಥೂಲಾವಸ್ಥೆ) ಎಂದು ಪದಾರ್ಥಗಳ ಆಗಿನ ಅವಸ್ಥೆ ಯನ್ನು ತೋರಿಸುತ್ತದೆ. ಅಭಾವ (ಸೂಕ್ಷ್ಮಾವಸ್ಥೆ) ಎಂದು ಕಾಲಾಂತ ರದಲ್ಲಿ ಆ ಪದಾರ್ಥಕ್ಕೆ ಇದ್ದ ಅವಸ್ಥೆಯನ್ನು ಸೂಚಿಸುತ್ತದೆ. ಭಾವ ವೆಂದೂ, ಅಭಾವವೆಂದೂ ಒಂದು ಧರ್ಮಿ ರೂಪವಾದ ಪದಾರ್ಥವು ಸಿದ್ಧಿಸು ವುದೇ ಇಲ್ಲ. ಇವರಿಂದ ಸರ್ವಶೂನ್ಯವು ಸಿದ್ಧಿಸುವುದೇ ಇಲ್ಲ. ಆದ್ದರಿಂದ ಸರ್ವಶೂನ್ಯತ್ವವು ಸಮಂಜಸವಾದ ಸಿದ್ಧಾಂತವಲ್ಲ.

**ಜೈನಮತಖಂಡನವು:—**

ಜೈನಮತವು ಕೆಳಗೆ ಖಂಡಿಸಲ್ಪಡುತ್ತದೆ—ಈ ಮತದ ಸಿದ್ಧಾಂತ ವೇನೆಂದರೆ: ಕಾರ್ಯಕಾರಣರೂಪವಾದ ಜಗತ್ತು ಏಕವಾಗಿಯೂ ಅನೇಕ ವಾಗಿಯೂ, ನಿತ್ಯವಾಗಿಯೂ ಅನಿತ್ಯವಾಗಿಯೂ, ಭಿನ್ನವಾಗಿಯೂ ಅಭಿನ್ನವಾಗಿಯೂ ಇರುವುದು. ಕಾರಣರೂಪವಾದ ಮೃತ್ತು (ಮಣ್ಣು) ಕಾರ್ಯಾವಸ್ಥೆಯಲ್ಲಿಯೂ ಕಾಣುವುದರಿಂದ ನಿತ್ಯವಾಗಿಯೂ, ಏಕರೂಪ ವಾಗಿಯೂ ಮತ್ತು ಅಭಿನ್ನವಾಗಿಯೂ ಇರುತ್ತದೆ. ಕಾರ್ಯಾವಸ್ಥೆಯಲ್ಲಿ ಕಾರಣವು ಬದಲಾಯಿಸಿ ಸ್ಥಾಲಿ, ಘಟಾದಿ ಅನೇಕ ರೂಪಗಳಾಗುವು

ಷರಿಂದ, ಅನಿತ್ಯವೂ, ಅನೇಕ ರೂಪಗಳುಳ್ಳದ್ದಾಗಿಯೂ, ಭಿನ್ನಗಳಾಗಿಯೂ ಇರುತ್ತದೆ. (ಕಾರಣಾವಸ್ಥೆಗೆ ದ್ರವ್ಯರೂಪವೆಂದು ಹೆಸರು). ಹೀಗೆಯೇ ಸಕಲ ವಸ್ತುಗಳೂ ಕಾರ್ಯ ಕಾರಣಾವಸ್ಥೆಗಳಲ್ಲಿ ವಿರುದ್ಧ ಧರ್ಮವುಳ್ಳದ್ದಾಗಿರುತ್ತವೆ ಎಂದು ಹೇಳುತ್ತಾರೆ.

ಆದರೆ—ಅನಿತ್ಯವೆಂದರೆ ಉತ್ಪತ್ತಿ ವಿನಾಶಗಳಿರುವಿಕೆ. ನಿತ್ಯವೆಂದರೆ ಉತ್ಪತ್ತಿ ವಿನಾಶಗಳಿಲ್ಲದಿರುವಿಕೆ. ಭಿನ್ನವೆಂದರೆ ವಿರುದ್ಧ ಧರ್ಮಗಳಿರುವಿಕೆ. ಅಭಿನ್ನವೆಂದರೆ ವಿರುದ್ಧ ಧರ್ಮಗಳಿಲ್ಲದಿರುವುದು. ವಿರುದ್ಧ ಧರ್ಮಗಳು ಕತ್ತಲೆ, ಬೆಳಕುಗಳಂತೆ ಒಂದೇ ಕಡೆಯಲ್ಲಿ ಇರಲಾರವು. ಧರ್ಮಿಯಾದ ದ್ರವ್ಯವು ನಿತ್ಯ, ಏಕ, ಅಭಿನ್ನ ಎಂದು ಹೇಳಿ ಅದರಲ್ಲಿ ವಿಶೇಷಣಗಳಾದ ಅವಸ್ಥೆಯಲ್ಲಿ ಅನಿತ್ಯ, ಅನೇಕ, ಭಿನ್ನ ಎಂದು ಹೇಳಿದರೆ ಒಂದೇ ಸ್ಥಳದಲ್ಲಿ ವಿರುದ್ಧ ಧರ್ಮಗಳು ಹ್ಯಾಗೆ ಸೇರಿದುವು? ಹೀಗೆ ಅರ್ಥ ಪರ್ಯಾಲೋಚನೆಯಿಲ್ಲದೆ ಹೇಳಿದ ಮತವು ಸಯುಕ್ತಿಕವಲ್ಲ.

ಜೈನಮತದಲ್ಲಿ ಆತ್ಮನು ಆಯಾ ಶರೀರದ ಆಕಾರ ಮತ್ತು ಗಾತ್ರಗಳುಳ್ಳವನು ಎಂದು ಹೇಳುತ್ತಾರೆ. ಹಾಗಾದರೆ ಒಂದು ಆನೆಯ ಶರೀರದಲ್ಲಿರುವ ಆತ್ಮನು ಒಂದು ಇರುವೆಯ ಶರೀರವನ್ನು ಪ್ರವೇಶಿಸುವುದಕ್ಕೆ ಆಗುವುದೇ ಇಲ್ಲ. ಅದೂ ಅಲ್ಲದೆ ಆನೆಯು ಹುಟ್ಟುವಾಗ ಸಣ್ಣದಾಗಿರುತ್ತದೆ. ವಯಸ್ಸಾದಹಾಗೆಲ್ಲಾ ದೊಡ್ಡದಾಗುತ್ತಿರುತ್ತದೆ. ಆಗ ಅದರ ಒಳಗಿರುವ ಆತ್ಮನೂ ದೊಡ್ಡದಾಗುತ್ತಾ ಬರಬೇಕು. ಆತ್ಮನಿಗೆ ಆಯಾ ಶರೀರಗಳಿಗೆ ತಕ್ಕಂತೆ ಸಂಕೋಚ ವಿಕಾಸಾದಿಗಳೂ ಉಂಟಾಗಬಹುದಲ್ಲವೆ ಎಂದರೆ—ಘಟಪಟಾದಿಗಳಂತೆ ಆತ್ಮನಿಗೂ ವಿಕಾರ, ಅಲ್ಪತ್ವ ಮಹತ್ವಾದಿ ದೋಷಗಳು ಸಂಭವಿಸಬೇಕಾಗುವುದು. ಆದರೆ ಅದು ಶ್ರುತಿವಿರುದ್ಧವು. ಶಾಸ್ತ್ರರೀತ್ಯಾ ಆತ್ಮನೂ ಮತ್ತು ಅವನ ಪರಿಮಾಣವೂ ಶಾಶ್ವತಗಳು. ಆದ್ದರಿಂದ ಈ ಜೈನಮತವು ನಿರಾಕರಣೀಯವು.

**ಪಾಶುಪತ ಮತಖಂಡನವು:—**

ಪಾಶುಪತ ಮತದವರು—ಪಶುಪತಿಯು ಸರ್ವಜ್ಞನಾದ್ದರಿಂದಲೂ, ಮೋಕ್ಷಸ್ವರೂಪವನ್ನೂ ತತ್ಸಾಧನವನ್ನೂ ತಿಳಿದವನಾದ್ದರಿಂದಲೂ, ಆ

ಆಗಮವನ್ನೂ ಅವನೇ ಉಪದೇಶಿಸಿದ್ದರಿಂದಲೂ ಅವನು ಸರ್ವರಿಗೂ ಆದರಣೀಯನೆನ್ನುತ್ತಾರೆ.

ಆದರೆ ವೇದವು ಅಪೌರುಷೇಯವಾಗಿ ಸ್ವತಃ ಪ್ರಮಾಣವಾದ್ದರಿಂದಲೂ, ಪಾಶುಪತಾಗಮದಲ್ಲಿ ವೇದವಿರುದ್ಧಗಳಾದ ಅನೇಕ ಸೂತ್ರಾದಿಗಳಿರುವುದರಿಂದಲೂ ಇದು ಅನಾದರಣೀಯವು. ಅವು ಯಾವುವೆಂದರೆ—ಪಾಶುಪತ ಮತರೀತ್ಯಾ ಈಶ್ವರನು ಜಗತ್ತಿಗೆ ನಿಮಿತ್ತ ಕಾರಣನು; ಪ್ರಕೃತಿಯು ಉಪಾದಾನ ಕಾರಣವು; ಸದಾಶಿವನೇ ಪರತತ್ವವು. ಸುರಾಕುಂಭಸ್ಥಾಪನವೂ ಅದರಿಂದ ಪರದೇವತಾರ್ಚನೆ ಮೊದಲಾದುವು ಮೋಕ್ಷಸಾಧನವು—ಇತ್ಯಾದಿಗಳು ಪಾಶುಪತ ಮತ ತತ್ವಗಳು.

ಇವೆಲ್ಲಾ ವೇದ ವಿರುದ್ಧಗಳಾದ್ದರಿಂದ ಶಿಷ್ಟಪರಿಗ್ರಹವಲ್ಲವೆಂದು ಸಿದ್ಧಾಂತವು. ಪ್ರಧಾನವು ಅಚೇತನವಾದ್ದರಿಂದ ಒಬ್ಬ ಪುರುಷನು ಇರಬೇಕು ಎಂದು ಅನುಮಾನಸಿದ್ಧನಾದ ಪಶುಪತಿಯು ಪ್ರಧಾನಕ್ಕೆ ಅಧಿಷ್ಠಿತನೆಂದು ಹೇಳಿದರೆ—ಸಶರೀರವಾದ ಕುಲಾಲಾದಿಗಳಿಗೆ ಮೃತ್ಪಿಂಡಾಧಿಷ್ಠಾನವು ಕಾಣುವುದರಿಂದ, ಪಶುಪತಿಗೆ ಪ್ರಧಾನಾಧಿಷ್ಠಾನವು ಅಸಮಂಜಸವು. ಅದಕ್ಕಾಗಿ ಪಶುಪತಿಗೆ ಶರೀರವನ್ನೂ ಅಂಗೀಕರಿಸಿದರೆ—ಸಾವಯುವವಾದ ಶರೀರಕ್ಕೆ ಹೇತುವು ಬೇಕಾಗುವುದರಿಂದ ಅನವಸ್ಥೆಯುಂಟಾಗುವುದು.

ಶರೀರವನ್ನು ಒಪ್ಪಿಕೊಂಡರೆ ಆಗ ಜೀವರಂತೆ ಪಶುಪತಿಯೂ ಕರ್ಮವಶ್ಯನಾಗುವನು. ಆ ಶರೀರವು ಆಗ ನಿತ್ಯವೆಂದಾಗಲಿ ಅನಿತ್ಯವೆಂದಾಗಲಿ ಹೇಳುವುದಕ್ಕಾಗುವುದಿಲ್ಲ. ಇದೂ ಒಂದು ಅನುಪಪತ್ತಿ. ಪಶುಪತಿಗೆ ಪ್ರಧಾನಾಧಿಷ್ಠಾನವು ಸಿದ್ಧಿಸುವುದಕ್ಕಾಗಿ ಶರೀರವನ್ನೂ, ಆ ಶರೀರವು ಸಿದ್ಧಿಸುವುದಕ್ಕಾಗಿ ಪುಣ್ಯಪಾಪಾನುಭವಗಳನ್ನೂ ಒಪ್ಪಿಕೊಂಡರೆ ಆಗ ಜೀವಾತ್ಮರಂತೆಯೇ ಜನ್ಮಮರಣಗಳುಳ್ಳವನಾಗುತ್ತಾನೆ; ಮತ್ತು ಕರ್ಮವಶ್ಯನಾದರೆ ಸರ್ವಜ್ಞತ್ವವುಸಿದ್ಧಿಸುವುದಿಲ್ಲ. ಈ ರೀತಿಯಾದ ದೋಷಗಳಿರುವುದರಿಂದ ಈ ಮತವು ಸಮೀಚೀನವಲ್ಲ.

**ಪಾಂಚರಾತ್ರ ಶಾಸ್ತ್ರಪ್ರಾಮಾಣ್ಯವು:—**

ಪಾಂಚರಾತ್ರ ಶಾಸ್ತ್ರವು ವೇದದಂತೆಯೇ ಪ್ರಮಾಣವಾದ ಶಾಸ್ತ್ರವಾಗಿ ಶಿಷ್ಟಪರಿಗ್ರಹವಾಗಿರುವುದು. ಇದರಲ್ಲಿ ವೇದವಿರುದ್ಧವಾದ ಯಾವ ಭಾಗವೂ ಇಲ್ಲ. ಅದೂ ಅಲ್ಲದೆ ವೇದಾಂತಶಾಸ್ತ್ರದಲ್ಲಿರುವಂತೆ ಪರಬ್ರಹ್ಮ ಪರವಾದ ವಿಷಯಗಳನ್ನೇ ಈ ಪಾಂಚರಾತ್ರ ಶಾಸ್ತ್ರದಲ್ಲಿ ವಿಶದವಾಗಿ ತಿಳಿಸಿದೆ. "ನಾಲ್ಕು ವೇದಗಳಿಂದಲೂ ಪರಮಪುರುಷಾರ್ಥವಿಂತಹುದೆಂದು ತಿಳಿಯದೆ ನಂತರ ಪಾಂಚರಾತ್ರ ಶಾಸ್ತ್ರವನ್ನು ಕಲಿತುಕೊಂಡನು" ಎಂದು ಶಾಸ್ತ್ರಗಳಲ್ಲಿ ಹೇಳಿದೆ. ಇದರಿಂದ ಭಗವಚ್ಛಾಸ್ತ್ರವನ್ನು ವೇದಗಳಿಗಿಂತಲೂ ವಿಶದವಾಗಿ ತಿಳಿಸುವ ಮಾಹಾತ್ಮ್ಯವು ಈ ಪಾಂಚರಾತ್ರ ಶಾಸ್ತ್ರಕ್ಕೆ ಪ್ರಸಿದ್ಧವಾಗಿದೆ.

**ಭೂತಕಾರಣವಾದ ಖಂಡನವು:—**

ಭೂತೋತ್ಪತ್ತಿ ವಿವರಣದಲ್ಲಿ "ಆಕಾಶಾದ್ವಾಯುಃ, ವಾಯೋರಗ್ನಿಃ, ಅಗ್ನೇರಾಪಃ, ಆಪಃಪೃಥಿವೀ...." ಎಂದು ಒಂದರಿಂದ ಒಂದು ಹುಟ್ಟಿದುದಾಗಿ ಹೇಳಿರುವುದರಿಂದ ಇವುಗಳಲ್ಲಿಒಂದಕ್ಕೆ ಮತ್ತೊಂದು ಕಾರಣವಾಗಬಹುದಲ್ಲವೇ ಎಂಬ ಒಂದು ಸಂಶಯವುಂಟಾಗಬಹುದು. ಆದರೆ ಈ ಅನುಮಾನವು ಜಗತ್ಸೃಷ್ಟಿ ಪ್ರಕರಣದಲ್ಲಿವಿಶದವಾಗಿ ಹೇಳಿದೆ. ಈ ಪಂಚಭೂತಗಳು ತಾವು ಯಾವ ಶಕ್ತಿಯೂ ಇಲ್ಲದೆ ಅಚೇತನಗಳಂತೆ ಯಾವ ಕೆಲಸಕ್ಕೂ ಬಾರದೆ ಇದ್ದುದನ್ನು ನೋಡಿ ಪರಬ್ರಹ್ಮನು ಅವುಗಳಲ್ಲಿ ಅಂತರ್ಯಾಮಿಯಾಗಿ ಪ್ರವೇಶಿಸಿ ಪಂಚೀಕರಣ ರೀತ್ಯಾ ಜಗತ್ಸೃಷ್ಟಿಯನ್ನು ಮಾಡಿದನು ಎಂದು ಹೇಳಿದೆ. ಚೇತನಕಾರ್ಯದಿಂದಲೇ ಜಗತ್ಸೃಷ್ಟಿಯು ನಿಶ್ಚಿತವಾಗಿರುವುದರಿಂದ ಅಚೇತನಗಳಾದ ಪಂಚಭೂತಗಳು ಒಂದಕ್ಕೊಂದು ಕಾರಣವಾಗಲಾರವು.

ಈ ರೀತಿಯಾಗಿ ಇತರ ಮತಗಳಲ್ಲಿರುವ ನ್ಯೂನತೆಗಳನ್ನು ಖಂಡಿಸಿದ ನಂತರ ಈ ಪ್ರಕರಣದಲ್ಲಿ ಆತ್ಮ, ಪ್ರಾಣ ಮತ್ತು ಇಂದ್ರಿಯಗಳ ವಿಚಾರವು ಹೇಳಲ್ಪಡುತ್ತದೆ.

# ಆತ್ಮವಿಚಾರವು

## ಆತ್ಮನು ಶಾಶ್ವತನು, ಮತ್ತು ಉತ್ಪತ್ತಿ ವಿನಾಶರಹಿತನು:—

ಜೀವನು ಪರಬ್ರಹ್ಮನಂತೆಯೇ ನಿತ್ಯನು ಎಂಬ ಶ್ರುತಿವಾಕ್ಯವಿದ್ದರೂ ಅಲ್ಲಲ್ಲಿರುವ ಕೆಲವು ಅನುಮಾನಾಸ್ಪದಗಳಾದ ವಿಷಯಗಳನ್ನು ಪೂರ್ವ ಪಕ್ಷದವರು ಸೂಚಿಸಿ ಜೀವನು ನಿತ್ಯನಲ್ಲನೆಂದು ಹೇಳುತ್ತಾರೆ. ಅವು ಯಾವುವೆಂದರೆ :

೧. ಜೀವನಿಗೆ ಉತ್ಪತ್ತಿಯೇ ಇಲ್ಲವೆಂದರೆ, ಅವನು ಪರಬ್ರಹ್ಮ ಸೃಷ್ಟಿಯಲ್ಲಿ ಹ್ಯಾಗೆ ಸೇರಿದನು? ಈ ಕಾರಣದಿಂದ "ಏಕವಿಜ್ಞಾನೇನ ಸರ್ವವಿಜ್ಞಾನಾ" ಎಂಬ ಶ್ರುತಿವಾಕ್ಯರೀತ್ಯಾ ಆತ್ಮಜ್ಞಾನದಲ್ಲಿ ಅನುಪಪತ್ತಿ ಯುಂಟಾಗಬೇಕು.

೨. "ತೋಯೇನ ಜೀವಾ‌ನ್ ವ್ಯಸರ್ಜ" (ತೈ. ಅಂಭ. ೧-೧) ಎಂದರೆ ಜಲಸೃಷ್ಟಿಯೊಡನೆ ಜೀವನನ್ನೂ ಸೃಷ್ಟಿಸಿದನು—ಎಂದೂ "ಪ್ರಜಾ ಪತಿಃ ಪ್ರಜಾ ಅಸೃಜತ" (ಯಜು. ೨ ಅಷ್ಟ) ಎಂದರೆ—ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸಿದನು. ಇತ್ಯಾದಿ ಶ್ರುತಿವಾಕ್ಯಗಳ ರೀತ್ಯಾ ಜೀವೋತ್ಪತ್ತಿಯು ಸೂಚಿತವಾಗಿರುವುದು.

೩. ಆದರೆ "ಜೀವನು ನಿತ್ಯನು" ಎಂಬ ವಾಕ್ಯಕ್ಕೆ ಆಕಾಶ ನಿತ್ಯತ್ವದಂತೆ ಬಹುಕಾಲದವರಿವಿಗೂ ಬದುಕಿರುವನು ಎಂದು ಅರ್ಥಮಾಡ ಬಹುದು. ಈ ಕಾರಣಗಳಿಂದ ಜೀವನು ಪರಬ್ರಹ್ಮನಂತೆ ಶಾಶ್ವತನಲ್ಲ ಎಂದು ಹೇಳುತ್ತಾರೆ.

## ಸಿದ್ಧಾಂತವು :—

ಆದರೆ "ನ ಜಾಯತೇ ಮ್ರಿಯತೇ ಕದಾಚಿತ್" (ಕಠೋ. ಉ. ೧-೨-೧೮) ಎಂದರೆ—ಜೀವನು ಹುಟ್ಟುವುದೂ ಇಲ್ಲ ಮತ್ತು ಸಾಯುವುದೂ

ಇಲ್ಲ—ಎಂಬ ಶ್ರುತಿವಾಕ್ಯ ರೀತ್ಯಾ ಜೀವನಿಗೆ ಉತ್ಪತ್ತಿ ವಿನಾಶಗಳಿರ ಕೂಡದು. ನೈಮಿತ್ತಿಕ ಮತ್ತು ಮಹಾಪ್ರಳಯಗಳ ಅನಂತರ ಜೀವ ಸೃಷ್ಟಿಯಲ್ಲಿ ಉಚ್ಚನೀಚ ಶರೀರಗಳಲ್ಲಿ ಕಷ್ಟಸುಖಾನುಭವಗಳು ಜೀವನಿಗೆ ಏರ್ಪಡಿಸಿರುವುವು. ಅಚಿತ್ತನ್ನು ಭೋಗೋಪಕರಣವನ್ನಾಗಿಯೂ, ಜೀವ ನನ್ನು ಭೋಗಾರ್ಹನನ್ನಾಗಿಯೂ ಹೇಳಿರುವುದು. ಇದು ಜೀವನ ಪುಣ್ಯ ಪಾಪರೂಪವಾದ ಕರ್ಮಫಲಾನುಸಾರವಾಗಿ ಇರುವುದೆಂದು ಶಾಸ್ತ್ರಗಳಲ್ಲಿ ಹೇಳಿರುವುದು. ಈ ಕರ್ಮವು ಅನಾದಿಯೆಂದೂ ಹೇಳಿರುವುದು. ಈ ಕಾರಣಗಳಿಂದ "ಅನಾದಿ" ಎಂದರೆ ಮಹಾಪ್ರಳಯಕ್ಕಿಂತಲೂ ಹೆಚ್ಚು ಕಾಲವು ಎಂದು ಅರ್ಥವಾಗಬೇಕು. ಇದರಿಂದ ಜೀವನು ಪರಬ್ರಹ್ಮ ನಂತೆಯೇ ಅನಾದಿಯೆಂದು ಸಿದ್ಧಿಸುವುದು. ಜೀವನು ಅನಾದಿಯಾಗಿಯೇ ಇರುತ್ತಾನೆ. "ನಿತ್ಯೋ ನಿತ್ಯಃ, ನಿತ್ಯೋ ನಿತ್ಯಾನಾಂ" (ಶ್ವೇ. ಉ. ೬-೧೩) ಎಂಬ ಶ್ರುತಿವಾಕ್ಯಾನುಸಾರವಾಗಿ ಆತ್ಮನು ನಿತ್ಯನು.

### ಆತ್ಮನು ಜ್ಞಾತಾ (ಜ್ಞಾನಮಾತ್ರನಲ್ಲ) :—

ಆತ್ಮನು ಜ್ಞಾನಾಶ್ರಯನು. ಜ್ಞಾನವೆಂದರೆ ಧರ್ಮಭೂತ ಜ್ಞಾನವು. ಈ ಜ್ಞಾನವೇ ಆತ್ಮನಿಗೆ ಸ್ವರೂಪನಿರೂಪಕವಾದ ಗುಣವು.

ಸುಜಾತ ಮತ್ತು ಕಪಿಲ ಮತಸ್ಥರು "ವಿಜ್ಞಾನಂ ಯಜ್ಞಂ ತನುತೇ" (ತೈ. ಆನ. ೫-೧)—ಎಂದರೆ ವಿಜ್ಞಾನವು (ಎಂದರೆ ಜೀವಾತ್ಮನು) ಯಜ್ಞ ವನ್ನು ಮಾಡುತ್ತಾನೆ ಎಂದು ಅರ್ಥವಾಗುವುದರಿಂದ ಜೀವನು ಜ್ಞಾನ ಮಾತ್ರನು (Mere intelligence) ಎನ್ನುತ್ತಾರೆ.

ಕಾಣಾದ ಮತಸ್ಥರು—ಸುಷುಪ್ತಿ ಮತ್ತು ಮೂರ್ಛೆಗಳಲ್ಲಿ ಆತ್ಮನಿಗೆ ಜ್ಞಾನವು ತಿಳಿಯುವುದಿಲ್ಲವಾದ್ದರಿಂದ ಆತ್ಮನು ಆಗಂತುಕ ಚೈತನ್ಯ ಲಕ್ಷಣ ನಾಗಿ ಪಾಷಾಣಕಲ್ಪನೆಂದು ಹೇಳುತ್ತಾರೆ.

### ಸಿದ್ಧಾಂತವು :—

ಆದರೆ "ಅಥಯೋವೇದಂ ಜಿಘ್ರಾಣೀತಿ ಸ ಆತ್ಮಾ" (ಬೃ. ಉ. ೩-೭-೨೨) "ನಪಶ್ಯೋ ಮೃತ್ಯುಂ ಪಶ್ಯತಿ" (ಛಾಂ. ಉ. ೭-೨೬-೨)

ಎಂದರೆ ಒಂದು ವಸ್ತುವನ್ನು ಆಘ್ರಾಣಿಸುವಾಗ ಯಾವನು ಅದನ್ನು "ಆಘ್ರಾಣಿಸುತ್ತೇನೆ" ಎಂದು ಹೇಳುತ್ತಾನೊ, ಮತ್ತು ಆ ಆಘ್ರಾಣದ ಸುಖಾದಿಗಳನ್ನು ಯಾವನು ಅನುಭವಿಸುತ್ತಾನೋ ಅವನೇ ಆತ್ಮನು. ಇದರಿಂದ ಬದ್ಧ ಮುಕ್ತ ಎಂಬ ಉಭಯಸ್ಥನಾದ ಜೀವನು "ಜ್ಞಾತಾ" ಎಂದು ಹೇಳಿಸಿಕೊಳ್ಳುತ್ತಾನಲ್ಲದೆ "ಜ್ಞಾನಮಾತ್ರ"ನಲ್ಲ. "ವಿಜ್ಞಾನಂ" ಎಂದರೆ ಜ್ಞಾನಸ್ವರೂಪನು ಎಂದು ಶ್ರುತಿವಾಕ್ಯದಲ್ಲಿ ಹೇಳಿರುವುದು. ನಿತ್ಯವಾದ ಧರ್ಮಭೂತಜ್ಞಾನವು ಆತ್ಮನಿಗೆ ಸ್ವರೂಪನಿರೂಪಕ ಗುಣವಾದ್ದರಿಂದಲೂ, ಮತ್ತು ಆತ್ಮನ ಸ್ವರೂಪವು ಸ್ವಯಂಪ್ರಕಾಶವಾದ್ದರಿಂದಲೂ ಆತ್ಮನು "ವಿಜ್ಞಾನಂ" ಎಂದು ಶ್ರುತಿಗಳಲ್ಲಿ ಕರೆಯಲ್ಪಡುವನು. ಸಾಹಿತ್ಯದಲ್ಲಿ ಪಾಂಡಿತ್ಯವನ್ನು ಪಡೆದ ವಿದ್ವಾಂಸನಿಗೆ "ಸಾಹಿತ್ಯರತ್ನಂ" ಎಂಬ ಬಿರುದು ಇರುವಂತೆ, "ವಿಜ್ಞಾನವೇ" ಆತ್ಮನಿಗೆ ಸ್ವರೂಪನಿರೂಪಕ ಗುಣವಾದ್ದರಿಂದ ಆತ್ಮನಿಗೆ "ವಿಜ್ಞಾನಂ" ಎಂಬ ಹೆಸರು ಶ್ರುತಿಗಳಲ್ಲಿ ವಾಡಿಕೆಯಾಗಿದೆ. ಈ ಧರ್ಮಭೂತಜ್ಞಾನವು ಸುಷುಪ್ತಿ ಮತ್ತು ಮೂರ್ಛಾವಸ್ಥೆಗಳಲ್ಲಿ ಸಂಕುಚಿತವಾಗಿರುವುದು. ಪೂರ್ವಪಕ್ಷದವರ ಹೇಳಿಕೆಯಂತೆ ಆತ್ಮನು "ಜ್ಞಾನಮಾತ್ರ"ನಾಗಿದ್ದರೆ ಸುಷುಪ್ತಿ ಮತ್ತು ಮೂರ್ಛಾವಸ್ಥೆಗಳಲ್ಲಿಯೂ ಆ ಜ್ಞಾನವು ಪ್ರಸರಣದಲ್ಲಿರಬೇಕು. ಅನುಭವದಲ್ಲಿ ಅದು ಹಾಗೆ ಇಲ್ಲವಾದ್ದರಿಂದ ಆತ್ಮನು ಜ್ಞಾನಮಾತ್ರನಲ್ಲ-ಅವನು ಜ್ಞಾತೃಸ್ವರೂಪನೆಂದು ಸಿದ್ಧಾಂತವು.

**ಆತ್ಮನು ಅಣುಸ್ವರೂಪನು :—**

ಮರಣಕಾಲದಲ್ಲಿ ಶರೀರವನ್ನು ತ್ಯಜಿಸುವುದೂ, ಪುಣ್ಯಪಾಪ ಫಲಾನುಭವಾರ್ಥವಾಗಿ ಸ್ವರ್ಗಾದಿ ಲೋಕಗಳಿಗೆ ಪ್ರಯಾಣಮಾಡುವುದೂ ಮತ್ತು ಪುನರ್ಜನ್ಮವನ್ನು ಎತ್ತುವುದಕ್ಕಾಗಿ ಹಿಂತಿರುಗಿ ಬರುವುದೂ ಇತ್ಯಾದಿ ವ್ಯಾಪಾರಗಳಿರುವುದರಿಂದ ಜೀವನು ವಿಭುವಲ್ಲ, ಶ್ರುತಿವಾಕ್ಯ ರೀತ್ಯಾ ಅವನು ಅಣುಸ್ವರೂಪನು.

ಶಾಂಕರ ಸಿದ್ಧಾನ್ತದವರು ಜೀವನು "ವಿಭು"ವೆಂದು ಹೇಳುತ್ತಾರೆ. ಇದು "ಉತ್ಕ್ರಾನ್ತಿಗತ್ಯಾಗತೀನಾಂ" (ಶಾ. ಮಿಾ. ೨-೩-೨೦)

ಎಂದರೆ ಮರಣದಕಾಲದಲ್ಲಿ ಶರೀರದಿಂದ ಉತ್ಕ್ರಾನ್ತಿಯೂ, ಸ್ವರ್ಗಾದಿ ಲೋಕಗಳಿಗೆ ಗಮನವೂ ಮತ್ತು ಪುನಃ ಭೂಲೋಕಕ್ಕೆ ಪುನರ್ಜನ್ಮಕ್ಕಾಗಿ ತಿರುಗಿ ಬರುವುದೂ–ಎಂಬ ಸೂತ್ರಕ್ಕೆ ವಿರುದ್ಧವಾಗುವುದು. ಜೀವನು ವಿಭುವಾಗಿದ್ದರೆ ಅವನಿಗೆ ಉತ್ಕ್ರಾಂತಿ, ಗತಿ ಮತ್ತು ಅಗತಿಗಳಿರಕೂಡದು. ವಿಭುತ್ವವು ಶ್ರುತಿವಾಕ್ಯರೀತ್ಯಾ ಪರಬ್ರಹ್ಮನಿಗೇ ಅನ್ವಯಿಸುವುದು.

"ಅಣುಸ್ವರೂಪೋ ಜೀವಃ .... ತೇನ ಪ್ರದ್ಯೋತೆನೈಷ ಆತ್ಮಾ ನಿಷ್ಕ್ರಾಮತಿ...." (ಬೃ. ಉ. ೪-೪-೨) ಎಂದರೆ ಆತ್ಮನು ಅಣು ಸ್ವರೂಪನು....ಮರಣಕಾಲದಲ್ಲಿ ಶರೀರದಿಂದ ಉತ್ಕ್ರಮಿಸಿ (ಎಂದರೆ ತ್ಯಜಿಸಿ) ಹೋಗುತ್ತಾನೆ. "ಯೇವೈಕೇ ಚಾಸ್ಮಾಲ್ಲೋಕಾತ್ಪ್ರಯನ್ತಿ" (ಕೌ. ಉ. ೧-೨) ಎಂದರೆ ಕರ್ಮಾನುಭವಾರ್ಥವಾಗಿ ಬೇರೆ ಬೇರೆ ಲೋಕಗಳಿಗೆ ಹೋಗುತ್ತಾನೆ. ಮತ್ತು "ತಸ್ಮಾಲ್ಲೋಕಾತ್ ಪುನರೇತಿ" (ಬೃ. ಉ. ೪-೪-೬) ಎಂದರೆ ಆಯಾ ಲೋಕಗಳಿಂದ ಹಿಂತಿರುಗಿ ಬರುತ್ತಾನೆ. ಇತ್ಯಾದಿ ಶ್ರುತಿವಾಕ್ಯಪ್ರಮಾಣರೀತ್ಯಾ ಜೀವನು ವಿಭುವಲ್ಲ, ಅಣುಸ್ವರೂಪನು ಎಂದು ಒಪ್ಪಿಕೊಳ್ಳಬೇಕು.

"ಸ್ವಾತ್ಮನಾಚೋತ್ತರಯೋಃ" (ಶಾ. ಮಿ. ೨-೩-೨೧) ಎಂದರೆ ಜೀವಾತ್ಮನು ಮರಣಾನಂತರ ಸ್ವರ್ಗಾದಿಲೋಗಳಿಗೆ ಸ್ಥೂಲಶರೀರವಿಲ್ಲದೆ ತನ್ನ ಜೀವಾತ್ಮಸ್ವರೂಪದಿಂದಲೇ ಪ್ರಯಾಣಮಾಡುತ್ತಾನೆ ಎಂದು ಹೇಳಿರುವ ಸೂತ್ರಪ್ರಕಾರ ಈ ಅಣುತ್ವವು ಸ್ಥೂಲಶರೀರ ರಹಿತನಾದ ಜೀವಾತ್ಮನ ಸ್ವರೂಪಕ್ಕೇ ಹೇಳಿರುವುದು.

ಈ ಅಣುಸ್ವರೂಪವನ್ನು ನಿರ್ಧರಿಸಿ ಶ್ರುತಿವಾಕ್ಯಗಳು ಬಹುವಿಧವಾಗಿ ಅದನ್ನು ಪ್ರತಿಪಾದಿಸುತ್ತವೆ. "ಏಷೋಽಣುರಾತ್ಮಾ ಚೇತಸಾ ವೇದಿತವ್ಯೋ ಯಸ್ಮಿನ್ ಪ್ರಾಣಃ ಪಂಚಧಾ ಸಂವಿವೇಶ" (ಮುಂ. ಉ. ೩-೧-೯) ಎಂದರೆ ಯಾವನಲ್ಲಿ ಪಂಚಪ್ರಾಣಗಳು ಸೇರಿವೆಯೋ ಅವನೇ ಅಣುಸ್ವರೂಪನಾದ ಆತ್ಮನು.

"ವಾಲಾಗ್ರ ಶತಭಾಗಸ್ಯ ಶತಧಾ ಕಲ್ಪಿತಸ್ಯ ಚ ಭಾಗೋ ಜೀವಸ್ಸ ವಿಜ್ಞೇಯಃ" (ಶ್ವೇ. ಉ. ೫-೯) ಎಂದರೆ ಆತ್ಮನ ಪರಿಮಾಣವು ಭತ್ತದ

ಬಾಲದ ತುದಿಯ ಪರಿಮಾಣದಲ್ಲಿ ಹತ್ತುಸಾವಿರದಲ್ಲಿ ಒಂದು ಪಾಲಿನಷ್ಟು ಇದೆ ಎಂದು ಅಣುಪ್ರಮಾಣತ್ವವನ್ನು ಉದ್ಘೋಷಿಸಿ ಹೇಳಿರುವುದರಿಂದ ಜೀವಾತ್ಮನು "ವಿಭು"ವೆಂದು ಕೆಲವರು ಶಂಕಿಸುವುದಕ್ಕೆ ಅನುಮಾನಾಸ್ಪದವಿಲ್ಲದಂತೆ ಸಿದ್ಧಾಂತಮಾಡಲ್ಪಟ್ಟಿದೆ.

**ಧರ್ಮಭೂತಜ್ಞಾನವು:—**

ಆತ್ಮನು ಅಣುಸ್ವರೂಪನಾಗಿ ಶರೀರದ ಏಕದೇಶದಲ್ಲಿ (ದಹರಾಕಾಶ ಸ್ಥಾನದಲ್ಲಿ) ಇದ್ದಾಗ್ಯೂ ತನ್ನ ಗುಣವಾದ ಧರ್ಮಭೂತಜ್ಞಾನ ವ್ಯಾಪ್ತಿಯಿಂದ ಶರೀರದ ಆದ್ಯಂತವನ್ನೂ ಸಂಪೂರ್ಣವಾಗಿ ಪ್ರಸರಿಸಿರುವನು. ಒಂದು ದೀಪವು ಒಂದೇ ಸ್ಥಾನದಲ್ಲಿದ್ದರೂ ಅದರ ಗುಣವಾದ ಪ್ರಭೆಯು ಹ್ಯಾಗೆ ಸುತ್ತಲೂ ಇರುವ ಪ್ರದೇಶಗಳನ್ನು ಸಂಪೂರ್ಣವಾಗಿ ವ್ಯಾಪಿಸುವುದೋ; ಅದೇ ರೀತಿಯಲ್ಲಿ ಆತ್ಮನ ಧರ್ಮಭೂತಜ್ಞಾನವು ಶರೀರದ ಆದ್ಯಂತವನ್ನೂ ವ್ಯಾಪಿಸಿರುವುದು.

"ಯೋಽಯಂ ವಿಜ್ಞಾನಮಯಃ ಪ್ರಾಣೇಷುಹೃದ್ಯನ್ತರ್ಜ್ಯೋತಿಃ" (ಬೃ. ಉ. ೪-೩-೭) ಎಂದರೆ ವಿಜ್ಞಾನಮಯನಾದ ಆತ್ಮನು ಪ್ರಾಣೇಂದ್ರಿಯಗಳೊಡನೆ ಹೃದಯದಲ್ಲಿ ಜ್ಯೋತಿಸ್ವರೂಪನಾಗಿರುವನು ಎಂಬ ಶ್ರುತಿವಾಕ್ಯರೀತ್ಯಾ ಅಣುಸ್ವರೂಪನಾದ ಆತ್ಮನು ಜ್ಯೋತಿಸ್ವರೂಪನಾಗಿ ಹೃದಯದಲ್ಲಿ ನೆಲೆಸಿರುವನು. ಜ್ಞಾನಸ್ವರೂಪನಾದ ಆತ್ಮನಿಗಿಂತಲೂ ಅವನ ಗುಣವಾದ ಧರ್ಮಭೂತಜ್ಞಾನವನ್ನು ಬೇರೆಯಾದುದನ್ನಾಗಿ ತಿಳಿದುಕೊಳ್ಳಬೇಕು. ಭೂಮಿಗೆ ಗಂಧವೂ, ಜಲಕ್ಕೆ ರಸವೂ, ಅಗ್ನಿಗೆ ರೂಪವೂ, ವಾಯುವಿಗೆ ಸ್ಪರ್ಶವೂ, ಇತ್ಯಾದಿಯಾಗಿ ಭೂತಗಳಿಗೆ ಗುಣಗಳು ಹ್ಯಾಗೆ ಬೇರೆಬೇರೆಯಾಗಿವೆಯೋ ಹಾಗೆಯೇ ಧರ್ಮಭೂತಜ್ಞಾನವು ಆತ್ಮನಿಗೆ ಸ್ವರೂಪನಿರೂಪಕಗುಣವು. ಈ ಧರ್ಮಭೂತಜ್ಞಾನವು ವಿಭುಸ್ವರೂಪವಾದದ್ದು. ಒಂದು ಹಸುವಿನ ಹೆಸರನ್ನು ಹೇಳಿದ ತಕ್ಷಣವೇ ಅದರ ಆಕಾರಸ್ವರೂಪಾದಿಗಳು ಹ್ಯಾಗೆ ಮನಸ್ಸಿನಲ್ಲಿ ಉಂಟಾಗುವುದೋ ಹಾಗೆಯೇ "ಆತ್ಮ" ಎಂಬ ಶಬ್ದವನ್ನು ಹೇಳಿದಕೂಡಲೇ "ಜ್ಞಾನ

ಸ್ವರೂಪನು" ಎಂಬುದು ಮನಸ್ಸಿನಲ್ಲಿ ಸ್ಥಿರವಾಗಬೇಕು. ಜ್ಞಾನವೇ ಆತ್ಮನ ಸ್ವರೂಪವು.

ಆತ್ಮನಿಗೆ ಜ್ಞಾನವು ನಿತ್ಯವಾಗಿದ್ದರೆ ಸುಷುಪ್ತಿ, ಮೂರ್ಛಾವಸ್ಥೆಗಳಲ್ಲಿ ಯಾತಕ್ಕೆ ತೋರುವುದಿಲ್ಲ ಎಂದು ಕೇಳಬಹುದು. ಸುಷುಪ್ತ್ಯಾದಿಗಳಲ್ಲಿ ಜ್ಞಾನವು ಸಂಕೋಚವಾಗುವುದು. ಸಾಂಸಾರಿಕನಾದ ಜೀವನಿಗೆ ಅವನ ಕರ್ಮಫಲರೂಪವಾಗಿ ಧರ್ಮಭೂತಜ್ಞಾನವು ಸಂಕೋಚವಿಕಾಸಗಳನ್ನು ಹೊಂದುತ್ತಿರುವುದು. ಮುಕ್ತನಿಗೆ ಜ್ಞಾನಸಂಕೋಚವೆಂಬುದೇ ಇರುವುದಿಲ್ಲ. ಶರೀರದಲ್ಲಿರುವ ಆತ್ಮನು ನಮಗೆ ಇಂದ್ರಿಯಗೋಚರನಲ್ಲ; ಮನಸ್ಸಿನಲ್ಲಿ ಊಹಿಸತಕ್ಕ ವಸ್ತುವಾಗಿದೆ. ಮನಸ್ಸು ಎಲ್ಲಿಯವರಿವಿಗೆ ಎಚ್ಚರವಾಗಿ ಪ್ರಸರಣದಲ್ಲಿರುವುದೋ ಅಲ್ಲಿಯವರಿವಿಗೂ ಆತ್ಮನ ಗುಣವಾದ ಜ್ಞಾನವು ಮನಸ್ಸಿನ ಮೂಲಕ ಪ್ರವೇಶಿಸಿ ವಿಷಯಜ್ಞಾನವನ್ನುಂಟುಮಾಡುವುದು. ಸುಷುಪ್ತಿ ಮತ್ತು ಮೂರ್ಛಾವಸ್ಥೆಗಳಲ್ಲಿ ಇಂದ್ರಿಯ ಮತ್ತು ಮನಸ್ಸಿನ ವ್ಯಾಪಾರಗಳು ನಶಿಸುತ್ತವೆ. ಆದ್ದರಿಂದ ಆತ್ಮನಲ್ಲಿ ಧರ್ಮಭೂತಜ್ಞಾನವು ಪ್ರಸರಿಸುವುದಿಲ್ಲ. ಹೀಗಾಗುವುದು ಶರೀರದ ಒಂದು ಧರ್ಮವು. ಸ್ವಪ್ನಾವಸ್ಥೆಯಲ್ಲಿ ಕರ್ಮೇಂದ್ರಿಯಗಳು ನಿದ್ರಿಸುತ್ತಿದ್ದರೂ ಮನಸ್ಸು ಎಚ್ಚರವಾಗಿರುವುದು. ಆಗ ಎಚ್ಚರವಾಗಿರುವ ಮನಸ್ಸಿನ ಮೂಲಕ ಸ್ವಪ್ನದಲ್ಲಿ ನಡೆಯುವ ವಿಷಯಗಳು ತಿಳಿಯುತ್ತವೆ.

ಪೂರ್ವಪಕ್ಷದವರು ಹೇಳುವಂತೆ ಆತ್ಮನು "ಜ್ಞಾನಮಾತ್ರನೂ ಮತ್ತು ವಿಭುವೂ" ಅಲ್ಲವೆಂಬುದಕ್ಕೆ ಇನ್ನೊಂದು ಕಾರಣವು ಕೆಳಗೆ ಹೇಳಲ್ಪಡುತ್ತದೆ. ಆತ್ಮನು ಜ್ಞಾನಮಾತ್ರಸ್ವರೂಪನಾದರೆ ಸುಷುಪ್ತ್ಯವಸ್ಥೆಯಲ್ಲಿಯೂ ಆ ಜ್ಞಾನವು ಪ್ರಕಾಶವಾಗಿಯೇ ಇರಬೇಕು. ಅದು ಅಪ್ರಕಾಶವಾದರೆ ಆ ಅಪ್ರಕಾಶವೂ ಹಾಗೆಯೇ ಸ್ಥಿರವಾಗಿರಬೇಕಾಗುವುದು. ಆತ್ಮನು ವಿಭುವಾದರೆ ಒಂದು ಆತ್ಮನಿಗೆ ಜ್ಞಾನವು ಪ್ರಕಾಶವಾಗುವಾಗ ಜಗತ್ತಿನಲ್ಲಿರುವ ಸಮಸ್ತ ಆತ್ಮಗಳಿಗೂ ಜ್ಞಾನಪ್ರಕಾಶವಿರಬೇಕು. ಒಂದು ಆತ್ಮನಿಗೆ ಅಪ್ರಕಾಶವಿದ್ದರೆ ಸರ್ವ ಆತ್ಮರುಗಳಿಗೂ ಹಾಗೆಯೇ ಇರಬೇಕು. ಲೋಕ

ವ್ಯವಹಾರದಲ್ಲಿ ಈರೀತಿ ಕಂಡಿಲ್ಲವಾದ್ದರಿಂದ ಎರಡು ಗುಣಗಳೂ ಸರಿಯಲ್ಲ.

**ಕರ್ಮವಿಚಾರವು:—**

ಜೀವಾತ್ಮನೇ ಸಮಸ್ತ ಕರ್ಮಗಳಿಗೂ ಕರ್ತಾ ಮತ್ತು ಕರ್ಮಫಲ ಗಳನ್ನು ಅನುಭವಿಸುವ ಭೋಕ್ತಾವಾಗುತ್ತಾನೆ. ಸಕಲ ಶಾಸ್ತ್ರಗಳಲ್ಲಿಯೂ ವಿಧಿಸಿರುವ ಕರ್ಮಗಳನ್ನು ಆತ್ಮನು ತನ್ನ ಉಜ್ಜೀವನಕ್ಕಾಗಿ ಮಾಡ ಬೇಕಾಗಿ ಹೇಳಿರುವುದರಿಂದ ಜೀವಾತ್ಮನೇ ಕರ್ತಾವಾಗುತ್ತಾನೆ.

ಪೂರ್ವಪಕ್ಷದವರು "ಪ್ರಕೃತೇಃ ಕ್ರಿಯಮಾಣಾನಿ ಗುಣೈಃಕರ್ಮಾಣಿ ಸರ್ವಶಃ | ಅಹಂಕಾರ ವಿಮೂಢಾತ್ಮಾ ಕರ್ತಾಽಹಮಿತಿಮನ್ಯತೇ". (ಭ. ಗೀ. ೩–೨೭) ಎಂಬ ಗೀತಾಶ್ಲೋಕಕ್ಕೆ "ಪ್ರಕೃತಿಯೇ ಸರ್ವ ರಜ ಸ್ತಮೋಗುಣಗಳ ಸಹಾಯದಿಂದ ಸಮಸ್ತ ಕಾರ್ಯಗಳನ್ನೂ ಮಾಡಿಸುತ್ತದೆ. ಆದರೆ ಅಹಂಕಾರದಿಂದ ಮೋಹಿತವಾದ ಬುದ್ಧಿಯುಳ್ಳವನು ತಾನೇ ಕರ್ಮ ಗಳಿಗೆ ಕರ್ತಾ ಎಂದು ತಿಳಿಯುತ್ತಾನೆ" ಎಂದು ಅರ್ಥವನ್ನು ಮಾಡಿ ಆತ್ಮನು ಕರ್ತನಲ್ಲವು, ಪ್ರಕೃತಿಯೇ ಸರ್ವಕಾರ್ಯಗಳಿಗೂ ಕರ್ತಾ ಎಂದು ಹೇಳುತ್ತಾರೆ.

**ಸಿದ್ಧಾಂತವು:—**

ಆದರೆ "ಕರ್ತಾಶಾಸ್ತ್ರಾರ್ಥವತ್ವಾತ್" (ಶಾ. ಮೀ. ೨-೩-೩೩) ಎಂದರೆ ಶಾಸ್ತ್ರಗಳಲ್ಲಿ ಹೇಳುವ ಸ್ವರ್ಗಾದಿಫಲಗಳನ್ನು ಅನುಭವಿಸುವವನು ಅವಕ್ಕೆ ಸಾಧನವಾದ ಜ್ಯೋತಿಷ್ಟೋಮಾದಿಗಳನ್ನು ಮಾಡಿದವನೇ ಆಗ ಬೇಕಾದ್ದರಿಂದ ಅವನೇ ಕರ್ತಾವಾಗುತ್ತಾನೆ. ಶಾಸ್ತ್ರಗಳು ಜೀವಾತ್ಮ ನನ್ನು ಉದ್ದೇಶಿಸಿ ಹೇಳುವುವೇ ವಿನಾ ಅಚೇತನಗಳಾದ ಪ್ರಕೃತಿಗಾಗಲಿ, ಗುಣಗಳಿಗಾಗಲಿ ಬೋಧಿಸುವುದಿಲ್ಲ. ನಿತ್ಯಕರ್ಮಗಳನ್ನಾಗಲೀ, ಯಾಗ ಹೋಮಾದಿಗಳನ್ನಾಗಲೀ ಜೀವಾತ್ಮನನ್ನು ಕರ್ತನನ್ನಾಗಿ ನಿರ್ದೇಶಿಸಿ "ಯಜೇತ" "ಉಪಾಸೀತ" ಎಂದು ಹೇಳುವುವೇವಿನಾ ಅಚೇತನವಾದ ಪ್ರಕೃತಿಯನ್ನುದ್ದೇಶಿಸಿ ಹೇಳುವುದಿಲ್ಲ. ಸ್ವರ್ಗಾದಿಲೋಕಗಳನ್ನು ಬಯ

ಸುವವನು ಇಂತಹ ಯಜ್ಞಗಳನ್ನು ನಡೆಸಬೇಕು, ಪುತ್ರಸಂತಾನವನ್ನು ಬಯಸುವವನು ಪುತ್ರಕಾಮೇಷ್ಟಿ ಎಂಬ ಯಜ್ಞವನ್ನು ನಡೆಸಬೇಕು, ಇತ್ಯಾದಿ ವಿಧಿಗಳನ್ನೆಲ್ಲಾ ಜೀವಾತ್ಮನನ್ನು ಕರ್ತಾವಾಗಿ ನಿರ್ದೇಶಿಸಿ ಹೇಳಿದ ವೇದವಾಕ್ಯಗಳು. ಅಚೇತನವಾದ ಪ್ರಕೃತಿಗೆ ಈ ಯಾಗ ಹೋಮಾದಿಗಳನ್ನು ಮಾಡಲು ಶಕ್ತಿಯೂ ಇಲ್ಲ ಮತ್ತು ಅವುಗಳಿಂದ ಅದಕ್ಕೆ ಯಾವ ಪ್ರಯೋಜನವೂ ಇಲ್ಲ. ಅದೂ ಅಲ್ಲದೆ ಪ್ರಕೃತಿಯನ್ನು ಉದ್ದೇಶಿಸಿ "ಯಜೇತ" "ಉಪಾಸೀತ" ಎಂದು ಹೇಳಿದರೂ ಅದಕ್ಕೆ ತಿಳಿದುಕೊಳ್ಳುವ ಶಕ್ತಿಯೂ ಇಲ್ಲ.

ಮೇಲೆ ಹೇಳಿರುವ ಪೂರ್ವಪಕ್ಷದವರ ಶ್ಲೋಕದ ಅರ್ಥವನ್ನು ವಿಮರ್ಶಿಸಿದರೆ ಅದರ ಅರ್ಥವು ಗೂಢವಾಗಿರುವುದು. ಪ್ರಕೃತಿಯೇ "ಕರ್ತಾ" ಎಂದು ಆ ಶ್ಲೋಕದಿಂದ ಸಾಧಿಸುವುದಕ್ಕಾಗುವುದಿಲ್ಲ. ಪ್ರಕೃತಿಯು "ಮಾಡಿಸುತ್ತದೆ" ಎಂದು ಹೇಳಿದೆಯೇವಿನಾ ಪ್ರಕೃತಿಯು ಕರ್ಮವನ್ನು "ಮಾಡುತ್ತದೆ" ಎಂದು ಹೇಳಿಲ್ಲ. ಈ ಶ್ಲೋಕದ ಉತ್ತರಾರ್ಧವನ್ನು ಪೂರ್ವಪಕ್ಷದ ಅರ್ಥಕ್ಕೆ ಕೂಡುವಂತೆ ಅರ್ಥಮಾಡಿದಾರೆ. ಈ ಉತ್ತರಾರ್ಧದಲ್ಲಿ ಎರಡು ಕರ್ತೃಗಳು ವ್ಯಕ್ತವಾಗುತ್ತವೆ:—ಒಂದು—ಕೆಲಸವನ್ನು ಮಾಡಿದವನು, ಮತ್ತೊಂದು—ಕೆಲಸವನ್ನು ಮಾಡಿಸಿದವನು. ಒಬ್ಬ ಯಜಮಾನನ ಪ್ರೇರಣೆಯಿಂದ ಅವನ ಆಳು ಒಂದು ಕೆಲಸವನ್ನು ಮಾಡಿದರೆ ಆ ಆಳು ನಿಜವಾಗಿಯೂ ಕೆಲಸವನ್ನು ಮಾಡಿದವನಾದರೂ ಕರ್ತೃತ್ವವು ಯಜಮಾನನನ್ನು ಸೇರುತ್ತದೆ. ಪ್ರತಿಯೊಬ್ಬ ಮನುಷ್ಯನು ಮಾಡುವ ಕರ್ಮಕ್ಕೂ ಅವನ ಕರ್ಮಾನುಸಾರವಾಗಿ ಕೆಲಸವನ್ನು ಮಾಡಿಸುವ "ಭಗವತ್ಪ್ರೇರಣೆ"ಯು ಮೊಟ್ಟಮೊದಲು ಉಂಟಾಗುತ್ತದೆ. ಸರ್ವಜೀವರುಗಳಿಗೂ ಅವರವರ ಪ್ರತಿಕ್ಷಣದ ಕಾರ್ಯಗಳಿಗೆ ಅದೃಶ್ಯನಾಗಿ ಆಯಾ ಜೀವಿಗಳಲ್ಲಿ ಅಡಗಿರುವ ಪರಮಾತ್ಮನ ಪ್ರೇರಣೆಯೇ ಪ್ರಥಮ ಕರ್ತೃತ್ವವು. ಸೇವಕ ಕೃತ್ಯದಂತೆ ಆ ಪ್ರೇರಣೆಗೆ ಅನುಸಾರವಾಗಿ ಸತ್ವರಜಸ್ತಮೋಗುಣಗಳು ಆಯಾ ಕಾಲಗಳಲ್ಲಿ ತಲೆದೋರಿ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳ ಮೂಲಕ ವಿಷಯಗಳಲ್ಲಿ ಪ್ರವೇಶವುಂಟಾಗುವಂತೆ ಮಾಡಿಸಿ

ದಾಗ ಆ ಜೀವಾತ್ಮನು ಆಯಾ ಕಾರ್ಯಗಳನ್ನು ಮಾಡುತ್ತಾನೆ. ಎಲ್ಲಿಯ ವರೆವಿಗೂ ಜೀವಾತ್ಮನಿಗೆ ಅಹಂಕಾರವು ಆವರಿಸಿರುವುದೋ ಅಲ್ಲಿಯ ವರಿವಿಗೂ "ಆ ಪ್ರಥಮಪ್ರೇರಣೆಯು" ತನ್ನಿಂದಲೇ ಉಂಟಾಯಿತು, ಈ ಕಾರ್ಯಕ್ಕೆ ತಾನೇ ಕಾರಣನು ಮತ್ತು ಪೂರ್ಣಕರ್ತಾ, ಎಂಬ ಭಾವವು (ಮೌಢ್ಯವು) ಇರುತ್ತದೆ. ಇಂಥವನನ್ನೇ "ವಿಮೂಢಾತ್ಮಾ" ಎಂದು ಗೀತಾ ಶ್ಲೋಕದಲ್ಲಿ ನಿರ್ದೇಶಿಸಿದೆ. ಇದೇ ಭಗವದ್ಗೀತೆಯಲ್ಲಿ - "ಕಾರ್ಯಕಾರಣ ಕರ್ತೃತ್ವೇ ಹೇತುಃಪ್ರಕೃತಿರುಚ್ಯತೇ | ಪುರುಷಃ ಸುಖದುಃಖಾನಾಂ ಭೋಕ್ತೃತ್ವೇ ಹೇತುರುಚ್ಯತೇ || (ಭ.ಗೀ. ೧೩-೨೦) ಎಂದರೆ ಕಾರ್ಯ ಕಾರಣಗಳ ಕರ್ತೃತ್ವಕ್ಕೆ ಪ್ರಕೃತಿಯು ಕಾರಣವು. ಕಾರ್ಯವನ್ನು ಮಾಡು ವವನೂ ಮತ್ತು ಅದರ ಫಲವನ್ನು ಅನುಭವಿಸುವವನೂ ಜೀವಾತ್ಮನು ಎಂಬ ಅರ್ಥವು ಮೇಲೆ ಹೇಳಿದ ವಿಷಯವನ್ನು ಸ್ಥಿರಪಡಿಸುವುದು. "ಏವಮೇವೈಷ ಏತತ್ಪ್ರಾಣಾನ್ಗೃಹೀತ್ವಾ ಸ್ವೇಶರೀರೇ ಯಥಾ ಕಾಮಂ ಪರಿವರ್ತತೇ" (ಬೃ. ಉ. ೨-೧-೧೮) ಎಂದರೆ ಆತ್ಮನು ಪ್ರಾಣಗಳನ್ನು ಗ್ರಹಿಸಿಕೊಂಡು ಆಯಾ ಶರೀರಗಳಲ್ಲಿ ಸ್ವೇಚ್ಛೆಯಾಗಿ ವಿಹರಿಸುವನು. ಎಂಬ ಶ್ರುತಿವಾಕ್ಯರೀತ್ಯಾ ಶರೀರ, ಪ್ರಾಣಗಳನ್ನು ಸಂಪಾದಿಸುವುದೂ ಅದರಲ್ಲಿ ತನ್ನ ಇಷ್ಟಪ್ರಕಾರ ವಿಹರಿಸುವುದೂ ಹೇಳಿರುವುದರಿಂದ ಆತ್ಮನಿಗೆ ಕರ್ತೃತ್ವವು ಸಿದ್ಧಿಸುವುದು.

"ವಿಜ್ಞಾನಂ ಯಜ್ಞಂ ತನುತೇ"(ತೈ.ಉ. ೨-೫)ಎಂದರೆ ವಿಜ್ಞಾನ ಸ್ವರೂಪನಾದ ಆತ್ಮನು ಯಜ್ಞದಾನಾದಿಗಳನ್ನು ಮಾಡುತ್ತಾನೆ ಎಂಬ ಶ್ರುತಿವಾಕ್ಯರೀತ್ಯಾ ಜೀವನೇ ಕರ್ತಾ.

ಪ್ರಕೃತಿಗೆ ಕರ್ತೃತ್ವವನ್ನು ಸಾಧಿಸಿದ್ದೇ ಆದರೆ ಅದು ಸಮಸ್ತ ಜೀವರಿಗೂ ಸಾಮಾನ್ಯವಾದ್ದರಿಂದ ಭೋಕ್ತೃತ್ವವು ಸಮಸ್ತ ಜೀವರಿಗೂ ವ್ಯತ್ಯಾಸವಿಲ್ಲದೆ ಒಂದೇ ವಿಧವಾಗಿ ಇರಬೇಕಾಗುವುದು. ಆಗ ಅವರವರ ಕರ್ಮಾನುಸಾರ ಕರ್ಮಫಲಗಳು ಜೀವರಿಗೆ ಬೇರೆಬೇರೆಯಾಗಿರುವುದೆಂಬ ಶಾಸ್ತ್ರವಾಕ್ಯಗಳಿಗೆ ಅರ್ಥವಿಲ್ಲದಂತಾಗುವುದು.

"ಅಹಮನ್ಯೋಽಸ್ಮಿ" ಎಂದರೆ ನಾನು ಪ್ರಕೃತಿಗಿಂತ ವಿಲಕ್ಷಣನು ಎಂಬ ಜ್ಞಾನದಿಂದ ಮಾಡುವ ಯೋಗಾಭ್ಯಾಸ ಫಲವಾದ ಸಮಾಧಿಯೂ ಜೀವನಿಗೆ ಸಿದ್ಧಿಸುವುದಿಲ್ಲ. ಈ ಕಾರಣದಿಂದ ಜೀವಾತ್ಮನೇ ಕರ್ತಾ ವಾಗುತ್ತಾನೆ.

ಒಬ್ಬ ಬಡಗಿಯ ಹತ್ತಿರ ಸಮಸ್ತ ಸಾಮಗ್ರಿಗಳೂ ಇದ್ದಾಗ್ಯೂ, ಒಂದು ಕೆಲಸವನ್ನು ಮಾಡುವುದಕ್ಕೇ ಆಗಲೀ ಮಾಡಿಸುವುದಕ್ಕೇ ಆಗಲೀ ಹ್ಯಾಗೆ ಅವನ ಇಚ್ಛೆಯೇ ಕಾರಣವೋ ಹಾಗೆಯೇ ಆತ್ಮನೂ ಕೂಡ ತನ್ನ ವೈದಿಕ, ಲೌಕಿಕಮಾರ್ಗಾದಿಗಳಲ್ಲಿ ಇಚ್ಛೆಬಂದಾಗ ಪ್ರವೇಶಿಸುತ್ತಾನೆ, ಇಚ್ಛೆಯಿಲ್ಲದಿದ್ದರೆ ಸುಮ್ಮನಿರುತ್ತಾನೆ. ಹೀಗೆ ಕರ್ಮಾಕರ್ಮಗಳಿಗೆ ಕಾರಣ ವಾದ ಇಚ್ಛಾನಿಚ್ಛೆಗಳು ಅಚೇತನಗಳಾದ ಪ್ರಕೃತಿಗಾಗಲಿ ಬುದ್ಧಿಗಾಗಲಿ ಉಂಟಾಗಕೂಡದಾದ್ದರಿಂದ ಪ್ರಕೃತಿಯಾಗಲಿ ಬುದ್ಧಿಯಾಗಲಿ ಕರ್ತೃವಾಗ ಲಾರದು. ಆತ್ಮನೇ ಕರ್ತೃವು.

ಈ ಕರ್ತೃತ್ವವೂ ಜೀವನಿಗೆ ಪರಮಾತ್ಮನ ಸಂಕಲ್ಪದಿಂದ ಉಂಟಾ ಗುವುದೆಂದು ವೇದದಲ್ಲಿ ಹೇಳಿರುವುದರಿಂದ ಆ ಕರ್ತೃತ್ವವೂ ಪರಮಪುರುಷ ನಿಂದಲೇ ಜೀವನಿಗೆ ಸಿದ್ಧಿಸುವುದು. "ಅಂತಃಪ್ರವಿಷ್ಟಶ್ಶಾಸ್ತಾ ಜನಾನಾಂ ಸರ್ವಾತ್ಮಾ" (ತೈ. ಆರ. ೩-೧೧-೧೦) "ಯ ಆತ್ಮನಿ ತಿಷ್ಠನ್ನಾತ್ಮ- ನೋಽನ್ತರೋಯಮಯತಿ" (ಬೃ. ಉ. ೩-೭-೨೨) ಎಂದರೆ ಪರಬ್ರಹ್ಮನು ಜೀವರಲ್ಲಿ ಅಂತರ್ಯಾಮಿಯಾಗಿ ಪ್ರವೇಶಿಸಿ ಜೀವರನ್ನು ಅವರವರ ಕಾರ್ಯ ಗಳಲ್ಲಿ ನಿಯಮಿಸುತ್ತಾನೆ ಎಂಬ ಶ್ರುತಿವಾಕ್ಯರೀತ್ಯಾ ಜೀವನು ಸಂಪೂರ್ಣ ಸ್ವತಂತ್ರಕರ್ತನಲ್ಲ.

ಪೂರ್ವಪಕ್ಷವಾದಿಗಳು ಇಲ್ಲಿ ಹೇಳುವುದೇನೆಂದರೆ:-ಪರಮಾತ್ಮನೇ ಜೀವನಲ್ಲಿ ಪ್ರವೇಶಿಸಿ ಅವನ ಕೈಯಿಂದ ಪುಣ್ಯಪಾಪರೂಪವಾದ ಕರ್ಮ ವನ್ನು ಮಾಡಿಸುತ್ತಾನೆ. ಜೀವನು ಸ್ವತಂತ್ರವಾಗಿ ಯಾವ ಕೆಲಸವನ್ನೂ ಮಾಡುವುದಿಲ್ಲ. ಆದ್ದರಿಂದ ಜೀವನಿಗೆ ಸುಖದುಃಖಾದಿಗಳಿರಕೂಡದು ಮತ್ತು ಜೀವನನ್ನು ಕುರಿತು "ಇದಂ ಕುರು", "ಇದಂ ಮಾ ಕುರು",

"ಯಜೇತ" ಇತ್ಯಾದಿ ಶಾಸ್ತ್ರವಾಕ್ಯಗಳನ್ನು ಹೇಳುವುದು ಅಸಂಗತವಾಗುವುದು. ಆದ್ದರಿಂದ ಜೀವನೇ ಸ್ವತಂತ್ರನಾದ ಕರ್ತನಾಗಬೇಕು ಎಂದು ಹೇಳುತ್ತಾರೆ.

**ಸಿದ್ಧಾನ್ತವು:—**

"ಜೀವನು ಕರ್ತಾ" ಎಂಬ ವಿಷಯದಲ್ಲಿ ಯಾವ ಅಡ್ಡಿಯೂ ಇಲ್ಲ. ಮೇಲೆ ಹೇಳಿಢ ಶ್ರುತಿವಾಕ್ಯದಲ್ಲಿ ಜೀವನ ಈ ಕರ್ತೃತ್ವವು ಭಗವತ್ಸಂಕಲ್ಪದಿಂದ ಸಿದ್ಧಿಸುತ್ತದೆ ಎಂದು ಹೇಳಿದೆ. ಇದೇ ಅರ್ಥವೇ ಈ ಕೆಳಗೆ ವಿವರಿಸುವ ಗೀತಾಶ್ಲೋಕದಿಂದ ತಿಳಿದುಬರುವುದು. "ಸರ್ವಸ್ಯ ಚಾಹಂ ಹೃದಿಸನ್ನಿವಿಷ್ಟೋ। ಮತ್ತಃಸ್ಮೃತಿಜ್ಞಾನಮಪೋಹನಂಚ॥ (ಭ. ಗೀ. ೧೫-೧೫) ಈಶ್ವರಸ್ಸರ್ವಭೂತಾನಾಂ। ಹೃದ್ದೇಶೇಽರ್ಜುನತಿಷ್ಠತಿ। ಭ್ರಾಮಯಸ್ಸರ್ವಭೂತಾನಿ। ಯಂತ್ರಾರೂಢಾನಿ ಮಾಯಯಾ॥ (ಭ.ಗೀ. ೧೮-೬೧) ಎಂದರೆ ಸಮಸ್ತ ಜೀವಾತ್ಮರ ಹೃದಯದಲ್ಲಿಯೂ ಪರಮಾತ್ಮನಾದ ನಾನು ಅಂತರ್ಯಾಮಿಯಾಗಿದ್ದು ಅವರ ಸ್ಮೃತಿ, ಜ್ಞಾನ, ಭ್ರಮೆಗಳಿಗೆ ಕಾರಣನಾಗಿರುವೆನು ಮತ್ತು ಯಂತ್ರವನ್ನು ನಡೆಯಿಸುವವನು ಯಂತ್ರದಲ್ಲಿ ಕುಳಿತಿರುವವನನ್ನು ಹ್ಯಾಗೆ ತನ್ನ ಇಷ್ಟಪ್ರಕಾರ ನಡೆಯಿಸುತ್ತಾನೆಯೋ ಹಾಗೆಯೇ ನಾನೂ ನನ್ನ ಸಂಕಲ್ಪರೀತ್ಯಾ ಜೀವರುಗಳನ್ನು ಕ್ರಿಯಾಕ್ರಿಯೆಗಳಲ್ಲಿ ನಿಯೋಗಿಸುವೆನು. ನನ್ನ ಮಾಯೆಯಿಂದ ಈ ನನ್ನ ಕೆಲಸಗಳು ಜೀವನಿಗೆ ತಿಳಿಯುವುದಿಲ್ಲ-ಎಂಬ ಶ್ರೀಕೃಷ್ಣನ ವಾಕ್ಯವು ಇಲ್ಲಿ ಪ್ರಮಾಣವು.

ಜೀವನು ಕರ್ತೃವಾದರೂ ಆ ಕರ್ತೃತ್ವವು ಪರಮಾತ್ಮನಿಂದ ಇವನಿಗೆ ಸಿದ್ಧಿಸುತ್ತದೆ. "ಇದಂ ಕುರು", "ಇದಂ ಮಾ ಕುರು" ಇತ್ಯಾದಿ ವಿಧಿ ನಿಷೇಧ ಶ್ರುತಿವಾಕ್ಯಗಳು ವ್ಯರ್ಥವಾಗದಿರುವುದಕ್ಕಾಗಿ ಪರಮಪುರುಷನು ಜೀವನ ಪ್ರಥಮ ಪ್ರಯತ್ನವನ್ನು ಅಪೇಕ್ಷಿಸುತ್ತಾನೆ. ಈ ಅಪೇಕ್ಷೆಯೂ ಕೂಡ "ಆ ಅಪೇಕ್ಷೆಯೆಂಬ ಪ್ರಥಮಪ್ರಯತ್ನ"ದಲ್ಲಿ ಜೀವನಿಗೆ ಸ್ವಾತಂತ್ರ್ಯವನ್ನು ಕೊಡುವುದಕ್ಕಾಗಿಯೇ. ಹೀಗೆ ಆದಪಕ್ಷದಲ್ಲಿಯೇ ಜೀವನ ಈ ಸ್ವಾತಂತ್ರ್ಯವೇ ಭಗವಂತನ ನಿಗ್ರಹಾನುಗ್ರಹಗಳಿಗೆ ವಿಷಯವಾಗಿ ಪ್ರವ

ರ್ತಿಸುವುದು. ಜೀವನಿಗೆ ಇಷ್ಟುಮಾತ್ರವೇ ಶಕ್ತಿಯುಂಟು. ನಂತರ ನಡೆಯಬೇಕಾದ್ದನ್ನೆಲ್ಲಾ ಪರಮಾತ್ಮನು ತನ್ನ ಕಾರ್ಯವನ್ನಾಗಿ ವಹಿಸುವನು. ಮೊದಲು ಜೀವನು ಸನ್ಮಾರ್ಗದಲ್ಲಿ ಪ್ರಯತ್ನವನ್ನು ಆರಂಭಿಸುವುದಕ್ಕಾಗಿಯೇ ಶಾಸ್ತ್ರಗಳು ಅವನಿಗೆ ಕೊಡಲ್ಪಟ್ಟಿರುವುವು. ಆ ಶಾಸ್ತ್ರಗಳು ವಿಫಲವಾಗದಿರಬೇಕೆಂಬುದೇ ಪರಮಾತ್ಮನ ಇಚ್ಛೆ. ಈ ಪ್ರಥಮ ಪ್ರಯತ್ನವನ್ನು ಅನುಸರಿಸಿಯೇ ಜೀವನಿಗೆ ಸುಖದುಃಖಾದಿಗಳುಂಟಾಗುತ್ತವೆ.

**ಭೇದಾಽಭೇದಶ್ರುತಿಗಳು :—**

ಪರಮಾತ್ಮ ಜೀವರುಗಳ ಪರಸ್ಪರಸಂಬಂಧದ ವಿಷಯದಲ್ಲಿ ನಾಲ್ಕು ವಿಧವಾದ ಪ್ರಶ್ನೆಗಳು ಹೊರಟಿರುವುವು.

೧. ಪರಮಾತ್ಮನು ಜೀವನಿಗಿಂತಲೂ ಭಿನ್ನನೇ ?

೨. ಅಲ್ಲದೆ ಜೀವನು ಅಜ್ಞತ್ವವನ್ನು ಪಡೆದ ಪರಮಾತ್ಮನೇ ?

೩. ಜೀವನು ಉಪಾಧಿಯುಕ್ತನಾದ (with limitations) ಪರಮಾತ್ಮನೇ ?

೪. ಅಥವಾ ಜೀವನು ಪರಮಾತ್ಮನ ಅಂಶಭೂತನೇ ?

**೧. ಭೇದಶ್ರುತಿ :—**

ವೈಶೇಷಿಕರು "ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ" ಎಂಬ ಶ್ರುತಿವಾಕ್ಯರೀತ್ಯಾ ಜೀವನಿಗಿಂತಲೂ ಪರಮಾತ್ಮನು ಭಿನ್ನನು ಎಂದು ಹೇಳುತ್ತಾರೆ.

**೨. ಅಭೇದಶ್ರುತಿ : —**

ಶಾಂಕರ ಮತದಲ್ಲಿ "ತತ್ವಮಸಿ" ಎಂದರೆ "ಪರಬ್ರಹ್ಮನೇ ನೀನು" ಎಂದು ತರ್ಕಿಸಿ ಜೀವಪರಮಾತ್ಮರಿಗೆ ಅಭೇದವನ್ನು ಹೇಳುತ್ತಾರೆ.

೩. "ಆ ಪರಬ್ರಹ್ಮನೇ ಮಾಯೆಯಿಂದ ಅಜ್ಞಾನಾವೃತನಾಗಿ ಜೀವನಂತೆ ಕಾಣುತ್ತಾನೆ" ಎಂದು ಕೆಲವರೂ "ಆ ಪರಬ್ರಹ್ಮನೇ

ಪರಮಾರ್ಥವಾಗಿ ಉಪಾಧಿಯೊಡನೆ ಸೇರಿ (with limitations) ಜೀವನಂತೆ ತೋರುತ್ತಾನೆ'' ಎಂದು ಇನ್ನು ಕೆಲವರೂ ಹೇಳುತ್ತಾರೆ.

**ಸಿದ್ಧಾನ್ತ "ತತ್ವಮಸಿ" ವಾಕ್ಯದ ಸತ್ಯಾರ್ಥವು:—**

ಜೀವನು ಪರಮಾತ್ಮನಿಗಿಂತ ಬೇರೆಯಾದವನು ಎಂದು ಹೇಳುವ ಭೇದಶ್ರುತಿವಾಕ್ಯಗಳು ಶಂಕೆಗೆ ಆಸ್ಪದವಿಲ್ಲದಂತೆ ಇವೆ. ಅಭೇದಶ್ರುತಿಯು ಅನೇಕ ಶ್ರುತಿವಾಕ್ಯಗಳಿಗೆ ವಿರುದ್ಧವಾಗಿದೆ. "ತತ್ವಮಸಿ'' ಎಂಬ ಶ್ರುತಿವಾಕ್ಯವು "ಶ್ವೇತಕೇತು"ವಿಗೆ ಅವನ ತಂದೆಯು ಉಪದೇಶಿಸಿದುದು. ಆ ಪ್ರಕರಣದಲ್ಲಿ ಕಾರ್ಯರೂಪವಾದ ಜಗತ್ತನ್ನು ವಿವರಿಸಿ "ತದೈಕ್ಷತಬಹುಸ್ಯಾಂ'', "ಅನೇನ ಜೀವೇನಾತ್ಮನಾನುಪ್ರವಿಶ್ಯನಾಮರೂಪೇವ್ಯಾಕರವಾಣಿ" ಎಂಬ ಶ್ರುತಿವಾಕ್ಯಗಳರೀತ್ಯಾ ಕಾರಣಸ್ವರೂಪನಾದ ಬ್ರಹ್ಮನು ತನ್ನ ಸಂಕಲ್ಪದಿಂದಲೇ ಕಾರ್ಯ (ಎಂದರೆ ಪ್ರಪಂಚ) ರೂಪವಾಗಿ ಪರಿಣಮಿಸಿದನು. "ತತ್ವಮಸಿ'' ಎಂದರೆ ನೀನೂ ಅದರಲ್ಲಿ ಸೇರಿದವನು ಎಂಬ ಅರ್ಥದಿಂದ ಹೇಳಿದ ವಾಕ್ಯವಾಗಿದೆ. ಆದ್ದರಿಂದ "ತತ್ವಮಸಿ" ಎಂಬ ಪದದಲ್ಲಿ ಜೀವಬ್ರಹ್ಮೈಕ್ಯವನ್ನು ಹೇಳುವುದಿಲ್ಲವೆಂಬುದೇ ತತ್ವವಿತ್ತುಗಳ ಅಭಿಪ್ರಾಯವು. ಅಣುಪ್ರಾಯನೂ, ಅಲ್ಪಜ್ಞನೂ ಆದ ಜೀವನು ಯಾವ ಪರಬ್ರಹ್ಮನ ಅನುಗ್ರಹದಿಂದ ಅನೇಕ ಜನ್ಮಗಳನಂತರ ಮುಕ್ತನಾಗುವನೋ ಆ ಜೀವನೂ ಪರಬ್ರಹ್ಮನೂ ಒಂದೇ ಎಂದು ಹೇಳುವುದು ಅಸಮಂಜಸವು.

ಮೂರನೆಯ ಪಕ್ಷದಲ್ಲಿ ಸರ್ವಜ್ಞನಾದ ಪರಬ್ರಹ್ಮನಿಗೆ ಅಜ್ಞಾನಾದಿ ದೋಷಗಳನ್ನು ಕಲ್ಪಿಸಬೇಕಾಗುವುದು. ಇದು ಯುಕ್ತಿಸಮ್ಮತವೂ ಅಲ್ಲ ಮತ್ತು ಶ್ರುತಿಸಮ್ಮತವೂ ಅಲ್ಲ. ಆದ್ದರಿಂದ ಈ ಮೂರು ತತ್ವಗಳಿಗಿಂತಲೂ ಬೇರೆಯಾಗಿ (೪) ಜೀವನು ಪರಮಾತ್ಮನ ಶರೀರ (ಎಂದರೆ ಅಂಶವು) ಎಂಬುದು ಸರ್ವಶ್ರುತಿ ಸಮ್ಮತವಾಗಿದೆ. ಇದಕ್ಕೆ "ಯಸ್ಯಾತ್ಮಾಶರೀರಂ" (ಬೃ. ಉ. ೩-೭-೨೨) ಎಂದರೆ ಆತ್ಮವು ಪರಬ್ರಹ್ಮನ ಶರೀರವು ಎಂಬ ಶ್ರುತಿವಾಕ್ಯವು ಆಧಾರವು. ಆದ್ದರಿಂದ ಈ ಪಕ್ಷವೇ ಸರ್ವಶ್ರೇಷ್ಠವಾದದ್ದು.

"ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ" (ಭ. ಗೀ. ೧೫-೭) ಎಂದರೆ ಜೀವರುಗಳೆಲ್ಲರೂ ನನ್ನ ಅಂಶವು ಎಂಬ ಸ್ಮೃತಿವಾಕ್ಯವೂ ಇದನ್ನು ಪ್ರತಿಪಾದಿಸುವುದು. ಸೂರ್ಯನಿಗೆ ಅವನ ಕಿರಣಗಳು ಹ್ಯಾಗೆ ಅಂಶವಾಗುವುವೋ ಹಾಗೆಯೇ ಜೀವರುಗಳು ಪರಮಾತ್ಮನ ಅಂಶಗಳು. ಕಿರಣಗಳಿಗೆ ದರ್ಪಣಾದಿಗಳಲ್ಲಿ ಪ್ರವೇಶದಿಂದ ನ್ಯೂನತೆಗಳುಂಟಾದರೆ ಅದು ಸೂರ್ಯನಿಗೆ ಹ್ಯಾಗೆ ತಗಲುವುದಿಲ್ಲವೋ ಹಾಗೆಯೇ ಜೀವನ ಪ್ರಕೃತಿಸಂಬಂಧದಿಂದ ಉಂಟಾಗುವ ಅಜ್ಞಾನಾದಿ ದೋಷಗಳು ಪರಬ್ರಹ್ಮನನ್ನು ಸ್ಪರ್ಶಿಸುವುದಿಲ್ಲ. ಏಕದೇಶಸ್ಥಿತಸ್ಯಾಗ್ನೇ। ರ್ಜ್ಯೋತ್ಸ್ನಾ ವಿಸ್ತಾರಿಣೀಯಥಾ। ಪರಸ್ಯಬ್ರಹ್ಮಣಶ್ಶಕ್ತಿ। ಸ್ತಥೇದಮಖಿಲಂ ಜಗತ್ ॥ (ವಿ. ಪ್ರ. ೧-೨೨-೫೨) ಎಂದರೆ ಏಕದೇಶದಲ್ಲಿರುವ ಅಗ್ನಿಯು ಯಾವ ರೀತಿಯಲ್ಲಿ ತನ್ನ ಬೆಳಕನ್ನು ನಾನಾಮುಖದಲ್ಲಿ ಹರಡುವುದೋ ಹಾಗೆಯೇ ಪ್ರಕೃತ್ಯತೀತನಾದ ಪರಬ್ರಹ್ಮನ ಶಕ್ತಿಯು ಜಗತ್ತಾಗಿ ವ್ಯಾಪಿಸುವುದು. ಈ ಸಮಸ್ತ ಜಗತ್ತೂ ವಿಷ್ಣುವಿನ ಶರೀರವು ಎಂದು ಹೇಳಿದೆ.

ಅಭೇದತರ್ಕದಲ್ಲಿ ಇನ್ನೂ ಕೆಲವು ದೋಷಗಳು ಕಾಣುವುವು. ಆ ತಾರ್ಕಿಕರರೀತ್ಯಾ ಪರಬ್ರಹ್ಮನೇ ಅಜ್ಞಾನಾವರಣದಿಂದ ಜೀವನಾಗಿ ತೋರುವನು ಎನ್ನುತ್ತಾರೆ. ಸರ್ವಜ್ಞನಾದ ಪರಮಾತ್ಮನಿಗೂ ಅಜ್ಞಾನವನ್ನು ಸ್ವರೂಪಾವರಣವನ್ನಾಗಿ ಕಲ್ಪಿಸಬೇಕಾಗುವುದರಿಂದ ಅಭೇದ ಸಾಧಕಗಳಾದ ಕಾರಣಗಳೆಲ್ಲವೂ ದೋಷಯುಕ್ತವಾಗಿ ಜನಿಸುವುವು. ಪರಬ್ರಹ್ಮನು ನಿರ್ದೋಷನೆಂದು ಹೇಳುವ ಶ್ರುತಿವಾಕ್ಯಗಳಿಗೂ ವಿರೋಧವಾಗುವುದು.

ಭಾಸ್ಕರ ಮತದಲ್ಲಿ "ಪಾರಮಾರ್ಥಿಕೋಪಾದಿಯೊಡನೆ ಕೂಡಿದ ಪರಬ್ರಹ್ಮನಿಗೇ ಜೀವನೆಂದು ಹೆಸರು. ಅನಾದಿಯಾದ ಅದೃಷ್ಟದಿಂದ ಉಂಟಾಗುವ ಉಪಾಧಿಯೂ ಅನಾದಿಯಾದ್ದರಿಂದ ಆಯಾ ಅಂಗಗಳಲ್ಲುಂಟಾಗುವ ದೋಷಗಳು ಆ ಪರಬ್ರಹ್ಮನ ಇತರ ಭಾಗಗಳಲ್ಲಿ ಸಂಭವಿಸುವುದಿಲ್ಲ. ಇದರಿಂದ ಪರಬ್ರಹ್ಮನು ನಿರ್ದುಷ್ಟನೆಂದು ಹೇಳುವ ಶ್ರುತಿವಾಕ್ಯಗಳಿಗೂ ವಿರೋಧವಿಲ್ಲ ಮತ್ತು ಸುಖದುಃಖಾನುಭವಗಳಲ್ಲಿಯೂ ಪರಸ್ಪರ

ಸಂಬಂಧವಿಲ್ಲ" ಎಂದು ಹೇಳುತ್ತಾರೆ. ಆದರೆ ಈ ದೃಷ್ಟಾಂತದಿಂದಲೂ ಪರಬ್ರಹ್ಮನಲ್ಲಿ ಅಂಶಗಳನ್ನು ಪ್ರತ್ಯೇಕಿಸಿ ತೆಗೆಯುವುದಕ್ಕಾಗುವುದಿಲ್ಲವಾದ್ದರಿಂದ ಅದೃಷ್ಟವೂ ಮತ್ತು ಉಪಾಧಿಯೂ ಬ್ರಹ್ಮಕ್ಕೆ ಸೇರಿದ್ದರಿಂದ ದೋಷಗಳೂ ಬ್ರಹ್ಮಾಶ್ರಯಗಳೇ ಆಗುವುವು. ಆದ್ದರಿಂದ ಮೇಲೆ ಹೇಳಿದ ದೋಷವು ಬ್ರಹ್ಮನಿಂದ ನಿವೃತ್ತವಾಗುವುದಿಲ್ಲ. ಉಪಾಧಿಯುಕ್ತನಾದ ಬ್ರಹ್ಮನಿಗೆ ಕಲ್ಪಿತಗಳಾದ ದೋಷಗಳೆಲ್ಲಾ ನಿಜವಾದ ಪರಬ್ರಹ್ಮನನ್ನೇ ಬಿಡದೆ ಆಶ್ರಯಿಸಿಬಿಡುವುವು. ಅದೂ ಅಲ್ಲದೆ ಉಪಾಧಿಯು ಪರಬ್ರಹ್ಮನನ್ನು ಆಕ್ರಮಿಸುವಾಗ ಕೆಲವು ಭಾಗಗಳಲ್ಲಿ ಉಪಾಧಿಯೂ, ಕೆಲವು ಭಾಗಗಳಲ್ಲಿ ಉಪಾಧಿಯಿಲ್ಲದೆಯೂ ಇರಬೇಕು. ಪರಬ್ರಹ್ಮನು ವಿಭುವಾದ್ದರಿಂದ ಅವನು ಚಲಿಸುವುದಿಲ್ಲ. ಆದ್ದರಿಂದ ಉಪಾಧಿಯೇ ಆಯಾ ಭಾಗಗಳಿಗೆ ಓಡಾಡುತ್ತಿರಬೇಕು. ಅಖಂಡವಾದ ಬ್ರಹ್ಮನಲ್ಲಿ ಉಪಾಧಿಯು ಹೀಗೆ ತಿರುಗಾಡುತ್ತಿದ್ದರೆ ಉಪಾಧಿಯಿಲ್ಲದಿರುವ ಕಡೆಗಳಲ್ಲಿಯೂ ಸಂಚರಿಸಬೇಕಾಗುವುದು. ಆಗ ಉಪಾಧಿಯಿಲ್ಲದ ಪ್ರದೇಶಗಳೂ ಉಪಾಧಿಯುಕ್ತವಾಗುವುವು. ಈ ಕಾರಣಗಳಿಂದ ಭೇದತರ್ಕವು ಸರ್ವವಿಧದಲ್ಲಿಯೂ ಅಸಮಂಜಸವು.

## ಪ್ರಾಣ ಮತ್ತು ಇಂದ್ರಿಯಗಳ ವಿಚಾರವು:—

ಈ "ಪ್ರಾಣ"ವೆಂಬುದು (೧) ಬರೀ ವಾಯುವೇ, (೨) ವಾಯುವಿನ ಕ್ರಿಯಾವಿಶೇಷವೇ ಅಥವಾ (೩) ವಾಯುವಿಶೇಷವೇ ಎಂದು ಸಂಶಯ. "ಯಃ ಪ್ರಾಣಸ್ಸವಾಯುಃ" ಎಂದರೆ ಪ್ರಾಣವು ವಾಯುವೆಂದೇ ಅರ್ಥವಾಗುವುದರಿಂದ ವಾಯುವೇ ಪ್ರಾಣನು ಎಂದು ಕೆಲವರು ಹೇಳುತ್ತಾರೆ. ವಾಯುವಿನಲ್ಲಿ ಪ್ರಾಣವೆಂಬ ವ್ಯವಹಾರವಿಲ್ಲದ್ದರಿಂದಲೂ ಉಚ್ಛ್ವಾಸ-ನಿಶ್ವಾಸಗಳನ್ನೇ ಪ್ರಾಣವೆಂದು ವ್ಯವಹಾರದಲ್ಲಿ ಹೇಳುವುದರಿಂದ "ವಾಯುವಿನ ಕ್ರಿಯೆ"ಯನ್ನೇ ಕೆಲವರು ಪ್ರಾಣವೆಂದೂ—ಈ ರೀತಿಯಾದ ಪೂರ್ವಪಕ್ಷಗಳಿರುವುವು.

ಆದರೆ "ಏತಸ್ಮಾಜ್ಜಾಯತೇ ಪ್ರಾಣೋ ಮನಸ್ಸರ್ವೇನ್ದ್ರಿಯಾಣಿ ಚ । ಖಂ ವಾಯುಃ" (ಮುಂ. ಉ. ೨-೧-೩) ಎಂದರೆ ಪರಬ್ರಹ್ಮನಿಂದ

ಪ್ರಾಣ, ಮನಸ್ಸು, ಇಂದ್ರಿಯಗಳು, ವಾಯು ಇತ್ಯಾದಿಗಳುಂಟಾಗುತ್ತವೆ ಎಂಬ ಶ್ರುತಿವಾಕ್ಯರೀತ್ಯಾ ಪ್ರಾಣ ಮತ್ತು ವಾಯು ಇವು ಬೇರೆಬೇರೆ ಯಾದ್ದರಿಂದಲೇ ಈ ಎರಡು ಹೆಸರುಗಳನ್ನೂ ಬೇರೆಬೇರೆ ಹೇಳಿದೆ. ಆದ್ದರಿಂದ ಪ್ರಾಣವು ವಾಯುವಲ್ಲ. ಹಾಗಿದ್ದಿದ್ದರೆ "ನಾರಾಯಣಾ ತ್ಪ್ರಾಣೋಜಾಯತೆ" (ನಾರಾ. ಉ.) ಎಂದು ಶ್ರುತಿವಾಕ್ಯದಲ್ಲಿ ಪ್ರಾಣಕ್ಕೆ ಬೇರೆಯಾಗಿ ಉತ್ಪತ್ತಿಯನ್ನು ಹೇಳುತ್ತಿರಲಿಲ್ಲ. ಆದ್ದರಿಂದ ಪ್ರಾಣನು ವಾಯುವಿನ ಕ್ರಿಯೆಯಲ್ಲವೆಂದು ಸಿದ್ಧಿಸುವುದು. ಪ್ರಾಣವು ಉಚ್ಛ್ವಾಸ ನಿಶ್ವಾಸಗಳೊಡನೆ ಕೂಡಿದ ವಾಯುವಿಶೇಷವು ಎಂದು ಸಿದ್ಧಾನ್ತವು.

ಈ ಪ್ರಾಣವು ಜೀವನಂತೆ ಉತ್ಪತ್ತಿವಿನಾಶಗಳಿಲ್ಲದ ನಿತ್ಯವಸ್ತುವಲ್ಲ. ಇದು ಅಣುಸ್ವರೂಪವಾದದ್ದು.

"ಪ್ರಾಣಮನೂತ್ಕ್ರಾಮನ್ತಂ ಸರ್ವೇಪ್ರಾಣಾ ಅನೂತ್ಕ್ರಾಮನ್ತಿ" (ಬೃ. ಉ. ೪-೪-೩) ಎಂದು ಮರಣಕಾಲದಲ್ಲಿ ಜೀವನಂತೆ ಶರೀರದಿಂದ ಉತ್ಕ್ರಾನ್ತಿಯನ್ನು ಹೇಳಿರುವುದರಿಂದಲೂ, ಇದು ಕಣ್ಣಿಗೆ ಕಾಣುವುದಿಲ್ಲ ವಾದ್ದರಿಂದಲೂ ಇದಕ್ಕೆ "ಅಣು"ಸ್ವರೂಪವು ಸಿದ್ಧಿಸುವುದು.

ಇಂದ್ರಿಯಗಳೂ ಅಣುಸ್ವರೂಪಗಳೆಂದು ಮೇಲಿನ ಶ್ರುತಿವಾಕ್ಯ ರೀತ್ಯಾ ಸಿದ್ಧಿಸುವುದು. ಪ್ರಾಣವೇ ಇಂದ್ರಿಯಗಳ ಸ್ಥಿತಿಗತಿಗಳಿಗೆ ಆಧಾರ ವಾದ್ದರಿಂದ ಇಂದ್ರಿಯಗಳೂ "ಪ್ರಾಣ" ಶಬ್ದದಿಂದ ಶ್ರುತಿಗಳಲ್ಲಿ ಅಲ್ಲಲ್ಲಿ ಹೇಳಲ್ಪಡುತ್ತವೆ. ಈ ಪ್ರಾಣವು ಐದು ವಿಧವಾದ ವ್ಯಾಪಾರಗಳುಳ್ಳದ್ದು. ವೃತ್ತಿಭೇದದಿಂದ ಒಂದೇಆದಪ್ರಾಣವು—ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂಬ ಹೆಸರುಗಳಿಂದ ಶರೀರದಲ್ಲಿ ಬೇರೆಬೇರೆ ಸ್ಥಾನ ಗಳಲ್ಲಿ ವೃತ್ತಿಭೇದದಿಂದ ಕರೆಯಲ್ಪಡುತ್ತದೆ. ಚಕ್ಷುರಾದಿ ಇಂದ್ರಿಯ ಗಳಂತೆ ಪ್ರಾಣನೂ ಜೀವನಿಗೆ ಒಂದು ಉಪಕರಣವು.

**ಇಂದ್ರಿಯಗಳ ವಿಚಾರವು :—**

ಇಂದ್ರಿಯಗಳು ಅಣುಸ್ವರೂಪಗಳು ಎಂದು ಶಾಸ್ತ್ರಸಿದ್ಧವಾದದ್ದು. ಕೆಲವರು ಇಂದ್ರಿಯಗಳು ಏಳು ಎಂದು ಹೇಳುತ್ತಾರೆ. ಆದರೆ ಶಾಸ್ತ್ರ

ರೀತ್ಯಾ ಇಂದ್ರಿಯಗಳು ಹನ್ನೊಂದು. ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು ಮತ್ತು ಮನಸ್ಸು. "ದಶೇಮೇ ಪುರುಷೇ ಪ್ರಾಣಾಃ ಆತ್ಮೈಕಾದಶ" (ಬೃ. ಉ. ೩-೯-೪) ಎಂದರೆ ಜೀವನಿಗೆ ಹನ್ನೊಂದು ಇಂದ್ರಿಯಗಳು—ಹತ್ತು ಇಂದ್ರಿಯಗಳು ಮತ್ತು ಮನಸ್ಸು. ಇಲ್ಲಿ ಆತ್ಮಪದವು ಮನಸ್ಸನ್ನು ಬೋಧಿಸುತ್ತದೆ.

"ಇಂದ್ರಿಯಾಣಿ ದಶೈಕಂಚ........" (ಭ.ಗೀ. ೧೩-೬) ಎಂದು ಇಂದ್ರಿಯಗಳು ಹನ್ನೊಂದು ಎಂದು ಭಗವದ್ಗೀತೆಯಲ್ಲಿಯೂ ಹೇಳಿದೆ.

ಜ್ಞಾನೇಂದ್ರಿಯಗಳು ಐದು ಮತ್ತು ಮನಸ್ಸು ಈ ಆರೂ ಶರೀರ ವಿರುವಾಗಲೂ ಜೀವನ ಜೊತೆಯಲ್ಲಿಯೇ ಇದ್ದು ಮರಣಕಾಲದಲ್ಲಿ ಪ್ರಾಣ ನೊಡನೆ ಸೇರಿ ಜೀವನನ್ನು ಅನುಸರಿಸಿಹೋಗುವುವು. ಕರ್ಮೇಂದ್ರಿಯ ಗಳೈದು ಮಾತ್ರ ಶರೀರದೊಡನೆಯೇ ನಶಿಸುವುವು.

ಈ ಇಂದ್ರಿಯಗಳೆಲ್ಲಾ ಪ್ರಾಣನಂತೆ ಜೀವನಿಗೆ ಉಪಕರಣಗಳಾ ಗಿರುತ್ತವೆ. ಶ್ರುತಿಗಳಲ್ಲಿ ಇಂದ್ರಿಯಗಳು "ಪ್ರಾಣ" ಶಬ್ದದಿಂದ ಕರೆಯ ಲ್ಪಟ್ಟಿವೆ. ಶರೀರದಲ್ಲಿರುವ ಏಕಾದಶೇಂದ್ರಿಯಗಳು ಹ್ಯಾಗೆ ನೋಡು ವುದು, ಕೇಳುವುದು, ಗಮನ ಇತ್ಯಾದಿ ಕಾರ್ಯಗಳನ್ನು ಮಾಡುವುವೋ ಹಾಗೆ ಪ್ರಾಣವು ಅಂತಹ ಕಾರ್ಯಗಳ್ಯಾವುವನ್ನೂ ಮಾಡುವುದಿಲ್ಲವಾದ್ದರಿಂದ ಪ್ರಾಣನು ಜೀವನಿಗೆ ಹ್ಯಾಗೆ ಉಪಕರಣವಾಗುವುದು ? ಎಂಬ ಅನುಮಾನ ವುಂಟಾಗಬಹುದು. ಪ್ರಾಣವು ಇಂದ್ರಿಯಗಳಿಗೆಲ್ಲಾ ಮುಖ್ಯಾಧಾರವು. ಪ್ರಾಣವಿಲ್ಲದಿದ್ದರೆ ಯಾವ ಇಂದ್ರಿಯವೂ ಕೆಲಸಮಾಡಲಾರದು. ಆದ್ದರಿಂದ ಜೀವನಿಗೆ ಪ್ರಾಣವು ಪ್ರಥಮೋಪಕರಣವು.

"ಯಸ್ಮಿನ್ನುತ್ಕ್ರಾಂತೇ ಇದಂ ಶರೀರಂ ಪಾಪಿಷ್ಠತರಮಿವದೃಶ್ಯತೇ" (ಛಾಂ. ಉ. ೫-೧-೭) ಎಂದರೆ "ಯಾವ ಪ್ರಾಣವೊಂದು ಶರೀರವನ್ನು ತ್ಯಜಿಸಿದರೆ ಶರೀರವು ವಿಕಾರವನ್ನು ಹೊಂದುವುದೋ" ಎಂಬ ಶ್ರುತಿವಾಕ್ಯ ರೀತ್ಯಾ ಪ್ರಾಣವು ಮಾತ್ರ ಶರೀರದಲ್ಲಿಲ್ಲದಿದ್ದರೆ ಇಂದ್ರಿಯಗಳೆಲ್ಲಾ ನಶಿಸಿ ಹೋಗುವುವು. ಇಂದ್ರಿಯಗಳು ನಶಿಸಿದರೂ ಪ್ರಾಣನು ಮಾತ್ರ ಸ್ವತಃ ಇರಬಲ್ಲನು. ಪ್ರಾಣನು ಇಂದ್ರಿಯಗಳಲ್ಲಿ ಒಂದಾದದ್ದಲ್ಲ.

ಪರಬ್ರಹ್ಮನ ಸಂಕಲ್ಪದಿಂದ ಪ್ರಾಣಕ್ಕೆ ತನಗೆ ಅಧಿಷ್ಠಾತೃವಾದ ಜೀವನೊಡನೆಯೂ ಮತ್ತು ಅಗ್ನ್ಯಾದಿ ದೇವತೆಗಳಿಗೂ ಇಂದ್ರಿಯಾಧಿಷ್ಠಾತೃತ್ವವುಂಟು.

"ಅಗ್ನಿರ್ವಾಗ್ಭೂತ್ವಾ ಮುಖಂ ಪ್ರವಿಶತ್ ಆದಿತ್ಯ" ಇತ್ಯಾದಿ ಶ್ರುತಿ ವಾಕ್ಯರೀತ್ಯಾ ಅಗ್ನಿ ಸೂರ್ಯಾದಿ ದೇವತೆಗಳು, ವಾಕ್ ಚಕ್ಷುರಾದಿ ಇಂದ್ರಿಯಾಧಿಷ್ಠಾತೃತ್ವಗಳನ್ನು ಭಗವತ್ಸಂಕಲ್ಪದಿಂದ ಪಡೆದಿರುವರು. ಇವರಿಗೆ ಜೀವನೊಡನೆ ಸೇರಿ ಇಂದ್ರಿಯಾಧಿಷ್ಠಾನತ್ವವಿದೆ. ಆದರೆ ಹೃಷೀಕೇಶ ನಾಮಕನಾದ ಪರಮಾತ್ಮನೇ ಇಂದ್ರಿಯಾಧಿಷ್ಠಾತೃವಾದ ಅಂತರ್ಯಾಮಿಯಾಗಿ ಈ ದೇವತೆಗಳಲ್ಲೂ ಮತ್ತು ಇಂದ್ರಿಯಗಳಲ್ಲೂ ಇದ್ದು ಇವರಿಗೆಲ್ಲಾ ಧಾರಕನಾಗಿರುವನು.

**ಪ್ರಪಂಚಸೃಷ್ಟಿ:—**

ಪ್ರಪಂಚಸೃಷ್ಟಿಯಲ್ಲಿ ಸಮಷ್ಟಿಸೃಷ್ಟಿ ಮತ್ತು ವ್ಯಷ್ಟಿಸೃಷ್ಟಿ ಎಂದು ಎರಡು ವಿಧ.

**ಸಮಷ್ಟಿಸೃಷ್ಟಿ:—**

ಅಚಿತ್ತಾದ ಜಗತ್ತು ಮೊದಲು ಅಂದರೆ ಪ್ರಳಯಕಾಲದಲ್ಲಿ ಅವಿಭಕ್ತ ತಮಸ್ಸ್ವರೂಪದಿಂದ ಪರಬ್ರಹ್ಮನಲ್ಲಿ ಲೀನವಾಗಿರುವುದು. ಭಗವಂತನ ಸಂಕಲ್ಪದಿಂದ ಅದು "ವಿಭಕ್ತ" ತಮಸ್ಸಾಗುವುದು. ಅದರಿಂದ ಪ್ರಕೃತಿಯೂ, ಪ್ರಕೃತಿಯಿಂದ ಮಹತ್ ಮತ್ತು ಮಹತ್ತಿನಿಂದ ಅಹಂಕಾರವೂ ಜನಿಸುವುದು. ಈ ಅಹಂಕಾರವು ಸಾತ್ವಿಕ, ರಾಜಸ ಮತ್ತು ತಾಮಸವೆಂದು ಮೂರು ವಿಧ. ಸಾತ್ವಿಕಅಹಂಕಾರದಿಂದ ಏಕಾದಶೇಂದ್ರಿಯಗಳು ಉಂಟಾಗುವುವು. ತಾಮಸಾಹಂಕಾರದಿಂದ ಪಂಚತನ್ಮಾತ್ರೆಗಳುಂಟಾಗುವುವು. ರಾಜಸಾಹಂಕಾರವು ಈ ಎರಡಕ್ಕೂ ಸಹಾಯವಾಗಿರುವುದು. ಪಂಚತನ್ಮಾತ್ರೆಗಳಿಂದ ಪಂಚಭೂತಗಳುಂಟಾಗುವುವು. ಈ ಭೂತಗಳು ಒಂದೊಂದರಿಂದಲೇ ಕೆಲಸವಾಗಲಾರದು. ಆದುದರಿಂದ ಮಣ್ಣು, ನೀರು, ಕಲ್ಲು ಇವುಗಳನ್ನೆಲ್ಲಾ ಕಲೆಸಿ ಗೋಡೆಯನ್ನು ಕಟ್ಟುವಂತೆ, ಪರಬ್ರಹ್ಮನು

ಈ ಪಂಚಭೂತಗಳನ್ನು ಬೆರಸಿ ಅಂಡಸೃಷ್ಟಿಯನ್ನುಂಟುಮಾಡುವನು. ಆ ಅಂಡದಲ್ಲಿ ಚತುರ್ಮುಖನನ್ನು ಸೃಷ್ಟಿಸುವನು. ಇದುವರಿವಿಗೂ ಸಮಷ್ಟಿಸೃಷ್ಟಿ. ಈ ಸೃಷ್ಟಿಯು ಭಗವಂತನಿಂದಲೇ ಸಾಕ್ಷಾತ್ತಾಗಿ ನಡೆಯುವುದು.

**ವ್ಯಷ್ಟಿಸೃಷ್ಟಿ :—**

ಪರಮಾತ್ಮನು ಚತುರ್ಮುಖನಿಗೆ ಅಂತರ್ಯಾಮಿಯಾಗಿದ್ದು ಅವನಿಂದ ಮಾಡಿಸುವ ಸುರನರತಿರ್ಯಕ್‌ಸ್ಥಾವರವೆಂಬ ನಾಲ್ಕುವಿಧವಾದ ಸೃಷ್ಟಿಯು ವ್ಯಷ್ಟಿಸೃಷ್ಟಿಯು. ಇದು ಸದ್ವಾರಕಸೃಷ್ಟಿಯೆಂದೂ ಹೇಳಲ್ಪಡುವುದು.

# ಮೂರನೇ ಪ್ರಕರಣವು

ಹಿಂದಿನ ಎರಡು ಅಧ್ಯಾಯಗಳಲ್ಲಿ ಇತರ ಪಕ್ಷ ನಿರಸನಪೂರ್ವಕವಾಗಿ ಜಗದೇಕಕಾರಣನಾದ ಪರಬ್ರಹ್ಮನನ್ನು ಚಿದಚಿಚ್ಛರೀರನನ್ನಾಗಿ ಸಿದ್ಧಾಂತ ಪೂರ್ವಕವಾಗಿ ನಿರೂಪಿಸಿ, ಈ ಅಧ್ಯಾಯದಲ್ಲಿ ಮೋಕ್ಷೋಪಾಯವಾದ ಭಗವದುಪಾಸನದ ವಿಷಯವು ಹೇಳಲ್ಪಡುತ್ತದೆ. ಭಗವದುಪಾಸನೆಗೆ ವಿಷಯ ವೈರಾಗ್ಯವು ಮೊದಲು ಉಂಟಾಗಬೇಕು. ವೈರಾಗ್ಯ ಉಂಟಾಗ ಬೇಕಾದರೆ ಮೊದಲು ಸಂಸಾರಸ್ವರೂಪವನ್ನು ತಿಳಿಯಬೇಕಾದುದು ಅವಶ್ಯಕವು.

**ಸೂಕ್ಷ್ಮಶರೀರವು :—**

ಜೀವನು ಶರೀರದ ಮರಣಾನಂತರ ಪುಣ್ಯಪಾಪಾನುಭವಾರ್ಥವಾಗಿ ಸ್ವರ್ಗನರಕಾದಿಗಳಲ್ಲಿ ಬೇರೆಬೇರೆ ಶರೀರಗಳನ್ನು ಪರಿಗ್ರಹಿಸುತ್ತಾನೆ. ಶರೀರೋತ್ಪತ್ತಿಗೆ ಮೊದಲು ಭೂತಸೂಕ್ಷ್ಮಗಳು ಜೀವನನ್ನು ಆವರಿಸ ಬೇಕು. ಈ ಭೂತಸೂಕ್ಷ್ಮಗಳನ್ನು ಜೀವನು ತಾನು ತ್ಯಜಿಸುವ ಸ್ಥೂಲ ಶರೀರದಿಂದ ಗ್ರಹಿಸಿಕೊಂಡು ಹೋಗುತ್ತಾನೆ.

"ತಮುತ್ಕ್ರಾಮನ್ತಂ ಪ್ರಾಣೋನೂತ್ಕ್ರಾಮತಿ । ಪ್ರಾಣಮನೂತ್ಕ್ರಾಮನ್ತಂ ಸರ್ವೇಪ್ರಾಣಾ ಅನೂತ್ಕ್ರಾಮನ್ತಿ" (ಬೃ. ಉ. ೪-೪-೨) ಎಂದರೆ—ಜೀವನು ಶರೀರವನ್ನು ಬಿಟ್ಟು ಹೊರಡುವಾಗ ಅವನ ಜೊತೆಯಲ್ಲಿ ಪ್ರಾಣನೂ ಮತ್ತು ಆ ಪ್ರಾಣನ ಜೊತೆಯಲ್ಲಿ ಇಂದ್ರಿಯಗಳೂ ಹೊರಟು ಹೋಗುತ್ತವೆ ಎಂದು ಶ್ರುತಿವಾಕ್ಯವಿರುವುದು. ಈ ಇಂದ್ರಿಯಗಳೆಂಬುದೇ ಜ್ಞಾನೇಂದ್ರಿಯಗಳಾಗಿ ಅಣುಸ್ವರೂಪಗಳಾದ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು ಮತ್ತು ಮನಸ್ಸು ಇವುಗಳು.

"ಮನಷ್ಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿಕರ್ಷತಿ" (ಭ. ಗೀ. ೧೫-೭) ಎಂಬ ಗೀತಾವಾಕ್ಯಪ್ರಕಾರ ಮನಸ್ಸಿನೊಡನೆ ಸೇರಿ ಜ್ಞಾನೇಂದ್ರಿಯಗಳು ಆರು. ಕರ್ಮೇಂದ್ರಿಯಗಳೈದೂ ಶರೀರದೊಡನೆಯೇ ಹುಟ್ಟಿ ಆ ಶರೀರದೊಡನೆಯೇ ನಶಿಸುವುವು. ಆ ಆರು ಇಂದ್ರಿಯಗಳಿಗಾಶ್ರಯವಾದ ಸೂಕ್ಷ್ಮದೇಹವೂ ಪ್ರಾಣನೊಡನೆ ಸೇರಿ ಹೊರಟುಹೋಗುತ್ತದೆ. ಇಂದ್ರಿಯಾಧಿಷ್ಠಾತೃದೇವತೆಗಳಾದ ಅಗ್ನಿಸೂರ್ಯಾದಿಗಳು ತಮ್ಮ ತಮ್ಮ ದೇವತೆಗಳಾದ ಅಗ್ನಿಸೂರ್ಯಾದಿಗಳನ್ನು ಸೇರುತ್ತಾರೆ. ಆ ದೇವತೆಗಳು ಜೀವನನ್ನು ಅನುಸರಿಸಿ ಸ್ವರ್ಗನರಕಾದಿಗಳಿಗೆ ಹೋಗುವುದಿಲ್ಲ.

**ಶರೀರಾವಸಾನಾನಂತರ ಸೂಕ್ಷ್ಮದೇಹವು ಆತ್ಮನೊಡನೆ ಪ್ರಯಾಣ ಮಾಡುವುದು :—**

ಶರೀರವನ್ನು ತ್ಯಜಿಸಿದ ಜೀವನು ಪ್ರಾಣ, ಆರು ಜ್ಞಾನೇಂದ್ರಿಯಗಳು, ಮತ್ತು ಪಂಚಭೂತಸೂಕ್ಷ್ಮಗಳೊಡನೆ ಹೊರಟುಬಿಡುವನು. ಈ ಇಂದ್ರಿಯಗಳು, ಪ್ರಾಣ ಮತ್ತು ಭೂತಸೂಕ್ಷ್ಮಗಳು ಜೀವನಿಗೆ ಸೂಕ್ಷ್ಮ ಅಥವಾ ಲಿಂಗಶರೀರವೆನಿಸುವುದು.

ಪುಣ್ಯಶಾಲಿಯಾಗಿ ತತ್ಫಲವಾಗಿ ಸ್ವರ್ಗಸುಖನ್ನು ಅನುಭವಿಸಬೇಕಾದರೆ ಧೂಮಾದಿಮಾರ್ಗದಿಂದ ಪಿತೃಲೋಕವನ್ನು ಅತಿಕ್ರಮಿಸಿ ಚಂದ್ರಲೋಕವನ್ನು ಸೇರಿ ಅಲ್ಲಿ ಅಮೃತಮಯವಾದ ಶರೀರವನ್ನು ಪಡೆದು ಸ್ವರ್ಗಸುಖವನ್ನು ಅನುಭವಿಸುತ್ತಾನೆ. ಈ ಸ್ವರ್ಗಸುಖವೂ ಕೂಡ

ಆನಂದಕರವಾಗಿ ಇದ್ದಾಗ್ಯೂ ಅಲ್ಲಿಯೂ ಆ ಜೀವನು ಅಲ್ಲಿ ವಾಸಮಾಡುತ್ತಿರುವ ದೇವತೆಗಳಿಗೆ ಅಧೀನನಾಗಿ ಅವರ ಸೇವೆಯಲ್ಲಿ ಇರಬೇಕಾಗುವುದು. ಶ್ರುತಿಯಲ್ಲಿ–"ತಂ ದೇವಾ ಭಕ್ಷಯನ್ತಿ" (ಛಾಂ. ಉ. ೫-೧೦-೩,೪,೫,೬). ಎಂದರೆ ದೇವತೆಗಳು ಅವನಿಂದ ಕೆಲಸಗಳನ್ನು ಮಾಡಿಸಿಕೊಂಡು ತಾವು ಸುಖವನ್ನು ಅನುಭವಿಸುವರು ಎಂದೂ "ಯಥಾಪಶುರೇವಂ ಸ ದೇವಾನಾಮಿತ್ಯನಾತ್ಮವಿದೋಽದೇವಾನಾಮುಪಕರಣತ್ವಂ" (ಬೃ. ಉ. ೧-೪-೧೦) ಎಂದರೆ–ಸ್ವರ್ಗಲೋಕವನ್ನು ಸೇರಿದ ಆತ್ಮಜ್ಞಾನಿಗಳಲ್ಲದ ಜೀವರನ್ನು ದೇವತೆಗಳು ಪಶುಗಳಂತೆ ತಮ್ಮ ಕೆಲಸಗಳಿಗಾಗಿ ಉಪಯೋಗಿಸುತ್ತಾರೆ. ಇತ್ಯಾದಿ ಶ್ರುತಿವಾಕ್ಯರೀತ್ಯಾ ಸ್ವರ್ಗಲೋಕದಲ್ಲಿಯೂ, ಸುಖಾನುಭವ ಕಾಲದಲ್ಲಿ ಆತ್ಮಜ್ಞಾನಿಯಲ್ಲದ ಜೀವನು ದೇವತೆಗಳ ಸೇವಾವೃತ್ತಿಯಲ್ಲಿ ಇರಬೇಕಾಗುವುದು. ಈರೀತಿಯಾಗಿ ಅವನ ಪುಣ್ಯಕರ್ಮಗಳು ಸ್ವರ್ಗಾನುಭವದಿಂದ ನಶಿಸಿದ ಒಡನೆಯೇ ಉಳಿದಿರುವ ಅನಾದಿಯಾದ ಕರ್ಮಶೇಷದೊಡನೆ ಭೂಲೋಕಕ್ಕೆ ತಿರುಗುವನು.

**ಪಂಚಾಗ್ನಿವಿದ್ಯೆ:—**

ಛಾಂದೋಗ್ಯೋಪನಿಷತ್ತಿನಲ್ಲಿ (ಛಾಂ. ಉ. ೫-೩ ರಿಂದ ೧೦) ವಿವರಿಸಿರುವ ಪಂಚಾಗ್ನಿವಿದ್ಯೆಯಲ್ಲಿ ಈ ಸಂಸಾರಾವೃತನಾದ ಜೀವನ ಸಂಚಾರವನ್ನು ಹೇಳುತ್ತದೆ. ಮೊದಲು ಸ್ವರ್ಗಲೋಕವನ್ನು ಸೇರಿದ ಜೀವನು ಅಲ್ಲಿಯ ಸುಖಾನುಭವಾನಂತರ ಮೇಘಸ್ವರೂಪದಿಂದ ಮೇಘದಲ್ಲಿ ಸೇರುತ್ತಾನೆ. ಅಲ್ಲಿಂದ ಮಳೆಯ ಸ್ವರೂಪವನ್ನು ಪಡೆದು ಮಳೆಯೊಡನೆ ಭೂಮಿಯಲ್ಲಿ ಬೀಳುತ್ತಾನೆ. ಅಲ್ಲಿಂದ ಧಾನ್ಯಾದಿ ಅನ್ನಸ್ವರೂಪವಾದ ವಸ್ತುವಿನಲ್ಲಿ ಸೇರುತ್ತಾನೆ. ಈ ಧಾನ್ಯಾದಿಗಳಲ್ಲಿ ಅವನ ಪುನರ್ಜನ್ಮ ಕಾಲವು ಬರುವವರಿವಿಗೂ ಕಾದುಕೊಂಡಿರಬೇಕು. ಅನಂತರ ಅನ್ನಾದಿ ರೂಪದಿಂದ ಪುರುಷನ ಶರೀರವನ್ನು ಸೇರುತ್ತಾನೆ. ಅಲ್ಲಿಂದ "ರೇತಸ್" ಸ್ವರೂಪದಿಂದ ಸ್ತ್ರೀಗರ್ಭವನ್ನು ಸೇರುತ್ತಾನೆ. ಈ ಸ್ತ್ರೀಗರ್ಭದಲ್ಲಿ ಆಯಾ ಶರೀರಗಳನ್ನು ಪಡೆದು ನಾಮರೂಪಗಳೊಡನೆ ಜನಿಸುತ್ತಾನೆ.

ಚಂದ್ರಲೋಕದಿಂದ ಇಳಿದು ಮೇಘ, ಮಳೆ, ಬೀಜ (ಅನ್ನ) ರೇತಸ್ಸುಗಳಲ್ಲಿ ನೆಲೆಸಿರುವ ಜೀವನು ಆಯಾ ಸ್ಥೂಲಸ್ವರೂಪವನ್ನು ಪಡೆಯುವುದಿಲ್ಲ. ತನ್ನ ಸೂಕ್ಷ್ಮರೂಪದಿಂದಲೇ ಆಯಾ ಪದಾರ್ಥಗಳಲ್ಲಿ ಅಡಗಿರುವನು.

ಆ ಜೀವನ ಜ್ಞಾನ ಮತ್ತು ಪುಣ್ಯಕರ್ಮಾನುಸಾರವಾಗಿ ಉತ್ತಮ ಪುರುಷ ಅಥವಾ ಸ್ತ್ರೀಜನ್ಮಗಳನ್ನೋ ಅಥವಾ ಸಾಧಾರಣ ಅಥವಾ ನೀಚ ಮನುಷ್ಯನಾಗಿಯೋ ಹುಟ್ಟುವನು. ಅವನ ಪಾಪವು ಇನ್ನೂ ಪ್ರಬಲವಾಗಿದ್ದರೆ ತಿರ್ಯಗ್ಯೋನಿಗಳಲ್ಲಿ ಜನಿಸುವನು.

ಅತಿಪಾಪಿಷ್ಠನಾಗಿ ಸ್ವರ್ಗಲೋಕವಾಸವೇ ಇಲ್ಲದೆ ನರಕಯಾತನೆಯನ್ನೇ ಅನುಭವಿಸುವ ಜೀವನು ಚಂದ್ರಲೋಕಕ್ಕೆ ಹೋಗುವುದಿಲ್ಲ. ಅವನು ಯಮಲೋಕವನ್ನು ಸೇರಿ ಅಲ್ಲಿ ರೌರವಾದಿ ಸಪ್ತನರಕಗಳಲ್ಲಿ ಯಾತನೆಯನ್ನು ಅನುಭವಿಸುವನು. ಇಂಥಾ ಪಾಪಿಷ್ಠ ಜೀವರಿಗೆ ಪಂಚಾಗ್ನಿ ವಿದ್ಯೆಯ ಮಾರ್ಗದಿಂದ ಪುನರಾಗಮನವಿಲ್ಲ. ಅವರು ಮೇಘದಲ್ಲಿ ಸೇರಿ ಮಳೆಯೊಡನೆ ಭೂಮಿಗೆ ಬಿದ್ದು ಸೊಳ್ಳೆ, ಸಗಣಿಹುಳು ಇತ್ಯಾದಿ ಸ್ತ್ರೀಗರ್ಭಪ್ರವೇಶವಿಲ್ಲದೆ ಉತ್ಪನ್ನವಾಗುವ ಕ್ರಿಮಿಕೀಟಾದಿಗಳಾಗಿ ಹುಟ್ಟುವರು.

**ಸ್ವಪ್ನವಿಚಾರವು :—**

ಬದ್ಧಜೀವನಿಗೆ ಇಹಲೋಕದಲ್ಲಿ ಜಾಗ್ರತ್, ಸ್ವಪ್ನ, ಸುಷುಪ್ತಿ, ಮೂರ್ಛಾ, ಮರಣಗಳೆಂಬ ಐದು ಅವಸ್ಥೆಗಳಿರುವುವು.

ಇವುಗಳಲ್ಲಿ ಜೀವನ ಇಂದ್ರಿಯಗಳು ಎಚ್ಚರವಾಗಿದ್ದು ಇಂದ್ರಿಯಗಳಿಂದ ಆಯಾ ಕೆಲಸಗಳನ್ನು ಮಾಡುತ್ತಿರುವಾಗ ಜಾಗ್ರದವಸ್ಥೆಯೆನ್ನಿಸುವುದು. ಸುಷುಪ್ತಿಯೆಂದರೆ ಮೈಮರೆತುಮಾಡುವ ನಿದ್ರೆ. ಈ ಅವಸ್ಥೆಯಲ್ಲಿ ಉಚ್ಛ್ವಾಸನಿಶ್ವಾಸಾದಿಯಾದ ಪ್ರಾಣವಾಯುವಿನ ವ್ಯಾಪಾರವು ವಿನಾ ದೇಹದ ಸಕಲೇಂದ್ರಿಯಗಳೂ ಸಂಪೂರ್ಣ ವಿಶ್ರಾಂತಿಸುಖವನ್ನು ಅನುಭವಿಸುತ್ತಿರುವುವು. ಇವೆರಡವಸ್ಥೆಗಳ ಮಧ್ಯದಲ್ಲಿ ಸ್ವಪ್ನಾವಸ್ಥೆಯು ಬರುವುದು. ಈ ಅವಸ್ಥೆಯನ್ನು "ಸಂಧ್ಯೆ" ಎಂದೂ ಹೇಳುತ್ತಾರೆ.

ಸ್ವಪ್ನದಲ್ಲಿ ಜೀವನು ವ್ಯಾಪಾರಯುಕ್ತನಾಗಿದ್ದು ರಥ, ಗಜ, ತುರಗಾದಿಗಳನ್ನು ನೋಡಿ ಅನುಭವಿಸುತ್ತಾನೆ. ಈ ಪದಾರ್ಥಗಳನ್ನು ಜೀವನೇ ಸೃಷ್ಟಿಸುತ್ತಾನೆಯೋ ಅಥವಾ ಪರಮಾತ್ಮನಿಂದ ಸೃಷ್ಟಿಸಲ್ಪಡುತ್ತವೆಯೋ? ಎಂದು ಸಂಶಯ.

"ನತತ್ರರಥಾನರಥಯೋಗಾನಪನ್ಥಾನೋ ಭವನ್ತ್ಯಥರಥಾ೯ ರಥಯೋಗಾ೯ ಪಥಸ್ಸೃಜತೇ" (ಬೃ. ಉ. ೪-೩-೧೦) "....ಸಹಿಕರ್ತಾ" ಎಂದರೆ ಜೀವನು ಸ್ವಪ್ನದಲ್ಲಿ ಕಾಣುವ ರಥಾದಿ ಪದಾರ್ಥಗಳನ್ನೆಲ್ಲಾ ತಾನೇ ಸೃಷ್ಟಿಸುತ್ತಾನೆ ಎಂದು ಶ್ರುತಿವಾಕ್ಯಕ್ಕೆ ಅರ್ಥವೆಂದು ಪೂರ್ವಪಕ್ಷದವರು ಹೇಳುತ್ತಾರೆ.

"ಯ ಏಷು ಸುಪ್ತೇಷು ಜಾಗರ್ತಿ ಕಾಮಂ ಕಾಮಂ ಪುರುಷೋ ನಿರ್ಮಿಮಾಣಃ" (ಕಠ. ಉ. ೫-೮) ಎಂದರೆ ಜೀವನು ತನಗೆ ಇಚ್ಛಾ ವಿಷಯಗಳಾದ ಪಶುಪುತ್ರದಾರಾದಿಗಳನ್ನು ಸೃಷ್ಟಿಸುತ್ತಾನೆ ಎಂದು ಹೇಳಿರುವುದರಿಂದ ಜೀವನೇ ಸ್ವಪ್ನಪದಾರ್ಥಗಳನ್ನು ಸೃಷ್ಟಿಸುತ್ತಾನೆ ಎಂದೂ ಪೂರ್ವಪಕ್ಷವು.

ಸಿದ್ಧಾನ್ತ:—

ಆದರೆ "ಯ ಏಷು ಸುಪ್ತೇಷು ಜಾಗರ್ತಿ" ಎಂಬ ಶ್ರುತಿವಾಕ್ಯಕ್ಕೆ "ಮಲಗಿರುವವನಲ್ಲಿ ಯಾವನು ಎಚ್ಚರವಾಗಿರುವನೋ" ಎಂದು ಅರ್ಥವು. ಇದು ಪರಮಪುರುಷನೇ ಎಂದು ಅರ್ಥವಾಗುವುದು. "ಕಾಮಂ ಕಾಮಂ" ಎಂದರೆ ಸಂಕಲ್ಪಮಾತ್ರದಿಂದ ಎಂದು ಅರ್ಥವು. ಪಶುಪುತ್ರಾದಿಗಳಲ್ಲ. ಆದ್ದರಿಂದ ಪರಮಪುರುಷನೇ ಸ್ವಪ್ನಪದಾರ್ಥಗಳನ್ನು ತನ್ನ ಸಂಕಲ್ಪಮಾತ್ರದಿಂದ ಸೃಷ್ಟಿಸುತ್ತಾನೆ ಎಂದು ಅರ್ಥವು.

"ಮಾಯಾಮಾತ್ರಂತು ಕಾರ್ತ್ಸ್ನ್ಯೇನಾನಭಿವ್ಯಕ್ತಸ್ವರೂಪಾತ್" (ಶಾ. ಮಿ. ೩-೨-೩) ಎಂದರೆ ಜೀವನ ಸತ್ಯಸಂಕಲ್ಪತ್ವಾದಿ ಶಕ್ತಿಗಳು ಸಂಸಾರದೆಸೆಯಲ್ಲಿ ಪ್ರಕಾಶಿಸಲಾರದಾದ್ದರಿಂದ (ಆ ಶಕ್ತಿಗಳಿಗೆ ಸಂಸಾರ ದೆಸೆಯಲ್ಲಿ ಸಾಮರ್ಥ್ಯವಿಲ್ಲವಾದ್ದರಿಂದ) ಆಶ್ಚರ್ಯಸ್ವರೂಪಗಳಾದ ಸ್ವಪ್ನ

ಪದಾರ್ಥಗಳನ್ನೆಲ್ಲಾ ಪರಮಪುರುಷನೇ ಸೃಷ್ಟಿಸುವನು ಎಂದು ಅರ್ಥವು. ಸ್ವಪ್ನ ಪದಾರ್ಥಗಳು ಆಶ್ಚರ್ಯಸ್ವರೂಪಗಳಾಗಿಯೂ, ಆ ಜೀವಾತ್ಮನಿಗೆ ಮಾತ್ರ ಕಾಣುವವುಗಳಾಗಿಯೂ, ಒಂದಾದಮೇಲೆ ಒಂದು ಬಂದು ಅದೃಶ್ಯವಾಗುತ್ತಿರುವುದರಿಂದಲೂ, ಇದನ್ನು "ಮಾಯಾಮಾತ್ರಂತು" ಎಂದು ಹೇಳಿದೆ. ಸತ್ಯಸಂಕಲ್ಪನಾದ ಪರಮಪುರುಷನೇ ತನ್ನ ಇಚ್ಛಾಮಾತ್ರದಿಂದ ಈ ಪದಾರ್ಥಗಳನ್ನು ಸೃಷ್ಟಿಸಿ, ಮಾಯಮಾಡುತ್ತಿರುತ್ತಾನೆ.

ಈ ವಿಧವಾದ ಸ್ವಪ್ನವು ನಿಜವು. ಇಂದ್ರಜಾಲವಿದ್ಯೆಯಲ್ಲಿ "ಮಾಯಾಮಾತ್ರಂ" ಎಂಬ ಪದವು ಆಶ್ಚರ್ಯತ್ವವನ್ನು ಸೂಚಿಸುವುದೇ ವಿನಾ ಸ್ವಪ್ನವು ಅಸತ್ಯವಾಗಲಿ, ಇಂದ್ರಜಾಲವಾಗಲಿ ಅಲ್ಲ. ಆತ್ಮನಿಗೆ ಸತ್ಯಸಂಕಲ್ಪಶಕ್ತಿಯು, ಶುದ್ಧಾತ್ಮಸ್ವರೂಪದ ಸಹಜಗುಣವಾಗಿದ್ದರೂ ಸಂಸಾರದೆಸೆಯಲ್ಲಿ ಅದು ಶಕ್ತಿಯಿಲ್ಲದೆ ಒಳಗೇ ಅಡಗಿರುವುದು. ಆದ್ದರಿಂದ ಸ್ವಪ್ನಪದಾರ್ಥಗಳೆಲ್ಲವೂ ಪರಮಪುರುಷನಿಂದ ಸೃಷ್ಟಿಸಲ್ಪಡುವುವು ಎಂದು ಸಿದ್ಧಾಂತವು. ಪರಮಾತ್ಮನ ಸಂಕಲ್ಪದಿಂದಲೇ ಬದ್ಧಜೀವನಿಗೆ ಸತ್ಯಸಂಕಲ್ಪತ್ವಾದಿಶಕ್ತಿಗಳು ತಿರೋಹಿತಗಳಾಗಿರುವುವು. ಇದೂ ಜೀವನ ಕರ್ಮಾನುಗುಣವಾಗಿ ಆಗುವುದು. ಪ್ರಳಯಕಾಲದಲ್ಲಿಯೂ ಜೀವನು ಭೂತಸೂಕ್ಷ್ಮಾವೃತನಾಗಿರುವುದರಿಂದ ಭಗವತ್ಸಂಕಲ್ಪದಿಂದ ಆಗಲೂ, ಜ್ಞಾನಶಕ್ತ್ಯಾದಿಗಳು ಜೀವನಿಗೆ ಇರುವುದಿಲ್ಲ.

ಈ ವಿಧವಾದ ಸ್ವಪ್ನಗಳೂ ಶುಭಾಶುಭಸೂಚಕಗಳೆಂದು ಸ್ವಪ್ನಶಾಸ್ತ್ರಜ್ಞರು ಹೇಳುತ್ತಾರೆ.

"ಯದಾಕರ್ಮಸು ಕಾಮ್ಯೇಷು ಸ್ತ್ರಿಯಂ ಸ್ವಪ್ನೇಷುಪಶ್ಯತಿ ಸಮೃದ್ಧಿಂ ತತ್ರ ಜಾನೀಯಾತ್ತಸ್ಮಿನ್ ಸ್ವಪ್ನನಿದರ್ಶನೇ........ಅಥಸ್ವಪ್ನೇ ಪುರುಷಂ ಕೃಷ್ಣಂ ಕೃಷ್ಣದನ್ತಂ ಪಶ್ಯತಿ ಸಏನಂಹನ್ತೀತ್ಯಾದೇಶ್ಚ" (ಛಾಂ. ಉ. ೫-೨-೯) ಎಂಬ ಶ್ರುತಿವಾಕ್ಯರೀತ್ಯಾ ಕಾಮ್ಯಕರ್ಮದಲ್ಲಿ ಪ್ರವೇಶಿಸಿರುವವನಿಗೆ ಸ್ವಪ್ನದಲ್ಲಿ ಸ್ತ್ರೀಯನ್ನು ಕಂಡರೆ ಶುಭವೂ ಕರೀಮನುಷ್ಯನನ್ನು ಕಂಡರೆ ಅಶುಭವೂ ಉಂಟಾಗುವುದೆಂದು ಹೇಳಿರುತ್ತದೆ.

**ಸುಷುಪ್ತ್ಯವಸ್ಥೆಯು :—**

"ತದ್ಯತ್ರೈತತ್ಸುಪ್ತಃ ಸಮಸ್ತಸ್ಸಂಪನ್ನಃ, ಸ್ವಪ್ನಂ ನ ವಿಜಾನಾತಿ ಆಸುತದಾ ನಾಡೀಷು ಸುಪ್ತೋ ಭವತಿ" (ಛಾಂ. ಉ. ೮-೬-೩) ಎಂದರೆ– ಜೀವನು ಸ್ವಪ್ನಾದಿಗಳಿಲ್ಲದೆ ಸುಖವಾಗಿ ಗಾಢನಿದ್ರೆಯನ್ನು ಮಾಡುವಾಗ ಅದಕ್ಕೆ ಸುಷುಪ್ತ್ಯವಸ್ಥೆಯೆಂದು ಹೆಸರು. ಈ ಅವಸ್ಥೆಯಲ್ಲಿ ಜೀವನು ನಾಡಿಯಲ್ಲಿ ಸುಖವಾಗಿ ನಿದ್ರಿಸುತ್ತಿರುವನು ಎಂದು ಅರ್ಥವು. "ಅಥ ಯದಾ ಸುಷುಪ್ತೋಭವತಿ ಯದಾ ನಕಸ್ಯಚ ನವೇದ ಹಿತಾನಾಮ ನಾಡ್ಯೋ ದ್ವಾಸಪ್ತತಿ ಸಹಸ್ರಾಣಿ ಹೃದಯಾತ್ಪುರೀತತಮಭಿ ಪ್ರತಿಷ್ಠನ್ತೇ ತಾಭಿಃ ಪ್ರತ್ಯವಸೃಪ್ಯಪುರೀತತಿಶೇತ" (ಬೃ. ಉ.೨-೧-೯) ಎಂದರೆ— ಜೀವನು ಸುಷುಪ್ತಿ ದೆಸೆಯಲ್ಲಿ ಹೃದಯದಿಂದ ಹೊರಟು ವ್ಯಾಪಿಸಿರುವ ಎಪ್ಪತ್ತೆರಡುಸಾವಿರ ನಾಡಿಗಳಲ್ಲಿ "ಪುರೀತತ್" ಎಂಬ ಸುಷುಮ್ನಾ ನಾಡಿ ಯಲ್ಲಿ ಸುಖವಾಗಿ ನಿದ್ರಿಸುವನು ಎಂದು ಅರ್ಥವು.

"ಯತ್ರೈತತ್ಪುರುಷಸ್ಸ್ವಪಿತಿನಾಮಸತಾಸೋಮ್ಯ ತದಾಸಂಪನ್ನೋ ಭವತಿ" (ಛಾಂ. ಉ. ೬-೮-೧) ಎಂದರೆ ಜೀವನು ಸುಷುಪ್ತ್ಯವಸ್ಥೆಯಲ್ಲಿ ಪರಮಪುರುಷನಲ್ಲಿ ಸೇರಿರುವನು. ಆಗ ಸುಖನಿದ್ರೆಯನ್ನು ಅನುಭಸುವನು ಎಂದು ಅರ್ಥ.

ಮೇಲೆ ಹೇಳಿರುವ ಮೂರು ಶ್ರುತಿವಾಕ್ಯಗಳೂ ಸೇರಿ ಜೀವನ ಸುಷುಪ್ತ್ಯವಸ್ಥೆಯನ್ನು ಸೂಚಿಸುವುವು. ಈ ಶ್ಲೋಕಗಳಲ್ಲಿ ಜೀವನು ಸುಷುಪ್ತ್ಯವಸ್ಥೆಯಲ್ಲಿ ನಾಡಿಯಲ್ಲಿ ನಿದ್ರಿಸುವನು, ಪುರೀತತ್ ಎಂಬ ನಾಡಿ ಯಲ್ಲಿ ನಿದ್ರಿಸುವನು; ಮತ್ತು ಪರಬ್ರಹ್ಮನಲ್ಲಿ ಸೇರಿ ಸುಖವಾಗಿ ನಿದ್ರಿ ಸುವನು ಎಂದು ಮೂರು ಸ್ಥಾನಗಳನ್ನು ಸೂಚಿಸುವಂತಿದೆ. ಇದರಿಂದ ಜೀವನು ಸುಷುಪ್ತಿಯಲ್ಲಿ ಮೂರು ಸ್ಥಳಗಳಲ್ಲಿ ಇರುತ್ತಾನೆ ಎಂದು ಅರ್ಥ ವಲ್ಲ, ಇವು ಮೂರನ್ನೂ ಸೇರಿಸಿದರೆ ಒಂದೇ ಒಂದು ಸ್ಥಾನವು ನಿರ್ದೇಶ ವಾಗುವುದು. ಜೀವನು ಸುಷುಪ್ತ್ಯವಸ್ಥೆಯಲ್ಲಿ ನಾಡಿಗಳಲ್ಲಿ ಶ್ರೇಷ್ಠವಾದ "ಪುರೀತತ್" ಎಂಬ ನಾಡಿಯಲ್ಲಿ ಪರಬ್ರಹ್ಮನಲ್ಲಿ ಲಯಿಸಿ ಸುಖನಿದ್ರೆ ಯನ್ನು ಅನುಭವಿಸುವನು, ಇದೇ ಸಿದ್ಧಾನ್ತವು. "ಪ್ರಾಸಾದ ಖಟ್ವಾ

ಪರ್ಯಂಕ" ನ್ಯಾಯದಂತೆ ನಾಡಿಗಳೇ ಕೊಠಡಿಯಾಗಿಯೂ, ಪುರೀತತ್ ನಾಡಿಯೇ ಮಂಚವಾಗಿಯೂ, ಪರಮಾತ್ಮನೇ ಪರ್ಯಂಕ ಎಂದರೆ ಮೆತ್ತೆಯಾಗಿಯೂ, ಮೂರು ಹೆಸರುಗಳೂ ಒಂದೇ ಸ್ಥಾನವನ್ನು ನಿರ್ದೇಶಿಸುವುವು.

ಆದರೆ ಸುಷುಪ್ತಿಯಲ್ಲಿ ಜೀವನು ಪರಮಾತ್ಮನಲ್ಲಿ ಲಯಿಸಿದ್ದೇ ಆದರೆ ಆ ಲಯವೇ ಮೋಕ್ಷಪ್ರಾಪ್ತಿಯಾಗಿ ಯಾತಕ್ಕೆ ಆಗಬಾರದು ಎಂದು ಕೆಲವರು ಪ್ರಶ್ನೆ ಮಾಡಬಹುದು. ಆದರೆ ಮೋಕ್ಷವು ಆ ರೀತಿಯುಂಟಾಗುವುದಿಲ್ಲ. ಅವನು ಅನುಭವಿಸಬೇಕಾದ ಕರ್ಮವು ಇನ್ನೂ ಇರುವುದರಿಂದ ಸುಷುಪ್ತಿಯಲ್ಲಿ ಮೋಕ್ಷವುಂಟಾಗಲಾರದು. ಮೊದಲು ಗಾಢನಿದ್ರೆಯಲ್ಲಿ ಮಲಗಿದ್ದವನು ತಾನೇ ನಿದ್ರಾಸುಖವನ್ನು ಅನುಭವಿಸಿ ಎದ್ದವನು ಎಂಬ ಜ್ಞಾನವಿರುವುದರಿಂದ ಸುಷುಪ್ತಿಯು ಮುಕ್ತಿಯಲ್ಲ. ಶ್ರುತಿಯಲ್ಲಿಯೂ ಕೂಡ "ತಇಹವ್ಯಾಘ್ರೋವಾ ಸಿಂಹೋವಾ ವೃಕೋವಾ ಯದ್ಯದ್ಭವನ್ತಿ ತದಾ ಭವನ್ತಿ" (ಛಾಂ. ಉ, ೬-೧೦-೨) ಎಂದರೆ ಗಾಢನಿದ್ರಾಕಾಲದಲ್ಲಿ ನಿದ್ರೆ ಹೋದ ಹುಲಿ, ಸಿಂಹ, ತೋಳ, ಇತ್ಯಾದಿ ಯಾರೇ ಆಗಲಿ ಅವನೇ ಎಚ್ಚೆತ್ತು ಏಳುತ್ತಾನೆ ಎಂದು ಹೇಳಿದೆ.

**ಮೂರ್ಛಾವಸ್ಥೆ :—**

ಜಾಗ್ರತ್, ಸ್ವಪ್ನ, ಸುಷುಪ್ತಿಗಳಲ್ಲದೆ ಮೂರ್ಛಾವಸ್ಥೆ ಎಂಬ ಮತ್ತೊಂದು ಅವಸ್ಥೆಯೂ ಜೀವನಿಗೆ ಆಗಾಗ ಬರುವುದುಂಟು. ಮೂರ್ಛೆಯು ಪ್ರತಿದಿನವೂ ಮನುಷ್ಯನು ಹೊಂದುವ ಸ್ವಪ್ನ ಸುಷುಪ್ತ್ಯಾದಿ ನಿದ್ರಾವಸ್ಥೆಯಲ್ಲ. ಉಸಿರಾಡುವುದರಿಂದಲೂ ಮೂರ್ಛೆಯು ತಿಳಿದ ಮೇಲೆ ಪ್ರಜ್ಞೆಯುಂಟಾಗಿ ಮನುಷ್ಯನು ಏಳುವುದರಿಂದಲೂ ಇದು ಮರಣವಲ್ಲ. ಮೂರ್ಛೆಯಲ್ಲಿ ಇಂದ್ರಿಯ ವ್ಯಾಪಾರಗಳ್ಯಾವುವೂ ಇರುವುದಿಲ್ಲ. ಯಾವುದೋ ರೋಗಾದಿಗಳಿಂದಾಗಲಿ, ಪೆಟ್ಟು ತಗಲುವುದರಿಂದಾಗಲಿ ಮೂರ್ಛಾವಸ್ಥೆಯುಂಟಾಗುವುದು. ಮೂರ್ಛಾವಸ್ಥೆಯು ಅರ್ಧ ಮರಣಾವಸ್ಥೆಯೆಂದು ಸಿದ್ಧಾನ್ತವು.

**ಉಪಾಸನ ವಿಷಯವು:—**

ಜೀವನ ಸಂಸಾರ ಸ್ವರೂಪವನ್ನೂ ಮತ್ತು ಅವನ ವಿವಿಧ ಅವಸ್ಥೆ

ಗಳನ್ನೂ ವಿವರಿಸಿದನಂತರ ಮೋಕ್ಷೋಪಾಯವಾದ "ಉಪಾಸನ"ದ ವಿಚಾರವು ನಿರೂಪಿಸಲ್ಪಡುತ್ತದೆ. ಉಪಾಸನದ ಲಕ್ಷಣವನ್ನು ತಿಳಿಯ ಬೇಕಾದದ್ದು ಅತ್ಯಾವಶ್ಯಕವು.

ಉಪಾಸನೆಗಳು ಅನೇಕ ವಿಧವಾಗಿರುವುವು. ಮೋಕ್ಷಸಾಧನಗಳಾದ ಉಪಾಸನೆಗಳಲ್ಲಿ ಉಪಾಸ್ಯಸ್ವರೂಪವಾದ ದೈವವು ಒಂದು ಮೊದಲು ಇರ ಬೇಕು. ಆ ದೈವದ ಸ್ವರೂಪರೂಪಗುಣಾದಿಗಳ ಭಾವನೆಯು ಮನಸ್ಸಿಗೆ ಮನದಟ್ಟಾಗಬೇಕು. ಉಪಾಸನಾಕ್ರಮವನ್ನೂ ನಂತರ ತಿಳಿದುಕೊಳ್ಳ ಬೇಕು. ಉಪಾಸನೆಗೆ ಅತ್ಯವಶ್ಯಕವಾದ ಶಮದಮಾದಿ ಗುಣಗಳನ್ನು ಸಂಪಾದಿಸಿಕೊಳ್ಳಬೇಕು. ಇವುಗಳನ್ನೆಲ್ಲಾ ಸರಿಯಾಗಿ ತಿಳಿದುಕೊಂಡ ಮೇಲೆಯೇ ಉಪಾಸನಾಕ್ರಮವು ಸರಿಯಾಗುವುದು; ಮತ್ತು ಆ ಉಪಾಸನ ದಿಂದ ಪ್ರೀತನಾದ ಭಗವಂತನು ಫಲಪ್ರದನಾಗಿಯೂ ಆಗುವನು.

**ಉಪಾಸ್ಯನಾದ ಭಗವತ್ಸ್ವರೂಪ ಗುಣಾದಿಗಳು :—**

ಪರಮಪುರುಷನಿಗೆ ನಿಖಿಲಹೇಯಪ್ರತ್ಯನೀಕತ್ವ—(ಎಂದರೆ ಸಮಸ್ತ ದೋಷರಾಹಿತ್ಯತ್ವ) ಮತ್ತು ಅನಂತಕಲ್ಯಾಣಗುಣತ್ವ (ಎಂದರೆ ಸಮಸ್ತ ಸದ್ಗುಣಗಳಿಗೂ ನಿಧಿಯಂತೆ ಪೂರ್ಣವಾಗಿ ತುಂಬಲ್ಪಟ್ಟವನು) ಎಂಬ ಮುಖ್ಯವಾದ ಎರಡು ಸ್ವರೂಪನಿರೂಪಕ ಗುಣಗಳಿವೆ. ಈ ಎರಡು ಗುಣಗಳೂ ಪರಬ್ರಹ್ಮನ ಸ್ವರೂಪನಿರೂಪಕವಾದ "ಉಭಯಲಿಂಗ" (ಎಂದರೆ ಚಿಹ್ನೆ)ಗಳೆಂದು ಹೇಳಲ್ಪಡುವುವು.

ನಿಖಿಲಹೇಯಪ್ರತ್ಯನೀಕತ್ವವೆಂದರೆ—ಸೂರ್ಯನು ಬಂದ ಕಡೆಯ ಲ್ಲೆಲ್ಲಾ ಹ್ಯಾಗೆ ಕತ್ತಲೆಯು ಇರಲಾರದೆ ಓಡಿಹೋಗುವುದೋ ಹಾಗೆಯೇ ಈ ಪರಮಾತ್ಮನ ಸಂಕಲ್ಪದಿಂದಲೇ ದೋಷಗಳು ತೊಲಗಿಹೋಗುವುವು. ಇದರಿಂದ ಪರಮಪುರುಷನಲ್ಲಿ ಯಾವ ವಿಧವಾದ ದೋಷಗಳೂ ಇರ ಲಾರವು ಎಂದು ಹೇಳಬೇಕಾದ್ದೇ ಇಲ್ಲ.

"ಅಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋಽವಿಜಿಘ ತ್ಸೋಽಪಿಪಾಸಸ್ಸತ್ಯಕಾಮಸ್ಸತ್ಯಸಂಕಲ್ಪಃ" (ಛಾಂ. ಉ. ೮-೧-೫)

ಎಂದರೆ—ಪರಬ್ರಹ್ಮನು ಪಾಪ, ಜರೆ, ಮೃತ್ಯು, ಶೋಕ, ಇತ್ಯಾದಿ ಸಮಸ್ತ ವಿಧವಾದ ದೋಷರಹಿತನು, ಸತ್ಯಕಾಮನು, ಮತ್ತು ಸತ್ಯಸಂಕಲ್ಪನು.

"ಸತ್ಯಂ ಜ್ಞಾನಮನನ್ತಂಬ್ರಹ್ಮ....ಆನಂದೋಬ್ರಹ್ಮ" (ತೈ. ಉ. ೨-೧-೧) ಎಂದರೆ—ಪರಬ್ರಹ್ಮನು ಸತ್ಯಸ್ವರೂಪನು, ಜ್ಞಾನಸ್ವರೂಪನು, ಸರ್ವಾಂತರ್ಯಾಮಿಯು, ಆನಂದಮಯನು.

"ಸಮಸ್ತ ಕಲ್ಯಾಣಗುಣಾತ್ಮಕೋऽಸೌ। ಸ್ವಶಕ್ತಿಲೇಶಾದ್ಧೃತ ಭೂತಸ(ವ)ರ್ಗಃ॥ ತೇಜೋಬಲೈಶ್ವರ್ಯ ಮಹಾವಬೋಧ ಸುವೀರ್ಯ ಶಕ್ತ್ಯಾದಿ ಗುಣೈಕರಾಶಿಃ॥ ಪರಃಪರಾಣಾಂ ಸಕಲಾನಯತ್ರ। ಕ್ಲೇಶಾ ದಯಸ್ಸನ್ತಿ ಪರಾವರೇಶೇ॥" (ವಿ. ಪು. ೬-೫-೮೪-೮೫) ಎಂದರೆ—ಪರಬ್ರಹ್ಮನು ಸಮಸ್ತ ಕಲ್ಯಾಣಗುಣಪರಿಪೂರ್ಣನೂ, ಸ್ವಶಕ್ತಿಲೇಶಮಾತ್ರ ದಿಂದ ಸಮಸ್ತ ಬ್ರಹ್ಮಾಂಡಗಳನ್ನೂ ಧರಿಸಿರುವವನಾಗಿಯೂ, ಜ್ಞಾನ, ತೇಜಸ್ಸು, ಬಲ, ಐಶ್ವರ್ಯ, ವೀರ್ಯ, ಶಕ್ತ್ಯಾದಿ ಗುಣನಿಧಿಸ್ವರೂಪನಾಗಿಯೂ ದೇವತೆಗಳಿಗೂ ದೈವವಾಗಿಯೂ ಜೀವರ ಕ್ಲೇಶವನ್ನು ನಿವಾರಿಸುವವನಾಗಿಯೂ ಇರುವನು.

"ದ್ವಾಸುಪರ್ಣಾಸಯುಜಾಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ। ತಯೋರನ್ಯಃ ಪಿಪ್ಪಲಂಸ್ವಾದ್ವತ್ತಿ ಅನಶ್ನನ್ನನ್ಯೋ ಅಭಿಚಾಕಶೀತಿ" (ಮುಂ. ಉ. ೩-೧-೧) ಎಂದರೆ (ಶರೀರದಲ್ಲಿ) ಎರಡು ಪಕ್ಷಿಗಳು (ಜೀವಾತ್ಮ-ಪರಮಾತ್ಮರು) ಯಾವಾಗಲೂ ಕುಳಿತಿರುತ್ತವೆ. ಅವುಗಳಲ್ಲಿ ಒಂದು ಎಂದರೆ (ಜೀವಾತ್ಮನು) ಕರ್ಮಫಲವನ್ನು ಭುಜಿಸುತ್ತದೆ. ಮತ್ತೊಂದು ಅದನ್ನು ತಿನ್ನದೆ ಪ್ರಕಾಶಮಾನವಾಗಿರುತ್ತದೆ.

ಇತ್ಯಾದಿ ಶ್ರುತಿವಾಕ್ಯರೀತ್ಯಾ ಪರಬ್ರಹ್ಮನಿಗೆ ತನ್ನ ಅಂತರ್ಯಾಮಿತ್ವ ದಿಂದ ದೋಷಗಳು ಅಂಟದಿರುವುದಲ್ಲದೆ ತಾನು ದೋಷರಹಿತನಾಗಿಯೂ, ಪರಿಶುದ್ಧನಾಗಿಯೂ ಮತ್ತು ಜೀವಾತ್ಮರುಗಳ ದೋಷಗಳನ್ನು ಪರಿಹಾರ ಮಾಡುವವನಾಗಿಯೂ, ಸಮಸ್ತ ಕಲ್ಯಾಣಗುಣನಿಧಿಯಾಗಿಯೂ ಇರುವನು.

ಪರಬ್ರಹ್ಮನು ಜೀವರಂತೆ ಕರ್ಮವಶ್ಯನಲ್ಲದ್ದರಿಂದ ಅವನಿಗೆ ಪ್ರಾಕೃತ ಶರೀರವಿಲ್ಲ. ಉಪಾಸಕರ ಅನುಕೂಲಗಳಿಗಾಗಿ ಪರಬ್ರಹ್ಮನು ಅನೇಕ ನಾಮರೂಪಗಳಿಂದ ತೋರುವನು. ಆಕಾಶವನ್ನೂ, ಜಲವನ್ನೂ ಹ್ಯಾಗೆ ಕಲಶದಲ್ಲಿ ಇಟ್ಟು ಪೂಜಿಸುತ್ತೇವೋ ಮತ್ತು ಆ ಆಕಾಶ ಮತ್ತು ಜಲಗಳು ಪೂಜಾಕಾಲದಲ್ಲಿ ಹ್ಯಾಗೆ ಕಲಶದಲ್ಲಿ ಇರುವುವೋ ಹಾಗೆಯೇ ಪರಬ್ರಹ್ಮನು ಉಪಾಸಕರ ಅನುಗ್ರಹಾರ್ಥವಾಗಿ ಮೂರ್ತ್ಯಾದಿಗಳಲ್ಲಿ ನೆಲೆಸಿರುವನು.

**ಭಕ್ತಿ ವಿಚಾರ:—**

ಭಗವಲ್ಲಾಭಕ್ಕೆ ಅವನಲ್ಲಿ ಮಾಡುವ ಅನನ್ಯವಾದ ಭಕ್ತಿಯೇ ಸಾಧನವಾಗುವುದು. ಭಗವದ್ಭಕ್ತಿಯಿಲ್ಲದಿದ್ದರೆ ಶಾಸ್ತ್ರವ್ಯಾಸಂಗ, ಜ್ಞಾನ ಯೋಗಾದಿಗಳು ಫಲಕಾರಿಗಳಾಗುವುದಿಲ್ಲ.

" ನಾಯಮಾತ್ಮಾ ಪ್ರವಚನೇನಲಭ್ಯೋ ನಮೇಧಯಾ ನಬಹುನಾ ಶ್ರುತೇನ | ಯಮೇವೈಷ ವೃಣುತೇ ತೇನಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನೂಗ್‌ಂಸ್ವಾ || (ಕಠ. ಉ. ೧-೨-೨೩) ಎಂದರೆ— ಪರಮಾತ್ಮನು ಜ್ಞಾನದಿಂದಲಾಗಲೀ, ತಪಸ್ಸಿನಿಂಲಾಗಲೀ ಮತ್ತು ಇತರ ವಿಧವಾದ ವಿದ್ಯಾಭ್ಯಾಸಗಳಿಂದಾಗಲೀ ಸಿಕ್ಕುವುದಿಲ್ಲ. ಅವನಲ್ಲಿ ಭಕ್ತಿಯನ್ನು ಮಾಡುವುದರಿಂದ ಸುಪ್ರೀತನಾಗಿ ಅವನು ಅನುಗ್ರಹಿಸಿದರೆ ಮಾತ್ರವೇ ನಮಗೆ ಲಭ್ಯವಾಗುವನು.

**ಪರಬ್ರಹ್ಮನೇ ಉಪಾಯವು :—**

ಪರಬ್ರಹ್ಮನೇ ತತ್ಪ್ರಾಪ್ತಿಗೆ ಉಪಾಯವು, ಎಂದರೆ—ಸೇತುಸ್ವರೂಪನು. "ಅಮೃತಸ್ಯೈಷಸೇತುಃ" (ಮುಂ. ಉ. ೨-೨-೫) ಎಂದರೆ ಮೋಕ್ಷಕ್ಕೆ ಪರಬ್ರಹ್ಮನು ಸೇತು (ಎಂದರೆ ಮೋಕ್ಷಕ್ಕೂ ನಮಗೂ ಮಧ್ಯೆ ಇರುವ ಜಾಗವನ್ನು ದಾಟುವುದಕ್ಕೆ ಸಾಧನ) ಪ್ರಾಯನು—ಎಂದು ಶ್ರುತಿ ವಾಕ್ಯವಿದೆ.

ಮೋಕ್ಷಪ್ರಾಪ್ತಿಗೆ ಪರಬ್ರಹ್ಮೋಪಾಸನವೊಂದೇ ಮಾರ್ಗವು. ಇತರ ವಿಧವಾದ ಸಾಧನಗಳು ನಿಷೇಧಿಸಲ್ಪಟ್ಟಿವೆ.

"ತೇನೇದಂಪೂರ್ಣಂ ಪುರುಷೇಣ ಸರ್ವಂ-ತತೋಯದುತ್ತರತರ" (ಶ್ವೇ. ಉ. ೩-೯-೧೦) ಎಂದರೆ—ಆ ಪರಮಪುರುಷನಿಂದಲೇ ಸಮಸ್ತ ವಸ್ತುಗಳೂ ಪೂರ್ಣವಾಗಿ ವ್ಯಾಪಿಸಲ್ಪಟ್ಟಿವೆ; ಮತ್ತು ಅವನಿಗಿಂತಲೂ ಬೇರೆ ಪರತತ್ತ್ವವಿಲ್ಲ ಎಂಬ ಶ್ರುತಿವಾಕ್ಯದಿಂದಲೂ "ನತಸ್ಯೇಶೇಕಶ್ಚನನಹ್ಯೇತಸ್ಮಾದಿತಿನೇತ್ಯನ್ಯತ್ ಪರಮಸ್ತಿ" ಎಂಬ ವಾಕ್ಯದಿಂದಲೂ ಪರಮಪುರುಷನಾದ ಶ್ರೀಮನ್ನಾರಾಯಣನಿಗಿಂತಲೂ ಬೇರೆ ತತ್ತ್ವವು ನಿಷೇಧಿಸಲ್ಪಟ್ಟಿರುವುದರಿಂದ ಆ ಪರಮಪುರುಷನಿಗೆ ಮೇಲೆ ಪರತತ್ತ್ವವಿಲ್ಲ. ಮೇಲೆ ಹೇಳಿದ "ತತೋಯದುತ್ತರತರಂ" ಎಂಬ ಮಂತ್ರಕ್ಕೆ ಪೂರ್ವಿಯಾಗಿ "ವೇದಾಹಮೇತಂ ಪುರುಷಂ ಮಹಾನ್ತಂ। ಆದಿತ್ಯವರ್ಣಂ ತಮಸಃ ಪರಸ್ತಾತ್। ತಮೇವಂ ವಿದಿತ್ವಾತಿ ಮೃತ್ಯುಮೇತಿ। ನಾನ್ಯಃ ಪನ್ಥಾ ವಿದ್ಯತೇಽಯನಾಯ" (ಶ್ವೇ. ಉ. ೩-೮) ಎಂದರೆ—ಯಾವನು- ಪುರಾಣಪುರುಷನೂ, ಅನಂತನೂ, ಜ್ಞಾನಸ್ವರೂಪನೂ, ಇತ್ಯಾದಿ ಗುಣಪೂರ್ಣನೋ, ಯಾವನನ್ನು ಅರಿಯುವುದರಿಂದ ಮೋಕ್ಷವು ಸಿದ್ಧಿಸುವುದೋ—ಎಂದು ಹೇಳಿ ನಂತರ ಆ ಪರಮಪುರುಷನನ್ನೇ "ತೇನೇದಂ ಪೂರ್ಣಂ...." ಎಂದು ಮೇಲೆ ಹೇಳಿರುವಂತೆ ವರ್ಣಿಸಿರುವುದರಿಂದ "ತತೋಯದುತ್ತರತರಂ...." ಎಂದು ಅವನೇ ಅಪ್ರಾಕೃತನಾದ ಪರತತ್ತ್ವವು ಎಂದು ಹೇಳಿರುವುದರಿಂದ ಇಲ್ಲಿಯವರಿವಿಗೂ ಸಿದ್ಧಿಸಿದ ಪರಮಾತ್ಮನೇ ಪರತತ್ತ್ವವು ಎಂದು ಶ್ರುತಿಸಿದ್ಧವು. ಮತ್ತು ಆ ಪರಮಾತ್ಮೇತರವಾದ ಬೇರೆ ತತ್ತ್ವವು ನಿಷೇಧಿಸಿದೆ. ಮತ್ತೂ—"ಅಂತರ್ಬಹಿಶ್ಚತತ್ಸರ್ವಂ ವ್ಯಾಪ್ಯನಾರಾಯಣಸ್ಥಿತಃ ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ" ಎಂದರೆ—ಸಮಸ್ತ ವಸ್ತುಗಳೂ, ಒಳಗೂ ಮತ್ತು ಹೊರಗೂ, ಆ ಪರಮಪುರುಷನಾದ ಶ್ರೀಮನ್ನಾರಾಯಣನಿಂದಲೇ ವ್ಯಾಪಿಸಲ್ಪಟ್ಟಿವೆ.

"ಆತ್ಮೈವೇದಂ ಸರ್ವಂ ಬ್ರಹ್ಮೈವೇದಂ ಸರ್ವಂ" (ಛಾಂ. ಉ. ೨-೨೫-೨), (ಬೃ. ಉ. ೨-೫-೧) ಎಂಬ ಶ್ರುತಿವಾಕ್ಯರೀತ್ಯಾ ಸಮಸ್ತ ಜ್ಞಾನಕ್ಕೂ ಮೂಲವಾದ ಈ ಪರಬ್ರಹ್ಮನೇ ಪರತತ್ತ್ವವು ಎಂದು ಪ್ರತಿಪಾದಿಸಲ್ಪಡುವುದು. ಆದ್ದರಿಂದ ಅಖಿಲಜಗದೇಕಕಾರಣನಾಗಿಯೂ,

ಮುಮುಕ್ಷುಗಳಿಗೆ ಉಪಾಸ್ಯನೂ, ಉಪಾಯವೂ, ಪ್ರಾಪಕನೂ, ಪ್ರಾಪ್ಯನೂ ಆದ ಪರಮಪುರುಷನಾದ ಶ್ರೀಮನ್ನಾರಾಯಣನಿಗಿಂತಲೂ ಬೇರೆ ಪರತತ್ವವಿಲ್ಲ ಎಂದು ಸಿದ್ಧಾನ್ತವು.

**ಪರಬ್ರಹ್ಮನೇ ಸರ್ವಕರ್ಮಫಲಪ್ರದನು :—**

ಶ್ರುತಿಗಳಲ್ಲಿ ಸ್ವರ್ಗಾದಿಫಲಗಳಿಗೆ ಯಾಗಾದಿಕರ್ಮಗಳೂ ಮೋಕ್ಷ ಸಾಧನಕ್ಕೆ ಪರಮಪುರುಷನಲ್ಲಿ ಭಕ್ತಿಯೋಗವೂ ಹೇಳಲ್ಪಟ್ಟಿವೆ. ಈ ಯಾಗಾದಿಗಳಿಂದ ದೇವತೆಗಳಿಂದ ಉಂಟಾಗುವ ಸ್ವರ್ಗಾದಿ ಫಲಗಳೂ ಆಯಾ ದೇವತೆಗಳಲ್ಲಿ ಅಂತರ್ಯಾಮಿಯಾಗಿರುವ ಪರಮಾತ್ಮನ ಅನುಗ್ರಹ ದಿಂದಲೇ ಉಂಟಾಗುವುವು..

"ಯೋಯೋ ಯಾಂಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ ತಸ್ಯತಸ್ಯಾಚಲಾಂ ಶ್ರದ್ಧಾಂ|ತಾಮೇವವಿದಧಾಮ್ಯಹಂ|| ಸತಯಾಶ್ರದ್ಧಯಾ ಯುಕ್ತ | ಸ್ತಸ್ಯಾರಾಧನಮೀಹತೇ | ಲಭತೇಚತತಃ ಕಾಮಾ | ನ್ಮಯೈವ ವಿಹಿತಾನ್ಹಿತಾನ್|| (ಭ.ಗೀ. ೭-೨೧-೨೨) ಎಂದರೆ—ಯಾರ್ಯಾರು ಯಾವ ಯಾವ ದೇವತೆಗಳನ್ನು ಭಕ್ತಿಯಿಂದ ಪೂಜಿಸುತ್ತಾರೋ, ಅವರಿಗೆ ನಾನೇ ಆಯಾ ದೇವತೆಗಳಲ್ಲಿ ನಿಶ್ಚಲವಾದ ಭಕ್ತಿಯನ್ನುಂಟುಮಾಡುತ್ತೇನೆ; ಮತ್ತು ಆಯಾ ದೇವತೆಗಳ ಕೈಯಿಂದ ಫಲವನ್ನು ಕೊಡಿಸುತ್ತೇನೆ. ಎಂಬ ಭಗವದ್ಗೀತಾಶ್ಲೋಕದಿಂದ ಈ ವಿಷಯವು ವ್ಯಕ್ತವಾಗುವುದು. "ಸವಾ ಏಷ ಮಹಾನಜ ಆತ್ಮಾನ್ನಾದೋ, ವಸುದಾನೋ ವಿಂದತೇ ವಸು ಯಏವಂ ವೇದ" (ಬೃ.ಉ. ೪-೪-೨೪) ಎಂದರೆ—ಆ ಪರಮಾತ್ಮನೇ ಆ ಯಾಗಾದಿಗಳಲ್ಲಿ ಅರ್ಪಿಸಿದ ಅನ್ನವನ್ನು ಭುಜಿಸಿ ಫಲವನ್ನು ಅನುಗ್ರಹಿ ಸುವನು. "ಏಷಹ್ಯೇವಾನಂದಯಾತಿ" (ತೈ. ಉ. ೨-೭) ಎಂದರೆ— ಆ ಯಾಗಾದಿಗಳಲ್ಲಿ ದೇವತೆಗಳ ಪರವಾಗಿ ಅರ್ಪಿಸಿದ ಅನ್ನಾದಿಗಳನ್ನು ಭುಜಿಸಿ ಸಂತೋಷವನ್ನು ಹೊಂದುವವನು ಆ ಪರಮಾತ್ಮನೇ.

"ಅಹಂಹಿ ಸರ್ವಯಜ್ಞಾನಾಂ ಭೋಕ್ತಾಚ ಪ್ರಭುರೇವಚ" (ಭ. ಗೀ. ೯-೨೪) ಎಂದರೆ ಸಮಸ್ತಯಜ್ಞಗಳಲ್ಲಿಯೂ ನಾನೇ ಭೋಕ್ತಾ

ಮತ್ತು ಪ್ರಭುವು—ಎಂದು ಕಂಠೋಕ್ತವಾಗಿ ಹೇಳಿದೆ. ಆದ್ದರಿಂದ ಪರಮ ಪುರುಷನಾದ ಶ್ರೀಮನ್ನಾರಾಯಣನೇ ಸರ್ವ ಕರ್ಮಫಲಪ್ರದನು ಎಂದು ಸಿದ್ಧಿಸುವುದು.

**ಉಪಾಸನಾವಿಧಿಗಳು :—**

ಇನ್ನುಮುಂದೆ ಉಪಾಸನಾವಿಧಿಗಳು ಹೇಳಲ್ಪಡುವುವು. ಉಪಾಸನಾ ವಿದ್ಯೆಗಳು ಅನೇಕವಾಗಿ ಇರುವುವು—ಈಶಾವಾಸ್ಯವಿದ್ಯಾ, ಪರಮಪುರುಷ ವಿದ್ಯಾ, ಸದ್ವಿದ್ಯಾ, ಆನಂದಮಯವಿದ್ಯಾ, ಅನ್ತರಾದಿತ್ಯವಿದ್ಯಾ, ಆಕಾಶ ವಿದ್ಯಾ, ಪ್ರಾಣವಿದ್ಯಾ, ಪರಂಜ್ಯೋತಿವಿದ್ಯಾ, ಪ್ರತರ್ದನವಿದ್ಯಾ, ನಾಚಿ ಕೇತವಿದ್ಯಾ, ಉಪಕೋಸಲವಿದ್ಯಾ, ಉದ್ದಾಲಕಾಂತರ್ಯಾಮಿವಿದ್ಯಾ, ಅಕ್ಷರಪರವಿದ್ಯಾ, ವೈಶ್ವಾನರವಿದ್ಯಾ, ಭೂಮವಿದ್ಯಾ, ಗಾರ್ಗ್ಯಕ್ಷರವಿದ್ಯಾ, ಸತ್ಯಕಾಮವಿದ್ಯಾ, ದಹರವಿದ್ಯಾ, ಅಂಗುಷ್ಟಪ್ರಮಿತವಿದ್ಯಾ, ಮಧುವಿದ್ಯಾ, ಸಂವರ್ಗವಿದ್ಯಾ, ಅಜಾವಿದ್ಯಾ, ಜ್ಯೋತಿಷಾಂಜ್ಯೋತಿರ್ವಿದ್ಯಾ, ಬಾಲಕಿ ವಿದ್ಯಾ, ಮೈತ್ರೇಯವಿದ್ಯಾ, ರುದ್ರವಿದ್ಯಾ, ಚತುರ್ಮುಖವಿದ್ಯಾ, ಉಷಸ್ತಿ ಕಹೋಳವಿದ್ಯಾ, ಪಂಚಾಗ್ನಿವಿದ್ಯಾ, ಆದಿತ್ಯಮಂಡಲಸ್ಥ ಸತ್ಯಬ್ರಹ್ಮವಿದ್ಯಾ, ಅಕ್ಷಿಸ್ಥಸತ್ಯಬ್ರಹ್ಮವಿದ್ಯಾ, ಶ್ರೀಮತ್ ನ್ಯಾಸವಿದ್ಯಾ, ಎಂದು ಮೂವತ್ತೆರಡು ಬ್ರಹ್ಮವಿದ್ಯೆಗಳೂ, ಮತ್ತು ಅನೇಕ ಕಾಮ್ಯವಿದ್ಯೆಗಳೂ ಇರುವುವು.

ಬ್ರಹ್ಮವಿದ್ಯೆಗಳಲ್ಲೆಲ್ಲಾ ಉಪಾಸನಾದ್ಯೆವವು ಪರಬ್ರಹ್ಮನೇ. ಈ ವಿದ್ಯೆಗಳೆಲ್ಲಾ ವೇದಗಳಲ್ಲಿ ಬೇರೆ ಬೇರೆ ಕಡೆಗಳಲ್ಲಿ ವಿವರಿಸಿವೆ. ಒಂದೊಂದು ಉಪಾಸನೆಯಲ್ಲಿಯೂ ಉಪಾಸನಾದ್ಯೆವಕ್ಕೆ ಒಂದು ಆಕಾರ ಮತ್ತು ಕೆಲವು ಗುಣಗಳನ್ನು ಉಪಾಸಕನ ಉಪಾಸನಾ ಸಹಾಯಾರ್ಥವಾಗಿ ನಿರೂಪಿಸಿದೆ.

**ಅಷ್ಟಗುಣೋಪಾಸನೆಗಳು :—**

ಸಮಸ್ತ ಬ್ರಹ್ಮವಿದ್ಯೋಪಾಸನೆಗಳಲ್ಲಿಯೂ ಮೇಲೆ ಹೇಳಿದ ಉಭಯಲಿಂಗಸ್ವರೂಪನಾದ ಪರಬ್ರಹ್ಮನ ಆನಂದಾದಿ ಗುಣಗಳನ್ನು ಉಪಾಸಿಸಬೇಕು.

"ಆನಂದಾದಯಃ ಪ್ರಧಾನಸ್ಯ" (ಶಾ. ಮಿಾ. ೩-೩-೧೧) ಎಂದರೆ ಆನಂದಾದಿ ಗುಣೋಪಾಸನೆಯು ಸಮಸ್ತ ಬ್ರಹ್ಮೋಪಾಸನೆಗಳಲ್ಲಿಯೂ ಅನುಷ್ಠಿಸತಕ್ಕವುಗಳು ಎಂದು ಹೇಳಿದೆ.

"ಆನಂದಾದಿ" ಎಂಬ ಪದದಲ್ಲಿ "ಆದಿ" ಶಬ್ದಕ್ಕೆ "ಶಾರೀರಕ ವಿವರಣ"ವೆಂಬ ಗ್ರಂಥದಲ್ಲಿ ಕೂರತ್ತಾಳ್ವಾರ್ರು "ಆನಂದತ್ವ, ಸತ್ಯತ್ವ, ಜ್ಞಾನತ್ವ, ಅನಂತತ್ವ, ಅಮಲತ್ವ, ಶ್ರಿಯಃಪತಿತ್ವ"—ಎಂಬ ಆರು ಗುಣಗಳನ್ನು ಪರಬ್ರಹ್ಮನ ಸ್ವರೂಪನಿರೂಪಕ ಧರ್ಮವಾಗಿ ಹೇಳಿರುವುದಾಗಿ ವೇದಾಂತದೇಶಿಕರು ತಮ್ಮ ನ್ಯಾಯಸಿದ್ಧಾಂಜನದಲ್ಲಿ ಹೇಳಿರುವರು.

ಅಕ್ಷರವಿದ್ಯಾಧಿಕರಣದಲ್ಲಿ (ಶಾ. ಮಿಾ. ೩-೩-೩೩-೩೪) "ಅಸ್ಥೂಲತ್ವ" "ಅನಣುತ್ವ"ಗಳೆಂಬ ಎರಡು ಗುಣಗಳೂ ಕೂಡ ಪರಮಾತ್ಮನಿಗೆ ಮಾತ್ರವೇ ಸಮನ್ವಯಿಸುವ ಗುಣಗಳಾದ್ದರಿಂದ ಅವುಗಳನ್ನು ಎಲ್ಲಾ ಬ್ರಹ್ಮವಿದ್ಯೆಗಳಲ್ಲಿಯೂ ಉಪಾಸಿಸಬೇಕು. ಆದ್ದರಿಂದ ಸತ್ಯತ್ವ, ಜ್ಞಾನತ್ವ, ಅನಂತತ್ವ, ಆನಂದತ್ವ, ಅಮಲತ್ವ, ಶ್ರಿಯಃಪತಿತ್ವ, ಅಸ್ಥೂಲತ್ವ ಮತ್ತು ಅನಣುತ್ವ—ಈ ಅಷ್ಟಗುಣಗಳೂ ಸಮಸ್ತ ಬ್ರಹ್ಮೋಪಾಸನೆಗಳಲ್ಲಿಯೂ ಅನುಸಂಧೇಯಗಳು.

ಈ ಗುಣಗಳೊಡನೆ ಆಯಾ ಬ್ರಹ್ಮೋಪಾಸನೆಗಳಿಗೆ ತಕ್ಕಂತೆ ಬೇರೆ ಬೇರೆ ಸ್ವರೂಪರೂಪ ಗುಣಾದಿಗಳನ್ನೂ ಅನುಸಂಧೇಯಗಳಾಗಿ ಹೇಳಿವೆ. ಈ ಇತರ ಸ್ವರೂಪಗುಣಾದಿಗಳೆಲ್ಲಾ ಆಯಾ ಉಪಾಸನೆಗಳಲ್ಲಿ ಅನುಸಂಧೇಯಗಳೇವಿನಾ ಎಲ್ಲಾ ಉಪಾಸನೆಗಳಲ್ಲಿಯೂ ಅನುಸಂಧೇಯಗಳಲ್ಲ. ಹ್ಯಾಗೆಂದರೆ—ನೃಸಿಂಹೋಪಾಸನೆಯನ್ನು ಮಾಡುವವನು ಮೇಲೆ ಹೇಳಿದ ಅಷ್ಟಗುಣಗಳೊಡನೆ ನೃಸಿಂಹನ ಆಕಾರ ಇತ್ಯಾದಿಗಳನ್ನು ಉಪಾಸಿಸಬೇಕು. ಬೇರೆ ಬ್ರಹ್ಮವಿದ್ಯೆಯಲ್ಲಿ ಈ ಆಕಾರಾದಿಗಳು ಉಪಾಸ್ಯವಾಗುವುದಿಲ್ಲ. ಹೀಗೆಯೇ ಇತರ ಉಪಾಸನೆಗಳನ್ನೂ ತಿಳಿಯತಕ್ಕದ್ದು.

**ಮೋಕ್ಷಪ್ರಾಪ್ತಿಗೆ ಒಂದು ಬ್ರಹ್ಮವಿದ್ಯೋಪಾಸನೆಯೇ ಸಾಕು:—**

ಮೋಕ್ಷಪ್ರಾಪ್ತಿಗೆ ಒಂದು ಬ್ರಹ್ಮವಿದ್ಯೆಯನ್ನು ಉಪಾಸಿಸಿದರೆ ಸಾಕಾಗುವುದೋ, ಅಥವಾ ಅನೇಕ ಬ್ರಹ್ಮವಿದ್ಯೆಗಳನ್ನು ಏಕಕಾಲದಲ್ಲಿ

ಉಪಾಸಿಸಬೇಕೋ? ಎಂಬುದು ಒಂದು ಸಂಶಯ. ಇತರವಾದ ಕಾಮ್ಯೋಪಾಸನೆಗಳಲ್ಲಿ ಕಾಮ್ಯಕರ್ಮಗಳು ಅಧಿಕವಾದಷ್ಟೂ ಸ್ವರ್ಗಾದಿ ಪುಣ್ಯಲೋಕಗಳಲ್ಲಿ ಸುಖಾನುಭವಗಳು ಅಧಿಕವಾಗಿರುವುವು. ಆದ್ದರಿಂದ ಕಾಮ್ಯಕರ್ಮಗಳಲ್ಲಿ ಕಾಮ್ಯೋಪಾಸನೆಗಳನ್ನು ಹೆಚ್ಚಾಗಿ ಮಾಡಿದಷ್ಟೂ ಸ್ವರ್ಗಾದಿ ಪುಣ್ಯಲೋಕಗಳಲ್ಲಿ ಸುಖಾನುಭವಗಳು ಅಧಿಕವಾಗಿರುವುವು. ಆದ್ದರಿಂದ ಕಾಮ್ಯಕರ್ಮಗಳಲ್ಲಿ ಕಾಮ್ಯೋಪಾಸನೆಗಳನ್ನು ಹೆಚ್ಚಾಗಿ ಮಾಡಿದಷ್ಟೂ, ಫಲವೂ ಹೆಚ್ಚಾಗಿ ದೊರೆಯುವುದು.

"ಕಾಮ್ಯಾಸ್ತು ಯಥಾ ಕಾಮಂ ಸಮುಚ್ಚೀಯೇ ರನ್ನವಾ ಪೂರ್ವಹೇತ್ವಭಾವಾತ್" (ಶಾ. ಮಿ. ೩-೩-೫೮) ಎಂದರೆ—ಕಾಮ್ಯಫಲಕ್ಕಾಗಿ ಮಾಡುವ ಉಪಾಸನೆಗಳಲ್ಲಿ ಉಪಾಸಕನ ಇಷ್ಟಪ್ರಕಾರ ಎಷ್ಟು ಉಪಾಸನೆಗಳನ್ನು ಬೇಕಾದರೂ ಏಕಕಾಲದಲ್ಲಿ ಉಪಾಸಿಸಬಹುದು ಎಂದು ಶಾಸ್ತ್ರವಾಕ್ಯವಿದೆ.

ಆದರೆ ಬ್ರಹ್ಮವಿದ್ಯೆಯಲ್ಲಿ ಮೋಕ್ಷವೊಂದೇ ಅದರ ಫಲವಾಗಿಯೂ, ಆ ಮೋಕ್ಷದಲ್ಲಿ ಸಮಸ್ತ ಜೀವರಿಗೂ ಫಲವು ಒಂದೇ ವಿಧವಾದ್ದಾದ್ದರಿಂದಲೂ ಒಂದು ಬ್ರಹ್ಮವಿದ್ಯೋಪಾಸನೆಯೇ ಸಾಕು.

"ವಿಕಲ್ಪೋಽವಿಶಿಷ್ಟಫಲತ್ವಾತ್" (ಶಾ. ಮಿ. ೩-೩-೫೭) ಎಂದರೆ ಒಂದೊಂದು ಬ್ರಹ್ಮವಿದ್ಯೆಯೂ ಸಮಾನಫಲಪ್ರದಗಳಾದುದರಿಂದ, ಒಂದು ಬ್ರಹ್ಮವಿದ್ಯೆಯೇ ಉಪಾಸಕನಿಗೆ ಸಾಕು ಎಂದು ಹೇಳಿದೆ.

**ಜ್ಞಾನ ಮತ್ತು ಕರ್ಮಗಳ ಪರಸ್ಪರ ಸಂಬಂಧವು:—**

ಎಲ್ಲಾ ಉಪಾಸನೆಗಳಲ್ಲಿಯೂ ವಿದ್ಯಾಭಾಗ ಮತ್ತು ಕರ್ಮಭಾಗವೆಂದು ಎರಡು ಭಾಗಗಳಿವೆ. ಇವನ್ನೇ ಜ್ಞಾನ ಮತ್ತು ಕರ್ಮಗಳೆನ್ನುತ್ತಾರೆ. "ವಿದ್ಯೆ" ಎಂಬ ಪದಕ್ಕೆ ಶಾಂಕರಮತದಲ್ಲಿ ಬ್ರಹ್ಮಜ್ಞಾನವೆಂದೂ, ವಿಶಿಷ್ಟಾದ್ವೈತಮತದಲ್ಲಿ ಉಪಾಸನೆಯೆಂದೂ ಅರ್ಥವು.

ಕೆಲವರು ವಿದ್ಯೆಯು ಕರ್ಮಕ್ಕೆ ಅಂಗವೆಂದು ಕೆಳಗೆ ವಿವರಿಸುವ ಪೂರ್ವಪಕ್ಷ ತರ್ಕರೀತ್ಯಾ ಹೇಳುತ್ತಾರೆ. ವಿದ್ಯೆಯಿಂದ ಫಲವೆಂಬುದು

ಬರೀ ಸ್ತುತಿಮಾತ್ರವು. ಕರ್ಮದಿಂದಲೇ ಫಲವುಂಟಾಗುವುದೆಂದು ಜೈಮಿನಿಯು ಹೇಳುತ್ತಾರೆ. ಬ್ರಹ್ಮಜ್ಞಾನಿಗಳಿಗೂ ಕರ್ಮಾನುಷ್ಠಾನವು ಹೇಳಿರುವುದರಿಂದಲೂ, "ಕರ್ಮಣೈವಹಿಸಂಸಿದ್ಧಿ ಮಾಸ್ಥಿತಾಜನಕಾದಯಃ" (ಭ. ಗೀ. ೩-೨೦) ಎಂದು—ಜ್ಞಾನಿಗಳಾದ ಜನಕಾದಿಗಳೂ ಕರ್ಮಾಚಾರ ಪ್ರಧಾನರನ್ನಾಗಿ ಭಗವದ್ಗೀತೆಯಲ್ಲಿ ಹೇಳಿರುವುದರಿಂದಲೂ; ಮತ್ತು ಇವರೆಲ್ಲರೂ ಮೋಕ್ಷವನ್ನು ಸಾಧಿಸಿದುದರಿಂದಲೂ ಕರ್ಮವೇ ಫಲಪ್ರದವು, ವಿದ್ಯೆಯು ತದಂಗವು ಎಂದು ಹೇಳುತ್ತಾರೆ.

"ಯದೇವ ವಿದ್ಯೆಯಾ ಕರೋತಿ ತದೇವ ವೀರ್ಯವತ್ತರಂಭವತಿ" (ಛಾಂ. ಉ. ೧-೧-೧೦) ಎಂದು ವಿದ್ಯೆಯನ್ನು ಅಂಗವಾಗಿಉಳ್ಳ ಕರ್ಮವು ಫಲಪ್ರದವೆಂದು ಹೇಳಿರುವುದರಿಂದ ವಿದ್ಯೆಯು ಕರ್ಮಾಂಗವಾಗಬೇಕು.

"ಕುರ್ವನ್ನೇವೇಹಕರ್ಮಾಣಿ ಜಿಜೀವಿಷೇಚ್ಛತಂಸಮಾಃ" (ಈ. ಉ. ೨) ಎಂದರೆ ಮನುಷ್ಯನ ನೂರು(ಎಂದರೆ ಯಾವಜ್ಜೀವ)ವರುಷ ಆಯುಸ್ಸನ್ನೂ ಕರ್ಮದಿಂದಲೇ ಕಳೆಯಬೇಕು-ಎಂದು ಹೇಳಿರುವುದು. ಇತ್ಯಾದಿ ಕಾರಣಗಳಿಂದ ವಿದ್ಯೆಯು ಕರ್ಮಾಂಗವಾಗಬೇಕು-ಎಂದು ಪೂರ್ವಪಕ್ಷವು.

### ಸಿದ್ಧಾನ್ತ-ವಿದ್ಯೆಯೇ ಫಲಪ್ರದವು:—

ಆದರೆ ಈ ಮತವು ಸರಿಯಲ್ಲ. ವೇದವ್ಯಾಸಮಹರ್ಷಿಗಳು ವಿದ್ಯೆಯಿಂದಲೇ ಫಲವೆಂದು ಹೇಳಿರುವರು. ವಿದ್ಯೆಯೇ ಪ್ರಧಾನವೆಂಬ ವಿಷಯಕ್ಕೆ ಬ್ರಹ್ಮಜ್ಞಾನಿಗಳ ಆಚಾರ ದರ್ಶನ ವಿಷಯದಲ್ಲಿ ನಿದರ್ಶನವಾಗಿ "ಋಷಯಃ ಕಾವಷೇಯಾಃ ಕಿಮರ್ಥಾವಯಮಧ್ಯೇಷ್ಯಾಮಹೇಕಿಮರ್ಥಾವಯಂ ಯಕ್ಷ್ಯಾಮಹೇ" ಎಂದರೆ—ಕಾವಷೇಯರೆಂಬ ಋಷಿಗಳು ಅಧ್ಯಯನ ಯಾಗಾದಿಗಳನ್ನು ಬಿಟ್ಟು ಜ್ಞಾನಮಾತ್ರ ಪ್ರಧಾನರಾಗಿ ಇರುವರೆಂದು ಹೇಳಿರುವುದರಿಂದ-ವಿದ್ಯೆಯೇ ಫಲಪ್ರಯೋಜನವೆಂದು ಸೂಚಿಸಿದಂತಾಯಿತು. "ಯದೇವ ವಿದ್ಯೆಯಾ ಕರೋತಿ ತದೇವ ವೀರ್ಯವತ್ತರಂ

ಭವತಿ" ಎಂಬ ವಾಕ್ಯದಿಂದ ವಿದ್ಯೆಯ ಸಹಾಯವು ಪ್ರಕರಣರೀತ್ಯಾ "ಉದ್ಗೀಥ"ವಿದ್ಯೆಗೆ ಮಾತ್ರ ಹೇಳಿರುವುದೇ ವಿನಾ, ಎಲ್ಲಾ ವಿದ್ಯೆಗಳಿಗೂ ಹೇಳಲಿಲ್ಲ. ಈ ಉದ್ಗೀಥವಿದ್ಯೆಯಲ್ಲಿಯೂ ಕೂಡ ಕರ್ಮವು ಶೀಘ್ರವಾಗಿ ಫಲಪ್ರದವಾಗುವುದಕ್ಕಾಗಿ ಉಪಾಸನೆಯು ಹೇಳಲ್ಪಟ್ಟಿತು. ಇದರಿಂದ ವಿದ್ಯೆಗೆ ಇರುವ ಪ್ರಾಶಸ್ತ್ಯವನ್ನು ಹೇಳಿದ ಹಾಗಾಯಿತೇ ವಿನಾ ಕರ್ಮಕ್ಕೆ ಅಂಗವಾಗಿ ಹೇಳಲಿಲ್ಲ.

"ಕರ್ಮಣೈವಹಿಸಂಸಿದ್ಧಿಂ" ಎಂಬ ಭಗವಗ್ಗೀತಾಶ್ಲೋಕದಲ್ಲಿ ಹೇಳಿರುವ ಕರ್ಮದ ವಿಷಯವು—ಜ್ಞಾನಿಗಳಿಗೂ ಕರ್ಮವು ಅವಶ್ಯಕವು ಎಂಬ ಸಿದ್ಧಾಂತದಲ್ಲಿ ಕರ್ಮದ ಅವಶ್ಯಕತೆಯನ್ನು ಹೇಳುವುದಕ್ಕಾಗಿಯೇ ಅಲ್ಲದೆ ಇದರಿಂದ ವಿದ್ಯೆಯು ಕರ್ಮಾಂಗವೆಂದು ಸಾಧಿಸುವುದಕ್ಕಾಗುವುದಿಲ್ಲ.

"ಕುರ್ವನ್ನೇವೇಹಕರ್ಮಾಣಿ" ಎಂಬ ಈಶಾವಾಸ್ಯೋಪನಿಷದ್ವಾಕ್ಯದಲ್ಲಿ "ಈಶಾವಾಸ್ಯ"ವಿದ್ಯೆಗೆ ಕರ್ಮದ ಅವಶ್ಯಕತೆಯು ಹೇಳಲ್ಪಟ್ಟಿತು. ಕರ್ಮವನ್ನೂ ಮಾಡು ಮತ್ತು ವಿದ್ಯೆಯನ್ನೂ ಅಭ್ಯಾಸಿಸು, ಎಂದು ಹೇಳಿದರೆ ಇವೆರಡೂ ಅವಶ್ಯಕವು ಎಂಬ ಅರ್ಥವುಂಟಾಗುವುದೇವಿನಾ ವಿದ್ಯೆಯು ಕರ್ಮಕ್ಕೆ ಅಂಗವು ಎಂದು ಈ ಶ್ಲೋಕದಿಂದ ತರ್ಕಿಸಿ ಹೇಳುವುಕ್ಕಾಗುವುದಿಲ್ಲ.

ವೇದದ ಒಂದು ಶಾಖೆಯವರು "ಕಿಂಪ್ರಜಯಾಕರಿಷ್ಯಾಮೋಯೇಷಾಂನೋಯಮಾತ್ಮಾಯಂ ಲೋಕ" (ಬೃ. ಉ. ೪-೪-೨೨) ಎಂದು ಆರಂಭಿಸಿ ಹೇಳುವ ಶ್ರುತಿವಾಕ್ಯಪ್ರಕಾರ ಬ್ರಹ್ಮಜ್ಞಾನಿಗಳು ಕರ್ಮವನ್ನೇ ತ್ಯಜಿಸಿಬಿಟ್ಟರು—ಎಂದು ಹೇಳಿರುವುದು. ಆದ್ದರಿಂದ ವಿದ್ಯೆಯೇ ಮುಖ್ಯವೆಂದು ಸ್ಥಿರವಾಗುವುದು. ಇಲ್ಲಿ ಸೂಚಿಸಿರುವ ಕರ್ಮತ್ಯಾಗವು ಕರ್ಮಫಲತ್ಯಾಗವೆಂದು ಅರ್ಥಮಾಡಬೇಕು.

"ಕ್ಷೀಯನ್ತೇಚಾಸ್ಯಕರ್ಮಾಣಿ ತಸ್ಮಿನ್ದೃಷ್ಟೇಪರಾವರೇ" (ಮುಂ. ಉ. ೨-೨-೮) ಎಂದರೆ—ಬ್ರಹ್ಮವಿದ್ಯೆಯಿಂದ ಉಪಾಸಕನ ಸಕಲ

ಕರ್ಮಗಳೂ ನಶಿಸುವುವು—ಎಂದು ಅರ್ಥವು. ಪೂರ್ವಪಕ್ಷರೀತ್ಯಾ ವಿದ್ಯೆಯು ಕರ್ಮಾಂಗವಾದರೆ ವಿದ್ಯೆಯಿಂದ ಕರ್ಮಕ್ಷಯವು ಅಸಂಭವವು.

**ಉಪಾಸನೆಗೆ ಶಮದಮಾದಿಗಳೂ, ಶುದ್ಧಾಹಾರವೂ ಅವಶ್ಯಕವು :**

"ಸರ್ವಾಪೇಕ್ಷಾಚಯಜ್ಞಾದಿ ಶ್ರುತೇರಶ್ವವತ್" (ಶಾ. ಮಿ. ೨-೨-೮) ಎಂದರೆ—ಒಬ್ಬ ಮನುಷ್ಯನು ಆಡುವ ಜೇಟಿಗೆ ಅಶ್ವಾದಿಗಳು ಸಹಕಾರಿಯಾಗುವಂತೆ ವಿದ್ಯೆಯು ಸಕಲ ಕರ್ಮಗಳನ್ನೂ ಸಹಕಾರಿಯಾಗಿ ಅಪೇಕ್ಷಿಸುತ್ತದೆ. "ಯಜ್ಞೇನ ದಾನೇನ ತಪಸಾ ನಾಶಕೇನ" (ಬೃ. ಉ. ೪-೪-೨೨) ಇತ್ಯಾದಿ ಶ್ರುತಿವಾಕ್ಯರೀತ್ಯಾ ಗೃಹಸ್ಥನು ಕರ್ಮಗಳನ್ನು ಅನುಷ್ಠಿಸಿಕೊಂಡೇ ಬ್ರಹ್ಮೋಪಾಸನೆಯನ್ನು ಮಾಡಬೇಕೆಂದು ವಿಧಿಯಿದೆ.

ಗೃಹಸ್ಥನಿಗಿರುವಂತೆ ಇತರ ವರ್ಣಾಶ್ರಮಧರ್ಮದವರಿಗೂ ಆಯಾ ಆಶ್ರಮರೀತ್ಯಾ ಶಾಸ್ತ್ರಗಳಲ್ಲಿ ಕರ್ಮಗಳನ್ನು ವಿಧಿಸಿರುವುದು.

"ಶಮದಮಾತ್ಯುಪೇತಸ್ಸ್ಯಾತ್ತಥಾಪಿತು ತದ್ವಿಧೇಸ್ತದಂಗತಯಾ ತೇಷಾಮಪ್ಯವಶ್ಯಾನುಷ್ಠೇಯತ್ವಾತ್ (ಶಾ. ಮಿ. ೩-೪-೨೭) ಎಂದರೆ—ಆ ಗೃಹಸ್ಥನಿಗೂ ವಿದ್ಯೆಗೆ ಅಂಗವಾಗಿ ಶಮದಮಾದಿಗಳನ್ನು ವಿಧಿಸಿರುವುದರಿಂದ ಅವನು ಶಮದಮಾದಿ ಗುಣಗಳೊಡನೆ ಕೂಡಿದವನಾಗಿಯೇ ಇರಬೇಕು" ಎಂದು ಶಾಸ್ತ್ರವಿಧಿಯಿರುವುದು.

"ಶಾನ್ತೋದಾನ್ತಃ" ಎಂದು ಆರಂಭಿಸಿ "ಆತ್ಮಾನಂ ಪಶ್ಯೇತ್" (ಬೃ. ಉ. ೪-೪-೪೩) ಎಂದು ಶಮದಮಾದಿಗಳೊಡನೆಯೇ ಬ್ರಹ್ಮೋಪಾಸನೆಯನ್ನು ಮಾಡಬೇಕೆಂದು ವಿಧಿಸಿರುವುದರಿಂದಲೂ, ಏಕಾಗ್ರಚಿತ್ತನಾಗಿ ಧ್ಯಾನಿಸುವುದಕ್ಕೆ ಇಂದ್ರಿಯಗಳು ನಿಶ್ಚಲವಾಗಿ ಇರಬೇಕಾದ್ದರಿಂದಲೂ ಶಮದಮಾದಿಗಳು ಬ್ರಹ್ಮೋಪಾಸನೆಗೆ ಅತ್ಯಾವಶ್ಯಕಗಳು. ಇಂದ್ರಿಯಗಳಿಗೆ ಶಾಸ್ತ್ರವಿಹಿತ ಕರ್ಮಗಳಲ್ಲಿ ಎಂದರೆ (ಕೃತ್ಯಕರಣಗಳಲ್ಲಿ) ಪ್ರವರ್ತಿಯೂ, ಶಾಸ್ತ್ರನಿಷಿದ್ಧಕರ್ಮಗಳಲ್ಲಿ ನಿವೃತ್ತಿಯೂ ಎಂದರೆ (ಅಕೃತ್ಯಾಕರಣವೂ) ಉಂಟಾಗಬೇಕು. ಸತ್ಕರ್ಮಗಳಿಂದ ಪಾಪ

ನಿವಾರಣೆಯಾಗಿ ಮನಸ್ಸಿಗೆ ನೈರ್ಮಲ್ಯವೂ, ಸ್ಥಿರತ್ವವೂ ಉಂಟಾಗುವುವು. ವಿದ್ಯಾಭಿವೃದ್ಧಿಗೆ ಪರಿಶುದ್ಧವಾದ ಆಹಾರವೂ ಅವಶ್ಯಕವು.

"ಆಹಾರಶುದ್ಧೌ ಸತ್ವಶುದ್ಧಿಃ ಸತ್ವಶುದ್ಧೌ ಧ್ರುವಾಸ್ಮೃತಿಃ" (ಛಾಂ. ಉ. ೮-೨೬-೨) ಎಂದರೆ—ಪರಿಶುದ್ಧಾಹಾರವನ್ನು ಭುಜಿಸಿದರೆ ಜ್ಞಾನನೈರ್ಮಲ್ಯವೂ, ಅದರಿಂದ ಉಪಾಸನವೃದ್ಧಿಯೂ ಆಗುವುವು; ಎಂಬ ಶ್ರುತಿವಾಕ್ಯರೀತ್ಯಾ ಆಹಾರ ಶುದ್ಧಿಯು ವಿದ್ಯಾಭಿವೃದ್ಧಿಗೆ ಅವಶ್ಯಕವು.

**ಕರ್ಮವು ವಿದ್ಯಾಂಗವೂ, ಆಶ್ರಮಾಂಗವೂ ಆಗುವುದು :—**

ಯಜ್ಞಾದಿ ಕರ್ಮಗಳು ವಿದ್ಯಾಂಗವಾಗಿಯೂ, ಗೃಹಸ್ಥಾದಿ ಆಶ್ರಮವಾಸಿಗಳಿಗೂ ಕರ್ತವ್ಯವಾದ ಕರ್ಮವಾಗಿಯೂ ಮೇಲೆ ಹೇಳಲ್ಪಟ್ಟಿತು. ಇದರಿಂದ ಕರ್ಮವು ವಿದ್ಯಾಂಗವೇ ಅಥವಾ ಆಶ್ರಮಾಂಗವೇ ಎಂಬ ಪ್ರಶ್ನೆಯು ಹೊರಡುವುದು.

ಒಂದೇ ಆಧ ಕರ್ಮವು ಉಪಾಸಕರಿಗೆ ಮೋಕ್ಷವನ್ನೂ, ವಿದ್ಯಾರಹಿತರಾದ ಗೃಹಸ್ಥರಿಗೆ ಸ್ವರ್ಗಾದಿ ನಶ್ವರ ಫಲಗಳನ್ನೂ ಕೊಡುವುದರಿಂದ, ಕೇವಲ ಆಶ್ರಮಕ್ಕೆ ಅಂಗವಾದರೆ ನಿತ್ಯಾನಿತ್ಯ ಫಲಗಳೆರಡಕ್ಕೂ ಸಾಧನವಾಗುವುದು ವಿರುದ್ಧವಾದ್ದರಿಂದ ಕೇವಲ ಆಶ್ರಮಿಗಳಿಗೆ ಅಂಗವಾಗಲಾರದು ಎಂದು ಪೂರ್ವಪಕ್ಷವು.

**ಸಿದ್ಧಾಂತವು :—**

"ಯಾವಜ್ಜೀವಮಗ್ನಿಹೋತ್ರಂಜುಹೋತಿ" ಎಂದು ಕೇವಲ ಆಶ್ರಮವಾಸಿಗಳಿಗೆ ಯಾವಜ್ಜೀವ ಕರ್ಮಗಳನ್ನು ಶ್ರುತಿಯು ವಿಧಿಸಿರುವುದರಿಂದ ಇದು ಶಾಸ್ತ್ರರೀತ್ಯಾ ಆಶ್ರಮಾಂಗವೂ ಆಗಲೇ ಬೇಕು. ಕರ್ಮಗಳು ಅಧಿಕಾರಿಗಳ ಇಷ್ಟದಂತೆ ಸಕಾಮವಾಗಿಯೂ, ಅಕಾಮವಾಗಿಯೂ ಆಗಬಹುದು. ವಿದ್ಯಾನಿಷ್ಠರಾದ ಅಕಾಮಕರ್ಮಿಗಳಿಗೆ ಮೋಕ್ಷವೂ, ಸಕಾಮರಾದ ವಿದ್ಯಾರಹಿತರಾದ ಸಂಸಾರಿಗಳಿಗೆ ಅನಿತ್ಯವಾದ ಸ್ವರ್ಗಾದಿಫಲವೂ ಲಭಿಸುವುದಕ್ಕೆ, ಯಾವ ಅಭ್ಯಂತರವೂ ಇಲ್ಲ. ಇದರಿಂದ ಯಜ್ಞವು ಆಶ್ರಮಾಂಗವು ಎಂದು ಸಿದ್ಧಾಂತವು.

"ಯಜ್ಞೇನ ದಾನೇನ ಬ್ರಾಹ್ಮಣಾ ವಿವಿದಿಷನ್ತಿ" (ಬೃ. ಉ. ೪-೪-೨೨) ಎಂದು ಕರ್ಮವು ವಿದ್ಯಾಂಗವಾಗಿಯೂ ಹೇಳಿರುವುದರಿಂದ ಕರ್ಮವು ವಿದ್ಯಾಂಗವಾಗಿಯೂ ಆಗುವುದು. ಶ್ರುತಿಗಳಲ್ಲಿ ವಿದ್ಯೆ ಮತ್ತು ಆಶ್ರಮ ಇವೆರಡರಲ್ಲಿಯೂ ಯಜ್ಞಾದಿಕರ್ಮಗಳನ್ನು ವಿಧಿಸುವಾಗ ವ್ಯತ್ಯಾಸವನ್ನು ತೋರಿಸದೆ ಒಂದೇ ವಿಧವಾಗಿ ಹೇಳಿರುವುದರಿಂದ ಯಜ್ಞ ಕಾರ್ಯದಲ್ಲಿ ಇಬ್ಬರೂ ಒಂದೇ ವಿಧವಾದ ಕ್ರಿಯೆಗಳನ್ನು ಮಾಡುತ್ತಾರೆ. ಆದ್ದರಿಂದ ಕರ್ಮವು ವಿದ್ಯೆ ಮತ್ತು ಆಶ್ರಮ ಇವೆರಡಕ್ಕೂ ಸಹಕಾರಿಯಾಗುವುದು.

**ಅನಾಶ್ರಮಿಗಳ ವಿಚಾರವು :—**

ಆಶ್ರಮಿಗಳಲ್ಲದೆ ಶಾಸ್ತ್ರರೀತ್ಯಾ ಕೆಲವು ಅನಾಶ್ರಮಿಗಳೂ ಉಂಟು ಗೃಹಸ್ಥನು ಪತ್ನಿಯನ್ನು ಕಳೆದುಕೊಂಡು ಬೇರೆ ಮದುವೆಯನ್ನು ಮಾಡಿಕೊಳ್ಳದಿದ್ದರೆ ಅವನಿಗೆ "ವಿಧುರ"ನೆಂದು ಹೆಸರು. ಇವನು ಅನಾಶ್ರಮಿಯು. ಮತ್ತು ಬ್ರಹ್ಮಚರ್ಯವು ಮುಗಿದನಂತರ ಮದುವೆಯನ್ನು ಮಾಡಿಕೊಳ್ಳದವನೂ ಅನಾಶ್ರಮಿಯು. ಇವರಿಬ್ಬರಿಗೂ ಅಗ್ನಿಹೋತ್ರಾದಿಗಳಿಗೆ ಅಧಿಕಾರವಿಲ್ಲ. ಈ ಅನಾಶ್ರಮಿಗಳಿಗೆ ಬ್ರಹ್ಮವಿದ್ಯಾಧಿಕಾರವುಂಟೋ-ಇಲ್ಲವೋ ? ಎಂದು ಪ್ರಶ್ನೆ.

"ಅನ್ತರಾಚಾಪಿತು ತದ್ದೃಷ್ಟೇಃ" (ಶಾ. ಮಿ. ೩-೪-೩೬) ಎಂದರೆ ಆಶ್ರಮದ ಮಧ್ಯದಲ್ಲಿ ವರ್ತಿಸುವವರಿಗೂ (ಎಂದರೆ ಅನಾಶ್ರಮಿಗಳಿಗೂ) ಬ್ರಹ್ಮವಿದ್ಯಾನುಷ್ಠಾನವು ಉಪನಿಷತ್ತಿನಲ್ಲಿ ಕಾಣುವುದರಿಂದ ಅವರಿಗೆ ಬ್ರಹ್ಮವಿದ್ಯಾಧಿಕಾರವುಂಟು—ಎಂದು ಈ ಸೂತ್ರದ ಅರ್ಥವು. "ಯಜ್ಞೇನ ದಾನೇನ ತಪಸಾऽನಾಶಕೇನಬ್ರಾಹ್ಮಣಾವಿವಿದಿಷನ್ತಿ"(ಬೃ. ಉ. ೪-೪-೨೨) ಎಂಬ ಶ್ರುತಿವಾಕ್ಯಪ್ರಕಾರ ಅವರಿಗೆ ಅಗ್ನಿಹೋತ್ರಾದಿಗಳಿಲ್ಲದಿದ್ದರೂ ದಾನ, ತಪಸ್ಸು, ಉಪವಾಸಾದಿಗಳನ್ನು ತಮ್ಮ ಬ್ರಹ್ಮವಿದ್ಯೆಗೆ ಅಂಗವಾಗಿ ಅವರು ಅನುಷ್ಠಿಸಿ ಸಿದ್ಧಿಯನ್ನು ಪಡೆಯಬಹುದು. ರೈಕ್ವರೆಂಬವರೂ, ಭೀಷ್ಮನೂ, ಸಂವರ್ತ ಇತ್ಯಾದಿಗಳು ಅನಾಶ್ರಮಿಗಳಾಗಿದ್ದರೂ, ಮೇಲೆಹೇಳಿದ

ಅನುಷ್ಠಾನಗಳಿಂದ, ಬ್ರಹ್ಮವಿದ್ಯಾನಿಷ್ಠರಾಗಿದ್ದರೆಂದು ಸ್ಮೃತೀತಿಹಾಸಾದಿಗಳಲ್ಲಿ ಹೇಳಿವೆ.

"ಜಪ್ಯೇನಾಪಿಚ ಸಂಸಿಧ್ಯೇದ್ಬ್ರಾಹ್ಮಣೋ ನಾತ್ರಸಂಶಯಃ" (ಮನುಸ್ಮೃ. ೨-೮-೩) ಎಂದರೆ—ಜಪವನ್ನು ಅಂಗವಾಗಿ ಇಟ್ಟುಕೊಂಡು ಬ್ರಹ್ಮೋಪಾಸನವನ್ನು ಮಾಡುವವನು ಸಿದ್ಧಿಯನ್ನು ಹೊಂದುವನು, ಇದರಲ್ಲಿ ಸಂಶಯವಿಲ್ಲ, ಎಂದು ಮನುಸ್ಮೃತಿಯಲ್ಲಿ "ಜಪವನ್ನೂ" ಒಂದು ಸಾಧನವಾಗಿ ಹೇಳಿದೆ. ಇದೇ ರೀತಿಯಲ್ಲಿ "ತಪಸ್ಸು" ಇತ್ಯಾದಿಗಳೂ ವಿದ್ಯಾಂಗವಾಗಿ ಸಿದ್ಧಿಯನ್ನುಂಟುಮಾಡುವುವು.

"ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ವಿದ್ಯಯಾಽಽತ್ಮಾನಾಮನ್ವಿಷ್ಯಾತ್'' (ಪ್ರಶ್ನ. ಉ. ೧-೧೦) ಎಂದರೆ—ತಪಸ್ಸು, ಬ್ರಹ್ಮಚರ್ಯ, ಶ್ರದ್ಧೆ, ವಿದ್ಯೆ ಮೊದಲಾದವುಗಳಿಂದ ಪರಮಾತ್ಮನನ್ನು ಅರಿಯುವನು ಎಂದು ಶ್ರುತಿಪ್ರಮಾಣವಿರುವುದು.

ಅನಾಶ್ರಮಿಗಳಿಗೂ ಬ್ರಹ್ಮವಿದ್ಯೆಯು ಇರುವುದರಿಂದ ವರ್ಣಾಶ್ರಮಗಳೂ, ತದ್ಧರ್ಮಗಳೂ ಅವಶ್ಯಕಗಳಿಲ್ಲದೆ ಹೋಗಬಹುದಲ್ಲವೆ ಎಂಬ ಒಂದು ಶಂಕೆಯು ಏರ್ಪಡುವುದು.

"ಅಂತರಾ ಚಾಪಿ ತು ತದ್ದೃಷ್ಟೇಃ"

"ಅಂತಸ್ತ್ವಿತರಜ್ಜ್ಯಾಯೋ ಲಿಂಗಾಚ್ಚ" (ಶಾ. ಮೀ. ೩-೪-೩೯) ಎಂದರೆ—ಅನಾಶ್ರಮಿತ್ವಕ್ಕಿಂತಲೂ ಬೇರೆಯಾದ ಆಶ್ರಮಿತ್ವವು, ಅವುಗಳಲ್ಲಿ ಧರ್ಮಕರ್ಮಾದಿ ಚಿಹ್ನೆಗಳಿರುವುದರಿಂದಲೂ, ಮತ್ತು ಶ್ರುತಿವಾಕ್ಯಾಧಾರದಿಂದಲೂ ಶ್ರೇಷ್ಠವಾದದ್ದು ಎಂದು ಸೂತ್ರಾರ್ಥವು. "ಅನಾಶ್ರಮೀನ ತಿಷ್ಠೇತ್ತುದಿನಮೇಕಮಪಿದ್ವಿಜಃ'' ಇತ್ಯಾದಿ ಧರ್ಮಶಾಸ್ತ್ರರೀತ್ಯಾ ದ್ವಿಜನು ಒಂದು ದಿವಸವೂ ಕೂಡ ಅನಾಶ್ರಮಿಯಾಗಿರಕೂಡದು—ಎಂದು ಶಾಸ್ತ್ರವು ಅನಾಶ್ರಮಿತ್ವವನ್ನು ನಿಷೇಧಿಸುತ್ತದೆ. ಬ್ರಹ್ಮಚರ್ಯವ್ರತವು ಮುಗಿದ ಮೇಲಾಗಲಿ ಪತ್ನೀವಿಯೋಗಾನಂತರವಾಗಲಿ ದ್ವಿಜನು ಗೃಹಸ್ಥಾಶ್ರಮ ಧರ್ಮವನ್ನು ಶೀಘ್ರವಾಗಿ ಅಂಗೀಕರಿಸಬೇಕು. ಬ್ರಾಹ್ಮಣನು ಒಂದು ವರುಷವು ಅನಾಶ್ರಮಿಯಾಗಿದ್ದರೆ ಅವನು ಮೂರು ಕೃಚ್ಛ್ರಪ್ರಾಯಶ್ಚಿತ್ತ

ವನ್ನು ಆಚರಿಸಬೇಕು. ಆದ್ದರಿಂದ ಅನಾಶ್ರಮಕ್ಕಿಂತಲೂ ಆಶ್ರಮ ಜೀವನವು ಉತ್ತಮವು.

**ಆಶ್ರಮ ಧರ್ಮಭ್ರಷ್ಟತ್ವ ವಿಚಾರವು:—**

ಆಶ್ರಮಗಳಲ್ಲಿ ಇರುವವರು ತಮ್ಮತಮ್ಮ ಆಶ್ರಮ ಧರ್ಮಗಳನ್ನು ತ್ಯಜಿಸಿ ಭ್ರಷ್ಟರಾದರೆ ಅವರಿಗೆ ಬ್ರಹ್ಮವಿದ್ಯಾಧಿಕಾರವಿಲ್ಲ.

"ಬ್ರಹ್ಮಚರ್ಯಾಚಾರ್ಯಕುಲವಾಸೀ...." "ಆತ್ಮಾನಮಾಚಾರ್ಯ ಕುಲೇವಸಾದರ್ಯ" (ಛಾಂ. ಉ. ೨-೨-೩೧) ಎಂದರೆ—ನೈಷ್ಠಿಕನು (ಎಂದರೆ ಬ್ರಹ್ಮಚಾರಿಯು) ಆಚಾರ್ಯನ ಮನೆಯಲ್ಲೇ ಇದ್ದು ಬ್ರಹ್ಮಚಾರಿಯಾಗಿಯೇ ಸಾಯುವನು ಎಂದು ಶ್ರುತಿವಿಧಿಯಿರುವುದು. ವಾನಪ್ರಸ್ಥನಿಗೆ (ಎಂದರೆ ವೈಖಾನಸನಿಗೆ) "ಅರಣ್ಯಮಿಯಾತ್ತತೋ ನಪುನರೇಯಾತ್" ಎಂದರೆ-ವಾನಪ್ರಸ್ಥನು ಅರಣ್ಯವನ್ನು ಪ್ರವೇಶಿಸಿದಮೇಲೆ ಪುನಃ ತಿರುಗಿ ಬರಕೂಡದು-ಎಂಬ ನಿಯಮವಿದೆ. ಸನ್ಯಾಸಿಗೆ (ಎಂದರೆ ಪರಿವ್ರಾಜಕನಿಗೆ) "ಸನ್ಯಸ್ಯಾಗ್ನಿಂನಪುನರಾವರ್ತಯೇತ್" ಎಂದರೆ—ಸನ್ಯಾಸಿಯು ಪುನಃ ಗೃಹಸ್ಥಾದಿ ಬೇರೆ ಆಶ್ರಮಗಳನ್ನು ಪ್ರವೇಶಿಸಕೂಡದು ಎಂದು ವಿಧಿಯಿದೆ.

ಆದ್ದರಿಂದ ಇವರುಗಳು ಅನಾಶ್ರಮಿಗಳಾಗಿರುವುದು ಶಾಸ್ತ್ರವಿರುದ್ಧವಾದ್ದರಿಂದ ಈ ವಿಧವಾದ ನೈಷ್ಠಿಕಾಶ್ರಮಭ್ರಷ್ಟರಿಗೆ ಬ್ರಹ್ಮವಿದ್ಯಾಧಿಕಾರವಿಲ್ಲವು ಎಂದು ಸಿದ್ಧಾನ್ತವು.

ನೈಷ್ಠಿಕಾಶ್ರಮಭ್ರಷ್ಟರಿಗೆ ಪ್ರಾಯಶ್ಚಿತ್ತವಿದೆಯೋ ಇಲ್ಲವೋ ಎಂಬುದೊಂದು ಪ್ರಶ್ನೆ. ಇತರ ಆಶ್ರಮಿಗಳಿಗೆ ಅಜ್ಞಾನಾದಿಗಳಿಂದ ಅನುಷ್ಠಿಸಿದ ಪಾಪಗಳು ಮಹಾಪಾತಕವಲ್ಲದಿದ್ದರೆ ಪ್ರಾಯಶ್ಚಿತ್ತಗಳು ಶಾಸ್ತ್ರರೀತ್ಯಾ ವಿಧಿಸಿರುವುವು. ಆದರೆ ನೈಷ್ಠಿಕನಿಗೆ, ಅವನ ಪಾಪವು ಅಲ್ಪವಾಗಿದ್ದಾಗ್ಯೂ ಅವನಿಗೆ ಪ್ರಾಯಶ್ಚಿತ್ತವಿಲ್ಲವು ಮತ್ತು ಬ್ರಹ್ಮವಿದ್ಯಾಧಿಕಾರವಿಲ್ಲವು ಎಂಬುದೇ ಸಿದ್ಧಾನ್ತವು.

"ಆರೂಢೋನೈಷ್ಠಿಕಂ ಧರ್ಮಂ ಯಸ್ತುಪ್ರಚ್ಯವತೇದ್ವಿಜಃ। ಪ್ರಾಯಶ್ಚಿತ್ತಂ ನಪಶ್ಯಾಮಿ ಯೇನಶುದ್ಧೇತ್ಸಆತ್ಮಹಾ" (ಆಗ್ನೇಯ ೧೬-೫-೨೩)

ಎಂದರೆ—ನೈಷ್ಠಿಕನು (ಬ್ರಹ್ಮಚಾರಿಯು) ಪತಿತನಾದರೆಅವನು ಪರಿಶುದ್ಧನಾಗುವುದಕ್ಕೆ ಪ್ರಾಯಶ್ಚಿತ್ತವೇ ಇಲ್ಲವು ಎಂದು ಅರ್ಥ. ಸ್ಮೃತಿಯಲ್ಲಿ "ಉಪಕುರ್ವಾಣ"ನೆಂಬ ಒಬ್ಬ ಬ್ರಹ್ಮಚಾರಿಗೆ ಮಾತ್ರ ಒಂದು ವಿಧವಾದ ಪ್ರಾಯಶ್ಚಿತ್ತವನ್ನು ವಿಧಿಸಿದೆ. ಆದರೆ ಅದರಿಂದ ಅವನ ಪಾಪ ನಿವೃತ್ತಿಯಾಗುತ್ತದೆಯೇವಿನಾ ಬ್ರಹ್ಮವಿದ್ಯೆಗೆ ಅವನು ಅರ್ಹನಾಗಲಿಲ್ಲ.

**ಮೌನ, ಪಾಂಡಿತ್ಯ, ಬಾಲ್ಯ ಇವುಗಳೂ ವಿದ್ಯಾಸಹಕಾರಿಗಳು :—**

ಶಮದಮಾದಿಗಳು ವಿದ್ಯಾಸಹಕಾರಿಗಳಾಗುವಂತೆ ಮೌನವೂ, ಪಾಂಡಿತ್ಯವು, ಬಾಲ್ಯವು, ಇವು ಮೂರೂಸಹ ವಿದ್ಯಾಸಹಕಾರಿಗಳಾಗುವುವು. ಇವುಗಳೂ ವಿದ್ಯಾನಿಷ್ಠನಿಗೆ ಅತ್ಯಾವಶ್ಯಕಗಳು. ವಾಜಸನೇಯದಲ್ಲಿ ಉಷಸ್ತಿಬ್ರಾಹ್ಮಣದಲ್ಲಿ "ತಸ್ಮಾದ್ಬ್ರಾಹ್ಮಣಂ ಪಾಂಡಿತ್ಯಂ ನಿರ್ವಿದ್ಯಬಾಲ್ಯೇನ ತಿಷ್ಠಾಸೇತ್-ಬಾಲ್ಯಂಚ ಪಾಂಡಿತ್ಯಂಚ ನಿರ್ವಿದ್ಯಾತ ಮುನಿಃ" (ಬೃ.ಉ. ೩-೫-೧) ಎಂದರೆ—ಉಪಾಸಕನು ಮೊದಲು ಪಾಂಡಿತ್ಯವನ್ನು ಸಂಪಾದಿಸಿ ಬಾಲ್ಯವೃತ್ತಿಯಲ್ಲಿ, ಎಂದರೆ—ಬಾಲಕನ ವೀರ್ಯದಂತೆ ತನ್ನ ವಿದ್ಯಾ ಪ್ರದರ್ಶನವನ್ನು ಮಾಡದೆ ಇರುವನು. ಇವೆರಡೂ ಆದನಂತರ ಮೌನವನ್ನು ಆಚರಿಸುವನು—ಎಂದು ಅರ್ಥವು. ಉಪಾಸಕನು "ಪಾಂಡಿತ್ಯ" ಎಂದರೆ ಶ್ರವಣಮನನಾದಿಗಳಿಂದ ಬ್ರಹ್ಮಜ್ಞಾನವನ್ನು ಹೊಂದಿ ಅನಂತರ ತನ್ನ ವೈಭವವನ್ನು ಪ್ರಕಾಶಪಡಿಸದೆ ಇದ್ದು; ಅನಂತರ "ಮುನಿಃ" ಎಂದರೆ ಮುಂದೆ ಧ್ಯಾನಿಸಲ್ಪಡುವ ಪರಮಾತ್ಮನ ಅಪ್ರಾಕೃತ ದಿವ್ಯಮಂಗಳ ವಿಗ್ರಹವನ್ನು ಮನನಮಾಡುವನು ಎಂದು ಮೇಲೆಹೇಳಿದ ಶ್ರುತಿವಾಕ್ಯಕ್ಕೆ ಅರ್ಥವಾಗುವುದು. ಇಲ್ಲಿ ಪಾಂಡಿತ್ಯದಲ್ಲಿ ಹೇಳಲ್ಪಟ್ಟ ಜ್ಞಾನಕ್ಕಿಂತಲೂ "ಮೌನ"ವೆಂದು ಹೇಳಲ್ಪಟ್ಟ ಜ್ಞಾನವು ಬೇರೆ. ಈ ಜ್ಞಾನವನ್ನು ಹಿಂದೆ ಹೇಳಲಿಲ್ಲ. ಆದ್ದರಿಂದ ಜ್ಞಾನ, ಶಮದಮಾದಿಗಳಂತೆ "ಮೌನ"ವೂ ಒಂದು ವಿಧಿಯೆಂದು ಅಂಗೀಕರಿಸಬೇಕು. ಪಾಂಡಿತ್ಯ ಮತ್ತು ಬಾಲ್ಯದಂತೆ ಇದೂ ಒಂದು ಅಂತರಂಗ ಸಾಧನವು. ಪಾಂಡಿತ್ಯವು ಉಪಾಸ್ಯನಾದ ಪರಮಪುರುಷ ಸ್ವರೂಪ ರೂಪ ಗುಣ ವಿಭವಾದಿಗಳ ನಿಶ್ಚಯಜ್ಞಾನವು. ಬಾಲ್ಯವು ಸ್ವಮಾಹಾತ್ಮ್ಯಾನಾವಿಷ್ಕಾರವು. ಸದಾಚಾರ್ಯೋಪದೇಶದಿಂದ

ವೇದಾಂತಶ್ರವಣವನ್ನು ಹೊಂದಿ ಶ್ರುತ್ಯರ್ಥವನ್ನು ಮನನಮಾಡಿ ಉಪಾಸ್ಯನಾದ ಪರಮಪುರುಷನ ವಿಷಯಕ ನಿಶ್ಚಯಜ್ಞಾನವನ್ನು ಪಡೆದು, ಅನಂತರ ಮೌನರೂಪವಾದ ಸಹಕಾರಿಯನ್ನು ಪಡೆದು, ಅನಂತರ ಪರಿಪೂರ್ಣ ಬ್ರಹ್ಮಸಾಕ್ಷಾತ್ಕಾರವನ್ನು ಪಡೆಯುವನು—ಎಂದು ಮೇಲಿನ ಶ್ರುತಿ ವಾಕ್ಯಕ್ಕೆ ಅರ್ಥವಾಗುವುದು. ಮೌನವೆಂದರೆ ಧ್ಯೇಯವಾದ ಮೂರ್ತಿಯ ಪುನಃಪುನರ್ಧ್ಯಾನಾಭ್ಯಾಸವು. ಇದು ಉಪಾಸನವ್ಯತಿರಿಕ್ತಕಾಲಗಳಲ್ಲಿಯೂ ಮಾಡತಕ್ಕದ್ದು. ಮುನಿ ಶಬ್ದವು ಪ್ರಕೃಷ್ಟಮನನ ಶೀಲರಾದ ವ್ಯಾಸಾದಿಮಹರ್ಷಿಗಳಲ್ಲಿ ಪ್ರಯೋಗಿಸಲ್ಪಡುವುದರಿಂದ ಮೌನ ಶಬ್ದಕ್ಕೆ ಇದೇ ಅರ್ಥವು.

**ಕರ್ಮಫಲಪ್ರಾಪ್ತಿಕಾಲವು:—**

ಐಹಿಕ ಕರ್ಮಗಳು ಆಯಾ ಕರ್ಮಗಳು ಸಂಪೂರ್ಣವಾಗಿ ಮುಗಿದ ತಕ್ಷಣದಲ್ಲಿಯೇ ಫಲಪ್ರದಗಳಾಗುತ್ತವೆಯೋ ಅಥವಾ ವಿಳಂಬ್ಯಫಲಪ್ರದವೇ? ಎಂಬ ಪ್ರಶ್ನೆ.

“ ಐಹಿಕಮಪ್ರಸ್ತುತ ಪ್ರತಿಬನ್ಧೇ ತದ್ದರ್ಶನಾತ್ ” (ಶಾ. ಮಿ. ೩-೪-೫೧) ಎಂದರೆ—ಪ್ರತಿಬಂಧಕಗಳು ಸಮೀಪದಲ್ಲಿ ಒದಗದೇ ಇದ್ದರೆ ಐಹಿಕ ಕರ್ಮಗಳು ವಿಳಂಬವಿಲ್ಲದೆಯೇ ಫಲಕಾರಿಗಳಾಗುವುವು. ಈ ಅರ್ಥವನ್ನೇ ಶ್ರುತಿವಚನವೂ ಹೇಳುವುದರಿಂದ ಇದೇ ರೀತಿಯಾಗಿ ಅಂಗೀಕರಿಸಬೇಕು—ಎಂದು ಈ ಸೂತ್ರದ ಅರ್ಥವು. ಆ ಫಲಪ್ರಾಪ್ತಿಗೆ ಬೇರೆ ಯಾವುದಾದರೂ ಪ್ರತಿಬಂಧಕಗಳಿಲ್ಲದಿದ್ದರೆ ಕೂಡಲೇ ಫಲಿಸುವುದು. ಪ್ರತಿಬಂಧಕಗಳೇನಾದರೂ ಇದ್ದರೆ ಆ ಪ್ರತಿಬಂಧಕವು ನಿವೃತ್ತಿಯಾದನಂತರ (ಅಥವಾ ಆ ಕಾಲಾಂತರದಲ್ಲಿ) ಫಲಿಸುವುದು ಎಂದು ಸಿದ್ಧಾನ್ತವು.

“ ಯದೇವವಿದ್ಯಯಾಕರೋತಿ ತದೇವ ವೀರ್ಯವತ್ತರಂ ಭವತಿ ” (ಛಾಂ. ಉ. ೧-೧-೧೦) ಎಂದರೆ ಉದ್ಗೀಥವಿದ್ಯಾನುಷ್ಠಾನದಲ್ಲಿ ಯಾಗ ಕರ್ಮವು ವೀರ್ಯವತ್ತರವಾಗಿ ಆಗುವುದು. ಎಂದರೆ—ಯಾಗಕರ್ಮದ ಫಲವು ಶೀಘ್ರದಲ್ಲಿ ಲಭಿಸಬೇಕಾದರೆ “ ಉದ್ಗೀಥ ” ಉಪಾಸನವನ್ನು

ಆಚರಿಸಬೇಕು—ಎಂಬ ಈ ಶ್ರುತಿವಾಕ್ಯದಿಂದ ಈ ಅರ್ಥವು ವಿಶದಮಾಡಲ್ಪಟ್ಟಿರುವುದು. ಈ ಉದ್ಗೀಥ ಉಪಾಸನದಿಂದ ಸಮೀಪದಲ್ಲಿರುವ ಪ್ರತಿಬಂಧಕಗಳು ನಿವಾರಣೆಯಾಗಿ ಕರ್ಮವು ಶೀಘ್ರಫಲಪ್ರದವಾಗುವುದು.

ಆದರೆ ಐಹಿಕ ಫಲಗಳಿಗೆ ಉಂಟಾಗುವ ಪ್ರತಿಬನ್ಧಕನಿವೃತ್ತಿಗೆ ಉಪಾಸನೆಗಳಿರುವಂತೆ ಮೋಕ್ಷಫಲಕ್ಕೆ ವಿಘ್ನಕಾರಿಯಾದ ಭಾಗವತಾಪಚಾರಾದಿ ಮಹಾಪಾಪಗಳಿಗೂ, ಅನಾದ್ಯವಿದ್ಯಾಸಂಚಿತಾನನ್ತಾನನ್ತ ಪಾಪ ಮತ್ತು ಕರ್ಮವಾಸನೆಗಳಿಗೂ ಉಪಾಸನಾನಂತರದಲ್ಲಿಯೇ ಎಲ್ಲಾ ಪಾಪಗಳೂ ನಶಿಸಿ ಮೋಕ್ಷವು ಕೂಡಲೇ ಸಿದ್ಧಿಸುವುದೆಂಬ ನಿಯಮವಿಲ್ಲ. ಭಗವದನುಗ್ರಹದಿಂದಲೇ ಈ ಫಲವು ಲಭಿಸಬೇಕು.

## ಬ್ರಹ್ಮವಿದ್ಯೆಯಿಂದ ಪಾಪನಿವೃತ್ತಿಯಾಗುವ ಕ್ರಮವು:—

ಬ್ರಹ್ಮಪ್ರಾಪ್ತಿಕಾಲದಲ್ಲಿ ಜೀವನಿಗೆ ಆಗುವ ಪಾಪಪುಣ್ಯಗಳ ಹಾನಿಯು ಕೆಳಗೆ ವಿವರಿಸಲ್ಪಡುತ್ತದೆ. ಬ್ರಹ್ಮಪ್ರಾಪ್ತಿಯಕಾಲದಲ್ಲಿ ಪುಣ್ಯ ಪಾಪಗಳು ಉಪಾಸಕನನ್ನು ತ್ಯಜಿಸುವ ವಿಷಯದಲ್ಲಿ ಶ್ರುತಿಗಳು ಈರೀತಿ ಹೇಳುತ್ತವೆ.

(೧) "ತದಾವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೇತಿ" (ಮುಂ. ಉ. ೩-೧-೩) ಎಂದರೆ ಉಪಾಸಕನು ದೇಹಾವಸಾನಕಾಲದಲ್ಲಿ ತನ್ನ ಪುಣ್ಯಪಾಪಗಳನ್ನೆಲ್ಲಾ ಒದರಿಬಿಟ್ಟು ಪರಮಾತ್ಮನನ್ನು ಹೊಂದುತ್ತಾನೆ—ಎಂದು ಅಥರ್ವಣದಲ್ಲಿ ಹೇಳಿದೆ.

(೨) "ಅಶ್ವಇವರೋಮಾಣಿ ವಿಧೂಯಪಾಪಂ ಚಂದ್ರಇವರಾಹೋರ್ಮುಖಾತ್ಪ್ರಮುಚ್ಯ | ಧೂತ್ವಾಶರೀರಮಕೃತಂ ಕೃತಾತ್ಮಾ | ಬ್ರಹ್ಮಲೋಕಮಭಿಸಂಭವಾನಿ" (ಛಾಂ. ಉ. ೮-೧೩-೧) ಎಂದರೆ—ಕುದುರೆಯು ತನ್ನ ಮೈಕೂದಲನ್ನು ಹ್ಯಾಗೆ ಒದರಿಬಿಡುವುದೋ ಹಾಗೆಯೇ ಪಾಪಗಳನ್ನೆಲ್ಲಾ ಒದರಿಬಿಟ್ಟು ರಾಹುವಿನಿಂದ ವಿಮುಕ್ತನಾದ ಚಂದ್ರನಂತೆ ಪರಿಶುದ್ಧನಾಗಿ ಹೊರಟು ಜೀವನು ಕೃತಕೃತ್ಯನಾಗಿ ಬ್ರಹ್ಮಲೋಕಾಭಿಮುಖವಾಗಿ ಹೊರಟುಬಿಡುವನು.

(೩) ''ತಸ್ಯಪುತ್ರಾ ದಾಯ ಮುಪಯನ್ತಿ | ಸುಹೃದಸ್ಸಾಧುಕೃತ್ಯಾಂ ದ್ವಿಷನ್ತಃ ಪಾಪಕೃತ್ಯಾಂ" ಎಂದರೆ—ಅವನ ಪುತ್ರರು ಅವನ ಧನವನ್ನೂ, ಮಿತ್ರರು ಅವನ ಪುಣ್ಯವನ್ನೂ, ಅವನ ಶತ್ರುಗಳು ಅವನ ಪಾಪವನ್ನೂ ಹಂಚಿಕೊಳ್ಳುತ್ತಾರೆ.

(೪) ''ತತ್ಸುಕೃತ ದುಷ್ಕೃತೇಧೂನುತೇ ತಸ್ಯಪ್ರಿಯಾಜ್ಞಾತಯ ಸ್ಸುಕೃತ ಮುಪಯಂತಿ ಅಪ್ರಿಯಾ ದುಷ್ಕೃತಂ" (ಕೌ. ಉ. ೧-೪) ಎಂದರೆ-ಮುಕ್ತಜೀವನಿಂದ ಒದರಲ್ಪಟ್ಟ ಅವನ ಸುಕೃತ ಮತ್ತು ದುಷ್ಕೃತ ಗಳು ಅವನ ಮಿತ್ರ ಮತ್ತು ಶತ್ರುಗಳನ್ನು ಸೇರುತ್ತವೆ.

ಈಮೇಲಿನ ಶ್ರುತಿವಾಕ್ಯಗಳಿಂದ ತಿಳಿಯಲ್ಪಡುವುದೇನೆಂದರೆ—ಬ್ರಹ್ಮಪ್ರಾಪ್ತಿಗೆ ಮೊದಲು ಜೀವನು ತನ್ನ ಸುಕೃತ ಮತ್ತು ದುಷ್ಕೃತ ಗಳೆರಡನ್ನೂ ಒದರಿಬಿಡುತ್ತಾನೆ. ಹಾಗೆ ಒದರಲ್ಪಟ್ಟ ಸುಕೃತ ದುಷ್ಕೃತ ಗಳು ಕಾರ್ಯಪೂರ್ಣತೆಗಾಗಿ ಅವನ ಮಿತ್ರ ಶತ್ರುಗಳನ್ನು ಸೇರುತ್ತವೆ. ಅವನ ಧನವೆಲ್ಲಾ ಅವನ ಪುತ್ರರನ್ನು ಸೇರುವುದು ಎಂದು ತಿಳಿದುಬರುವುದು. ಪಾಪಗಳನ್ನು ಒದರಿಬಿಡುವಂತೆ ಪುಣ್ಯವನ್ನೂ ಒದರಿಬಿಡಬೇಕು. ಹಾಗಾಗದಿದ್ದರೆ ಆ ಪುಣ್ಯಫಲಾನುಭವಾರ್ಥವಾಗಿ ಅವನು ಸ್ವರ್ಗಾದಿ ಪುಣ್ಯಲೋಕಗಳಿಗೆ ಹೋಗಬೇಕಾಗುವುದು. ಹಾಗಾದರೆ ಪುನಃ ಶರೀರ ವನ್ನು ಪರಿಗ್ರಹಿಸಬೇಕಾಗುವುದು.

ಶರೀರವಿಯೋಗದಲ್ಲೂ ಮತ್ತು ಅರ್ಚಿರಾದಿಗತಿಪ್ರಯಾಣಕಾಲ ದಲ್ಲೂ ಜೀವನಿಗೆ ಯಾವ ವಿಧವಾದ ಕರ್ಮಗಳೂ ಇಲ್ಲವೆಂದು ಹೇಳಿದರೆ ಆ ಕಾಲದಲ್ಲಿ ಅವನಿಗೆ ಸೂಕ್ಷ್ಮಶರೀರವೂ ಇರಕೂಡದು. ಯಾತಕ್ಕೆಂದರೆ ಆ ಸೂಕ್ಷ್ಮಶರೀರಕ್ಕೆ ಬೇಕಾದ ಕರ್ಮಗಳೂ ನಶಿಸಿಹೋದರೆ "ದೇವಯಾನ ಗತಿ"ಯನ್ನು ಹೇಳುವ ಶ್ರುತಿವಾಕ್ಯಕ್ಕೆ ವಿರೋಧವುಂಟಾಗುವುದಿಲ್ಲವೇ ಎಂಬ ಸಂಶಯವುಂಟಾಗಬಹುದು. ಇದಕ್ಕೆ "ಉಪಪನ್ನ ಸ್ತಲ್ಲಕ್ಷಣಾರ್ಥೋ ಪಲಬ್ಧೇರ್ಲೋಕವತ್" (ಶಾ.ಮಿಾ.೩-೩-೩೦) ಎಂದರೆ ಆ ಲಕ್ಷಣಗಳುಳ್ಳ, ಅಕರ್ಮವಶ್ಯವಾದ ಶರೀರವು ಮುಕ್ತನಿಗೆ ಉಂಟಾಗುವುದರಿಂದ

ಪಾಪಾದಿಗಳು ನಾಶವಾದಮೇಲೆಯೂ ಅರ್ಚಿರಾದಿಗತಿಯುಂಟಾಗುವುದು. ಇದನ್ನು ಲೋಕದೃಷ್ಟಾಂತದಲ್ಲಿಯೂ ಕಂಡಿರುವೆವು—ಎಂದು ಅರ್ಥವು. ಸಕಲಕರ್ಮಗಳೂ ನಶಿಸಿ ಮುಕ್ತನಾದಮೇಲೆ "ಸ್ವಸ್ವರಾಡ್ಭವತಿ ತಸ್ಯ ಸರ್ವೇಷು ಲೋಕೇಷು ಕಾಮಚಾರೋಭವತಿ" (ಛಾಂ. ಉ. ೭-೨೫-೨) ಎಂದರೆ ಮುಕ್ತನಾದ ಪುರುಷನು ಕರ್ಮವಶ್ಯನಾಗುವುದಿಲ್ಲ. ಸ್ವಸ್ವರೂಪ ವನ್ನು ಪಡೆಯುವನು. ಅವನಿಗೆ ಸರ್ವಲೋಕಗಳಲ್ಲಿಯೂ ಯಥೇಚ್ಛವಾಗಿ ಸಂಚಾರಮಾಡುವ ಶಕ್ತಿಯಿರುವುದು—ಎಂದು ಕರ್ಮಶೂನ್ಯನಾದ ಮುಕ್ತ ನಿಗೂ ಸಂಕಲ್ಪಮಾತ್ರದಿಂದಲೇಶರೀರವೂ, ಲೋಕಾಂತರಗಮನಶಕ್ತಿಯೂ ಶ್ರುತಿಯಲ್ಲಿ ಹೇಳಿರುವುದು. ಹಾಗೆಯೇ ಶರೀರಾವಸಾನದಲ್ಲಿ ಇವನಿಗೆ ಕರ್ಮಕ್ಷಯವು ಪೂರ್ಣವಾಗಿ ಆದರೂ ಅವನ ಪರಮಾತ್ಮೋಪಾಸನಬಲ ದಿಂದಲೂ ಪರಮಾತ್ಮನ ಸಂಕಲ್ಪದಿಂದಲೂ ಅವನಿಗೆ ಸೂಕ್ಷ್ಮಶರೀರವೂ ಮತ್ತು ಅರ್ಚಿರಾದಿ ಮಾರ್ಗಪ್ರಯಾಣವೂ ಸಂಭವಿಸುವುವು. ಇದಕ್ಕೆ ಲೋಕದೃಷ್ಟಾಂತವಾಗಿ ಒಬ್ಬ ರಾಜನಿಗೆ ಅತ್ಯಂತ ಪ್ರೀತಿಪಾತ್ರನಾದ ಮನುಷ್ಯನು ತನ್ನ ಇಷ್ಟಪ್ರಕಾರ ಸಂಚಾರಸುಖಾದಿಗಳನ್ನು ಆ ರಾಜನ ಬಲದಿಂದಲೇ ಪಡೆಯುವಂತೆ ದೇವಾಧಿದೇವನೂ ಸರ್ವಶಕ್ತನೂ ಕಾರುಣ್ಯ ಸಾಗರನೂ ಆದ ಪರಮಾತ್ಮನನ್ನು ಉಪಾಸಿಸಿದವನಿಗೆ ಸೂಕ್ಷ್ಮ ಶರೀರ ಮತ್ತು ಅರ್ಚಿರಾದಿಗಮನಶಕ್ತಿಗಳಿರುವುದಕ್ಕೆ ಯಾವ ಅಭ್ಯಂತರವೂ ಇಲ್ಲವೆಂದು ಸಿದ್ಧಾನ್ತವು.

ಬ್ರಹ್ಮಜ್ಞಾನಿಯಾದ ಜೀವನಿಗೇ ಮೋಕ್ಷಪ್ರಾಪ್ತಿಯಾಗುವಾಗ ಬ್ರಹ್ಮಜ್ಞರಾದ ವಸಿಷ್ಠಾದಿ ಬ್ರಹ್ಮಋಷಿಗಳಿಗೆ ಯಾತಕ್ಕೆ ಮೋಕ್ಷಪ್ರಾಪ್ತಿ ಯಾಗಲಿಲ್ಲ ಎಂಬ ಒಂದು ಪ್ರಶ್ನೆಯು ಹೊರಡಬಹುದು. ವಸಿಷ್ಠ ವಿಶ್ವಾಮಿತ್ರಾದಿ ಬ್ರಹ್ಮಜ್ಞಾನಿಗಳಿಗೆ ಅವರವರ ಅಧಿಕಾರಕಾಲವು ಮುಗಿಯು ವವರಿವಿಗೂ ಅವರ ಶರೀರಗಳು ಇರುತ್ತವೆ. ಅವರುಗಳಿಗೂ ಅವರ ಕರ್ಮಾನುಸಾರವಾಗಿ ಶರೀರವೂ ಮತ್ತು ಅಧಿಕಾರವೂ ದೊರೆತಿರುವುದು. ಆದ್ದರಿಂದ ಆಯಾ ಅಧಿಕಾರಿಗಳಿಗೆ ಅವರವರ ಅಧಿಕಾರ ಪೂರ್ತಿಯಾಗುವ ವರಿವಿಗೂ ಬ್ರಹ್ಮಜ್ಞಾನಪೂರ್ತಿಯಿದ್ದಾಗ್ಯೂ ಮುಕ್ತಿಯುಂಟಾಗುವುದಿಲ್ಲ.

ಆ ಬ್ರಹ್ಮಜ್ಞಾನಿಗಳ ಶರೀರವೂ ಮತ್ತು ಅಧಿಕಾರವೂ ಪ್ರಾರಬ್ಧಕರ್ಮ ಫಲವಾಗಿಯೇ ಬಂದಿರುವುದು. ಆ ಪ್ರಾರಬ್ಧಕರ್ಮಫಲವನ್ನು ಅನುಭವಿಸಿ ಮುಗಿಸಿದಮೇಲೆಯೇ ಅವರಿಗೆ ಮೋಕ್ಷವುಂಟಾಗುವುದು.

# ನಾಲ್ಕನೇ ಪ್ರಕರಣವು

**ಧ್ಯಾನಸ್ವರೂಪವು :—**

ಉಪಾಸನಾಸ್ವರೂಪವು ಮೂರನೆಯ ಅಧ್ಯಾಯದಲ್ಲಿ ಸಾಂಗವಾಗಿ ವಿಚಾರಿಸಲ್ಪಟ್ಟಿತು. ಈಗ ಉಪಾಸನಸ್ವರೂಪವು ನಿರ್ಣಯಿಸಲ್ಪಡುವುದು.

''ಬ್ರಹ್ಮವೇದ ಬ್ರಹ್ಮೈವ ಭವತಿ'' (ಮುಂ. ಉ. ೩-೨-೯) ಎಂದರೆ ಬ್ರಹ್ಮಜ್ಞಾನಿಯು ಬ್ರಹ್ಮನನ್ನೇ ಹೊಂದುತ್ತಾನೆ—ಇತ್ಯಾದಿ ಶ್ರುತಿವಾಕ್ಯಗಳಲ್ಲಿ ಹೇಳಲ್ಪಟ್ಟ ಬ್ರಹ್ಮಜ್ಞಾನವು ''ಆವೃತ್ತಿರಸಕೃದುಪದೇಶಾತ್'' (ಶಾ. ಮಿ. ೪-೧-೧) ಎಂದರೆ ಧ್ಯಾನಸ್ಥಾನದಲ್ಲಿ ಉಪಾಸಕಜ್ಞಾನವು ಹೇಳಿರುವುದರಿಂದ ಆವೃತ್ತಿಯು (Repeated thinking) ಅಡಿಗಡಿಗೆ ಮಾಡಲ್ಪಡುತ್ತಿರಬೇಕು—ಎಂಬ ಸೂತ್ರವಾಕ್ಯರೀತ್ಯಾ ಅರ್ಥವನ್ನು ಮಾಡಬೇಕು.

ಪೂರ್ವಪಕ್ಷದವರು—ಧ್ಯಾನವನ್ನು ಎರಡುಮೂರು ಸಲ ಶಾಸ್ತ್ರ ವಿಧಿಯಪ್ರಕಾರ ಅದು ಉಪಾಸನವಾಗಬೇಕು—ಎಂದು ಹೇಳುತ್ತಾರೆ.

ಆದರೆ ''ಬ್ರಹ್ಮವೇದ'' ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ಬ್ರಹ್ಮಜ್ಞಾನವು "ಧ್ಯಾನೋಪಾಸನ" ಸ್ಥಾನದಲ್ಲಿ ಹೇಳಿರುವುದರಿಂದ ಧ್ಯಾನಪದದ ಅರ್ಥವುಳ್ಳದ್ದಾಗಿರುವುದು. ಧ್ಯಾನವೆಂದರೆ ಅವಿಚ್ಛಿನ್ನವಾದ ಸ್ಮೃತಿ ಪರಂಪರೆ ಅಂದರೆ ಅವಿಚ್ಛಿನ್ನವಾದ ಜ್ಞಾನದ ಆವೃತ್ತಿ. ಅದ್ದರಿಂದ

ಇಲ್ಲಿ ಹೇಳಲ್ಪಟ್ಟ ಬ್ರಹ್ಮಜ್ಞಾನವು ಅವಿಚ್ಛಿನ್ನವಾದ (ಎಂದರೆ ವಿರಾಮವಿಲ್ಲದೆ ಮಾಡಲ್ಪಟ್ಟ) ಜ್ಞಾನದ ಆವೃತ್ತಿ ಸ್ವರೂಪವಾಗಿ ಇದ್ದುಕೊಂಡೇ ಬ್ರಹ್ಮಪ್ರಾಪ್ತಿಯಾಗುವುದೆಂದು ಸಿದ್ಧಾಂತವು. "ಯಸ್ತದ್ವೇದ ಯತ್ಸವೇದ ಸಮಯೈತದುಕ್ತಃ" (ಛಾಂ. ಉ. ೪-೧-೪) ಎಂದು ಆರಂಭಿಸಿ "ಅನುಮ ಏತಾಂ ಭಗವೋ ದೇವತಾಂಶಾಧಿಯಾಂ ದೇವತಾಮುಪಾಸ್ತೆ"(ಛಾಂ.ಉ. ೪-೨-೨) ಎಂದು—"ಯಸ್ತದ್ವೇದ" ಎಂದು ಆರಂಭದಲ್ಲಿ ಸಾಮಾನ್ಯವಾದ ಜ್ಞಾನವು ಹೇಳಲ್ಪಟ್ಟಿತು. ಆರಂಭಿಸುವುದೇ ಮುಗಿಸಲ್ಪಡುವುದೂ ಆದ್ದರಿಂದ ಎರಡು ಪದಗಳಿಗೂ ಉಪಾಸನವೆಂದೇ ಅರ್ಥವು.

ಇಲ್ಲಿ "ಆವೃತ್ತಿರಸಕೃತ" ಎಂಬ ಸೂತ್ರದ "ಧ್ಯಾನ"ಶಬ್ದವು—ಭತ್ತವನ್ನು ಕುಟ್ಟಿ ಅಕ್ಕಿಯನ್ನು ಮಾಡುವ ಉದಾಹರಣೆಗೆ ಹೋಲಿಸಿದೆ. ಭತ್ತದಮೇಲೆ ಬೀಳುವ ಒನಕೆಯ ಪೆಟ್ಟುಗಳಂತೆ ಜೀವನಿಗೆ ಅವಿಚ್ಛಿನ್ನ ಸ್ಮೃತಿ. ಭತ್ತದಮೇಲಿನ ಹೊಟ್ಟು ಬಿಡುವಂತೆ ಇವನ ಅಜ್ಞಾನಾದಿಗಳ ನಿವೃತಿ. ಆದ್ದರಿಂದ ಬ್ರಹ್ಮಪ್ರಾಪ್ತಿಯ ಕಾಲದವರಿವಿಗೂ ಧ್ಯಾನವು ಅವಿಚ್ಛಿನ್ನವಾಗಿರಬೇಕು.

"ತದ್ರೂಪಪತ್ಯಯೇ ಚೈಕಾಸನ್ತತಿಶ್ಚಾನ್ಯ ನಿಸ್ಪೃಹಾ ತದ್ಧ್ಯಾನಂ" (ವಿ. ಪು. ೬-೭-೯೧) ಎಂದರೆ—ಎಡೆಬಿಡದೆ ಪರಮಾತ್ಮವಿಷಯಕವಾಗಿ ಮಾಡುವ ಸ್ಮೃತಿಪರಂಪರೆಯು ಧ್ಯಾನವೆಂದು ಕರೆಯಲ್ಪಡುವುದು—ಎಂದು ಸ್ಮೃತಿವಚನವಿರುವುದು.

**ಆತ್ಮೋಪಾಸನವು ಎಂದರೆ ಅಂತರಾತ್ಮಧ್ಯಾನೋಪಾಸನವು :—**

ಆತ್ಮಧ್ಯಾನಪರನು ಪರಮಾತ್ಮನನ್ನೇ ಚಿದಚಿದ್ವಿಲಕ್ಷಣನನ್ನಾಗಿಯೂ ಮತ್ತು ತನ್ನ ಆತ್ಮಕ್ಕೆ ಆತ್ಮನನ್ನಾಗಿಯೂ ಭಾವಿಸಿ ಧ್ಯಾನಮಾಡಬೇಕು. ಕೆಲವು ಭೇದಶ್ರುತಿಪರರು ''ಅಧಿಕಂತು ಭೇದನಿರ್ದೇಶಾತ್'' (ಶಾ. ಮಿ. ೨-೧-೨೨) ಎಂದರೆ–ಶ್ರುತಿವಾಕ್ಯರೀತ್ಯಾ ಜೀವನಿಗಿಂತಲೂ ಪರಮಾತ್ಮನು ಉತ್ತಮನು ಎಂಬ ಸೂತ್ರವಾಕ್ಯರೀತ್ಯಾ ಪರಮಾತ್ಮನು ಜೀವನಿಗಿಂತಲೂ ಬೇರೆಯಾದವನು ಎಂಬ ಜ್ಞಾನದಿಂದಲೇ ಧ್ಯಾನಿಸಬೇಕು ಎಂದು ಹೇಳುತ್ತಾರೆ.

ಅದ್ವೈತಿಗಳು ಅಭೇದಶ್ರುತಿರೀತ್ಯಾ "ತ್ವಂ ವಾ ಅಹಮಸ್ಮಿ ಭಗವೋ ದೇವತೇ ಅಹಂವೈತ್ವಮಸ್ಮಿ'' ಎಂದು ತಾನೇ ಪರಬ್ರಹ್ಮನು ಎಂಬ ಜ್ಞಾನ ದಿಂದ ಉಪಾಸಿಸುತ್ತಾರೆ. ಇವೆರಡು ಮಾರ್ಗಗಳೂ ತಪ್ಪು. ''ಯಸ್ಯಾತ್ಮ ಶರೀರಂ" (ಬೃ. ಉ. ೪-೭-೨೨) ಎಂಬ ಶ್ರುತಿವಾಕ್ಯರೀತ್ಯಾ ಜೀವನು ಅಸ್ಮದಾದಿ ಶರೀರಕ್ಕೆ ಹ್ಯಾಗೆ ಆತ್ಮನೋ ಹಾಗೆಯೇ ಪರಮಾತ್ಮನು ತನ್ನ "ಆತ್ಮನಿಗೆ ಆತ್ಮನು" ಎಂಬ ಸಂಬಂಧದಿಂದ ಧ್ಯಾನಮಾಡಬೇಕು ಎಂಬುದೇ ಸಿದ್ಧಾನ್ತವು.

**ಪ್ರತೀಕೋಪಾಸನವು :—**

ಪ್ರತೀಕೋಪಾಸನವು ಆತ್ಮೋಪಾಸನದಲ್ಲಿ ಸೇರುವುದಿಲ್ಲ. ''ಪ್ರತೀಕ''ವೆಂದರೆ ಪರಮಾತ್ಮನಿಗಿಂತಲೂ ಬೇರೆಯಾದ ತನ್ನ ಹೆಸರು, ಮನಸ್ಸು ಇತ್ಯಾದಿಗಳು. "ಪ್ರತೀಕ" ಎಂದರೆ ''ಏಕದೇಶ''ವೆಂದೂ ಅರ್ಥವಾಗುವುದು. "ಮನೋಬ್ರಹ್ಮೇತ್ಯುಪಾಸೀತ.... ನಾಮಬ್ರಹ್ಮೇತ್ಯುಪಾಸೀತ" (ಛಾಂ. ಉ. ३-೧೮-೧) ಎಂದು ನಾಮ, ಮನಸ್ಸು ಇತ್ಯಾದಿ ಗಳನ್ನು ಬ್ರಹ್ಮವೆಂದು ಉಪಾಸಿಸುವುದು ಪ್ರತೀಕೋಪಾಸನೆಗಳು. ಇದು ಮೇಲೆ ಹೇಳಿದ ಆತ್ಮೋಪಾಸನೆಯಲ್ಲಿ ಸೇರುವುದಿಲ್ಲವೆಂದು ಸಿದ್ಧಾನ್ತವು. ಈ ಪ್ರತೀಕೋಪಾಸನೆಗಳಲ್ಲಿಯೂ ಪ್ರತೀಕಗಳನ್ನು ಪರಮಾತ್ಮಾಂಶವಾಗಿ ಉಪಾಸಿಸಿದರೆ ಅದರಿಂದ ಅತ್ಯಧಿಕಫಲವು ಲಭಿಸುವುದು. ಆದರೆ ಆ ಫಲವು ಅನಿತ್ಯವು, ಶಾಶ್ವತವಾದ ಮೋಕ್ಷಫಲವು ಲಭಿಸುವುದಿಲ್ಲ.

**ಧ್ಯಾನವನ್ನು ಕುಳಿತುಕೊಂಡೇ ಮಾಡಬೇಕು :—**

ಧ್ಯಾನವನ್ನು ಕುಳಿತುಕೊಂಡೇ ಮಾಡಬೇಕು—ಎಂದು "ಆಸೀನ ಸ್ಸಂಭವಾತ್" (ಶಾ. ಮಿ. ೪-೧-೭) ಎಂದರೆ ಕುಳಿತುಕೊಂಡು ಧ್ಯಾನ ಮಾಡುವವನಿಗೆ ಮನಸ್ಥೈರ್ಯವುಂಟಾಗುವುದು ಎಂಬ ಸೂತ್ರವಾಕ್ಯದಿಂದ ವ್ಯಕ್ತವಾಗುವುದು. ನಿಂತುಕೊಂಡಿರುವಾಗಾಗಲಿ, ಓಡಾಡುತ್ತಿರುವಾಗಾಗಲಿ—ಮನಸ್ಸೂ ಮತ್ತು ಇಂದ್ರಿಯಗಳೂ ಬೇರೆ ವ್ಯಾಪಾರಗಳಿಗೆ ಹೋಗಿಬಿಡುವುದರಿಂದಲೂ; ಮಲಗಿಕೊಂಡರೆ ವಿಶ್ರಾಂತಿ, ನಿದ್ರೆ ಇತ್ಯಾದಿ ಗಳುಂಟಾಗುವುದರಿಂದಲೂ, ಕುಳಿತುಕೊಂಡು ಧ್ಯಾನಮಾಡುವುದೇ ಉತ್ತಮವು.

"ನಿಧಿಧ್ಯಾಸಿತವ್ಯಃ" (ಬೃ. ಉ. ೪-೫-೬) ಎಂದು ಉಪಾಸನವು ಧ್ಯಾನರೂಪವಾಗಿ ಹೇಳಿರುವುದು.

ಧ್ಯಾನವೆಂದರೆ ಬೇರೆ ಜ್ಞಾನವಿಲ್ಲದೆ "ತೈಲಧಾರೆ" ಯಂತಿರುವ ಅವಿಚ್ಛಿನ್ನಸ್ಮೃತಿಸಂತಾನರೂಪವಾಗುವುದರಿಂದಲೂ ಉಪಾಸಕನ ಮನಸ್ಸೂ ಮತ್ತು ಇಂದ್ರಿಯಗಳೂ ನಿಶ್ಚಲವಾಗಿರಬೇಕಾದ್ದರಿಂದಲೂ ಧ್ಯಾನವನ್ನು ಕುಳಿತುಕೊಂಡೇ ಮಾಡಬೇಕು.

**ಉಪಾಸನ ಸಹಕಾರಿಗಳು :—**

ಉಪಾಸನಕ್ಕೆ ಮುಖ್ಯವಾಗಿ ಬೇಕಾದ ಸಹಕಾರಿಗಳು ಮೂರು— (೧) ಮನಸ್ಸು ಮತ್ತು ಇಂದ್ರಿಯಗಳ ಅಚಲತ್ವ (೨) ಪ್ರದೇಶ ಮತ್ತು (೩) ಕಾಲ.

ಇವುಗಳಲ್ಲಿ ಮನಸ್ಸು ಮತ್ತು ಇಂದ್ರಿಯಗಳ ಅಚಲತ್ವವೇ ಮುಖ್ಯವಾದದ್ದು.

''ಶರ್ಕರಾದಿ ರಹಿತೇ ಮನೋನುಕೂಲೇ ಶುಚೌದೇಶೇ'' (ಶ್ವೇ. ಉ. ೨-೧೦) ಎಂಬ ಶ್ರುತಿವಾಕ್ಯರೀತ್ಯಾ ಮನಸ್ಸು ಮತ್ತು ಇಂದ್ರಿಯಗಳಿಗೆ ಹಿಂಸೆಯಿಲ್ಲದಂತೆ ಯಾವ ಸ್ಥಳವು ಅನುಕೂಲವಾಗಿರುವುದೋ ಮತ್ತು ಯಾವ ಕಾಲದಲ್ಲಿ ಧ್ಯಾನವು ನಿಶ್ಚಲವಾಗುವುದೋ ಆ ದೇಶಕಾಲಗಳೇ ಗ್ರಾಹ್ಯಗಳು.

**ಉಪಾಸನವು ಯಾವಜ್ಜೀವವೂ ಅನುಷ್ಠೇಯವು :—**

"ಆಪ್ರಯಾಣಾತ್ತತ್ರಾಪಿಹಿದೃಷ್ಟಂ" (ಶಾ. ಮಿ. ೪-೧-೧೨) ಎಂದರೆ ದೇಹಾವಸಾನದವರಿವಿಗೂ ಉಪಾಸನವನ್ನು ಮಾಡುತ್ತಿರಬೇಕು. ಆ ದೇಹಾವಸಾನದಲ್ಲಿಯೂ ಉಪಾಸನವು ಕಾಣಲ್ಪಡುವುದು—ಎಂಬ ಸೂತ್ರವಾಕ್ಯಪ್ರಕಾರ ಮೇಲೆ ಹೇಳಿದ ರೀತಿಯಲ್ಲಿ ಪರಮಾತ್ಮಧ್ಯಾನವನ್ನು ದೇಹಾವಸಾನವಾಗುವವರಿವಿಗೂ ಮಾಡುತ್ತಿರಬೇಕು.

"ಸಖಲ್ವೇವಂ ವರ್ತಯನ್ ಯಾವದಾಯುಷಂ" (ಛಾಂ. ಉ. ೮-೧೫-೧) ಎಂದು—ಯಾವಜ್ಜೀವವೂ ಉಪಾಸನೆಯನ್ನು ಶ್ರುತಿಯು ವಿಧಿಸಿರುವುದು. ಅದೂ ಅಲ್ಲದೆ "ಉಪಾಸನೆ" ಎಂಬ ಪದಕ್ಕೆ "ಅವಿಚ್ಛಿನ್ನ ತೈಲಧಾರಸ್ಮೃತಿ ಪರಂಪರೆ" ಎಂದು ಅರ್ಥಮಾಡಿರುವಾಗ, ಅದು ಯಾವಜ್ಜೀವವೂ ಮಾಡತಕ್ಕುದೆಂದು ತಾನಾಗಿಯೇ ಅರ್ಥವಾಗುವುದು.

**ಉಪಾಸನಾ ಫಲರೂಪವಾದ ಕರ್ಮಕ್ಷಯಕ್ರಮವು :—**

"ತದಧಿಗಮ ಉತ್ತರ ಪೂರ್ವಾಘಯೋರಶ್ಲೇಷವಿನಾಶೌತದ್ವ್ಯಪದೇಶಾತ್" (ಶಾ. ಮಿ. ೪-೧-೧೩) ಎಂದರೆ ಶ್ರುತಿವಾಕ್ಯಾನುಸಾರವಾಗಿ ಜೀವನಿಗೆ ಬ್ರಹ್ಮವಿದ್ಯಾನುಷ್ಠಾನವು ಪ್ರಾಪ್ತವಾದರೆ, ತದನಂತರ ಅವನಿಂದ ಮಾಡಲ್ಪಡುವ ಪಾಪವು ಅವನಿಗೆ ತಗಲದೇ ಇರುವಿಕೆಯೂ, ಮತ್ತು ತತ್ಪೂರ್ವಭಾವಿಯಾಗಿ ಅವನಿಂದ ಮಾಡಲ್ಪಟ್ಟ ಪಾಪಗಳ ಕ್ಷಯವೂ ಉಂಟಾಗುವುವು—ಎಂದು ಈ ಸೂತ್ರವು ಪ್ರತಿಪಾದಿಸುವುದು.

ಪೂರ್ವಪಕ್ಷದವರು—"ನಾಭುಕ್ತಂ ಕ್ಷೀಯತೇ ಕರ್ಮ" (ಬ್ರಹ್ಮವೈವರ್ತೇ-ಪ್ರಕೃತಿಖಂಡೆ ೨೬-೭೦) ಎಂಬ ಸ್ಮೃತಿವಾಕ್ಯ ಪ್ರಕಾರ ಕರ್ಮಗಳನ್ನು ಅನುಭವಿಸಿಯೇ ತೀರಬೇಕು, ಉಪಾಸನದಿಂದ ಪಾಪವು ಕ್ಷಯವಾಗುವುದಿಲ್ಲ ಎಂದು ಹೇಳುತ್ತಾರೆ.

**ಸಿದ್ಧಾನ್ತ :—**

ಆದರೆ "ತದ್ಯಥಾಪುಷ್ಕರಪಲಾಶ ಆಪೋನಶ್ಲಿಷ್ಯನ್ತೇ ಏವಮೇವಂ ವಿದಿ ಪಾಪಂ ಕರ್ಮನಶ್ಲಿಷ್ಯತೆ" (ಛಾಂ. ಉ. ೪-೧೪-೩) ಎಂದರೆ—ತಾವರೆ ಎಲೆಗೆ ನೀರು ಹ್ಯಾಗೆ ಅಂಟುವುದಿಲ್ಲವೋ ಅದರಂತೆಯೇ ಪಾಪವು ಉಪಾಸಕನಿಗೆ ಅಂಟುವುದಿಲ್ಲ ಎಂದೂ

"ತದ್ಯಥೇಷೀಕತೂಲಮಗ್ನೌ ಪ್ರೋತಂಪ್ರದೂಯೇತ ಏವಂ ಹಾಸ್ಯ ಸರ್ವೇಪಾಪ್ಮಾನಃ ಪ್ರದೂಯನ್ತೇ" (ಛಾಂ. ಉ. ೫-೨೪-೩) ಎಂದರೆ "ಇಷಿಕ" ಎಂದರೆ ಹೆಂಚೀಕಡ್ಡಿಯ ಊಬಿನ ಸಣ್ಣ ಭಾಗವು ಅಗ್ನಿಯಲ್ಲಿ

ಬಿದ್ದರೆ ಹ್ಯಾಗೆ ಭಸ್ಮವಾಗಿಬಿಡುವುದೋ ಹಾಗೆಯೇ ಉಪಾಸಕನಲ್ಲಿರುವ ಪಾಪವು ಉಪಾಸನಮಾಹಾತ್ಮ್ಯದಿಂದ ನಶಿಸಿಹೋಗುವುದು--ಎಂದೂ ಇತ್ಯಾದಿ ಶ್ರುತಿವಾಕ್ಯಗಳಿಂದ ಅವನ ಪೂರ್ವಾಘಗಳು ನಶಿಸಿಯೂ ಅವನ ಉತ್ತರಾಘಗಳು ಅವನಿಗೆ ತಗಲದೆಯೂ ಹೋಗಿ ಅವನ ಸಮಸ್ತ ಕರ್ಮಗಳೂ ನಶಿಸಿಹೋಗುವುವು.

"ನಾಭುಕ್ತಂ ಕ್ಷೀಯತೇ ಕರ್ಮ" ಎಂಬುದು ಸಾಮಾನ್ಯ ಶಾಸ್ತ್ರವು. ಅದು ಇತರರಿಗೆ ಎಂದರೆ ಅನುಪಾಸಕರ ವಿಷಯದಲ್ಲಿ ಸಮನ್ವಯಿಸುವುದು. ಛಳಿಯು ಮನುಷ್ಯನನ್ನು ತಣ್ಣಗೆ ಮಾಡುವ ಸಾಮರ್ಥ್ಯವಿದ್ದರೂ ಪಕ್ಕದಲ್ಲಿ ಬೆಂಕಿಯಿದ್ದರೆ ಹ್ಯಾಗೆ ಆ ಛಳಿಯ ಶಕ್ತಿಯು ಅಲ್ಲಿ ಸಾಗುವುದಿಲ್ಲವೋ ಹಾಗೆಯೇ ಉಪಾಸನಮಾಹಾತ್ಮ್ಯವಿದ್ದಲ್ಲಿ ಪಾಪದ ಶಕ್ತಿಯು ಸಾಗುವುದಿಲ್ಲ. ಶರೀರಾವಸಾನಕಾಲದಲ್ಲಿ ಪಾಪಕರ್ಮಗಳ ಜೊತೆಗೆ ಉಪಾಸಕನ ಪುಣ್ಯವೂ ನಶಿಸಿಹೋಗಬೇಕು.

ಪಾಪವು ದುಷ್ಕೃತ್ಯವಾದ್ದರಿಂದ ಅದು ಅನಿಷ್ಟಸ್ವರೂಪವು; ಆದರೆ ಪುಣ್ಯವು ಸುಕೃತಸ್ವರೂಪವೂ ಶಾಸ್ತ್ರಸಮ್ಮತವೂ ಆದ್ದರಿಂದ ಅದೂ ಯಾತಕ್ಕೆ ನಶಿಸಬೇಕು ಎಂದು ಕೇಳಿದರೆ—ಸುಕೃತಗಳು ಸ್ವರ್ಗಾದಿ ಫಲಪ್ರದಗಳಾದರೂ ಅವು ಮೋಕ್ಷವಿರೋಧಿಯಾಗುವುವು. ಆದ್ದರಿಂದ ಆ ಪುಣ್ಯಕರ್ಮಗಳೂ ನಶಿಸಿದಹೊರತು ಮೋಕ್ಷವಿಲ್ಲ. ಈ ಪುಣ್ಯಕರ್ಮಗಳು ಶರೀರವಿರುವವರಿವಿಗೂ ಅವನ ಬ್ರಹ್ಮೋಪಾಸನೆಗೆ ಸಹಾಯವಾಗಿದ್ದು ಶರೀರಾವಸಾನಾನನ್ತರ ಶ್ರುತಿವಾಕ್ಯರೀತ್ಯಾ ಅವನನ್ನು ಬಿಟ್ಟು ಅವನ ಆಪ್ತರನ್ನು ಹೋಗಿ ಸೇರುವುದು.

**ಪ್ರಾರಬ್ಧಕರ್ಮವಿಚಾರವು:—**

ಉಪಾಸಕನ ಉಪಾಸನವು ಆರಂಭವಾದಾಗಲೇ ಅವನ ಪೂರ್ವಾಘಗಳೆಲ್ಲಾ ನಶಿಸಿ, ಅವನ ಉತ್ತರಾಘಗಳು ಅವನಿಗೆ ತಗಲದಿದ್ದರೆ ಆಗ ಅವನಿಗೆ ಶರೀರಾವಸಾನಕಾಲದವರಿವಿಗೂ ಜೀವಿಸಿರುವ ಶರೀರಕ್ಕೆ ಕಾರಣವೇ ಇರಕೂಡದು—ಎಂಬ ಶಂಕೆಯು ಉತ್ಪನ್ನವಾಗಬಹುದು. ಇದರ ವಿಷಯವು ಕೆಳಗೆ ವಿವರಿಸಲ್ಪಡುತ್ತದೆ.

ಜೀವನ ಅನಾದಿಯಾದ ಕರ್ಮರಾಶಿಗಳಲ್ಲಿ ಸ್ವಲ್ಪ ಭಾಗವು ಮಾತ್ರ ಫಲಪ್ರದವಾಗುವುದು. ಈರೀತಿಯಾಗಿ ಫಲಪ್ರದವಾದ ಕರ್ಮಗಳಿಗೆ "ಆರಬ್ಧ" ಅಥವಾ "ಪ್ರಾರಬ್ಧ"ಕರ್ಮವೆಂದು ಹೆಸರು. ಯಾವಯಾವ ಕರ್ಮಗಳು ಫಲವನ್ನು ಕೊಡುವುದಕ್ಕೆ ಆರಂಭಿಸಿಬಿಟ್ಟಿರುವುವೋ ಅವು "ಪ್ರಾರಬ್ಧ"ಕರ್ಮಗಳು. ಉಳಿದ ಕರ್ಮಗಳೆಲ್ಲಾ "ಸಂಚಿತ"ಕರ್ಮಗಳು. ಈ ಸಂಚಿತಕರ್ಮಗಳನ್ನೇ "ಪೂರ್ವಾಘ"ಗಳೆನ್ನುತ್ತಾರೆ. ಪ್ರಾರಬ್ಧಕರ್ಮವನ್ನು ಅನುಭವಿಸಿಯೇ ತೀರಬೇಕು. ಸಂಚಿತಕರ್ಮಗಳೇ ಉಪಾಸನ ಮಾಹಾತ್ಮ್ಯದಿಂದ ನಶಿಸಲ್ಪಡುವ ಪೂರ್ವಾಘಗಳು. ಉಪಾಸಕನು ಅನುಷ್ಠಿಸುವ ಸತ್ಕರ್ಮಗಳಿಂದ ಅವನ ಪಾಪವು ನಶಿಸುವುದರಿಂದಲೂ, ಅಗ್ನಿಹೋತ್ರಾದಿ ಸತ್ಕರ್ಮಾನುಷ್ಠಾನದಿಂದ ಪ್ರೀತನಾದ ಪರಮಪುರುಷನ ಅನುಗ್ರಹದಿಂದ ಉತ್ತರೋತ್ತರ ಅತಿಶಯವುಂಟಾಗುವುದರಿಂದಲೂ, ಯಾವ ಜೀವವೂ ಬ್ರಹ್ಮಜಿಜ್ಞಾಸಿಯು ಸತ್ಕರ್ಮಪ್ರವರ್ತಕನಾಗಿರಬೇಕು.

ಪ್ರಾರಬ್ಧಕರ್ಮಗಳು ಅದೇ ಜನ್ಮದಲ್ಲಿಯೇ ನಶಿಸುವುವೋ ಅಥವಾ ಇನ್ನೂ ಕೆಲವು ಜನ್ಮಗಳು ಎತ್ತಿದಮೇಲೆ ನಶಿಸುವುವೋ ಎಂದು ಪ್ರಶ್ನೆ.

"ತಸ್ಯತಾವದೇವಚಿರಂ ಯಾವನ್ನವಿಮೋಕ್ಷ್ಯೇ" (ಛಾಂ. ಉ. ೬–೧೪–೨) ಎಂದರೆ ಪ್ರಾರಬ್ಧಕರ್ಮವು ಕಳೆಯುವವರಿವಿಗೂ ಸಂಸಾರದಲ್ಲಿದ್ದು ಅನಂತರ ಮೋಕ್ಷವನ್ನು ಪಡೆಯುತ್ತಾನೆ—ಎಂಬ ಶ್ರುತಿವಾಕ್ಯರೀತ್ಯಾ ಪ್ರಾರಬ್ಧಕರ್ಮವು ನಶಿಸುವುದೇ ಮೋಕ್ಷಕ್ಕೆ ಕಾಲವು. ಇದು ಒಂದೇ ಜನ್ಮದಲ್ಲಿ ಕಳೆದುಹೋದರೂ ಹೋಗಬಹುದು; ಇಲ್ಲದೆ ಕೆಲವು ಜನ್ಮಗಳನ್ನು ಎತ್ತಿದನಂತರ ಕಳೆದರೂ ಕಳೆಯಬಹುದು.

**ಮುಕ್ತಜೀವನ ಶರೀರತ್ಯಾಗಕ್ರಮವು :—**

ಅರ್ಚಿರಾದಿಗತಿಗೆ ಪೂರ್ವಭಾವಿಯಾದ ಸ್ಥೂಲದೇಹದಿಂದ ಉತ್ಕ್ರಾಂತಿಯು ಕೆಳಗೆ ಹೇಳಲ್ಪಡುವುದು :—

" ವಾಙ್ಮನಸಿ ಸಂಪದ್ಯತೇ " (ಛಾಂ. ಉ. ೬–೮–೬) ಎಂಬ ಶ್ರುತಿ ವಾಕ್ಯರೀತ್ಯಾ ಮೊದಲು ವಾಗಿಂದ್ರಿಯವು ಮನಸ್ಸಿನಲ್ಲಿ ಲಯಿಸುವುದು.

"ಲಯ"ವೆಂದರೆ ಮನಸ್ಸಿನ ಜೊತೆಯಲ್ಲಿ ಹೋಗಿಸೇರುತ್ತದೆ ಎಂದು ಅರ್ಥವು. ಇಲ್ಲಿ "ವಾಕ್" ಎಂಬ ಒಂದು ಇಂದ್ರಿಯವನ್ನು ಮಾತ್ರ ಹೇಳಿದೆ ಎಲ್ಲಾ ಇಂದ್ರಿಯಗಳೂ ಮನಸ್ಸಿನಲ್ಲಿ ಹೋಗಿಸೇರುತ್ತವೆ ಎಂದು ತಿಳಿಯಬೇಕು.

" ಅಸ್ಯಸೋಮ್ಯಪುರುಷಸ್ಯಪ್ರಯತೋವಾಙ್ಮನಸಿಸಂಪದ್ಯತೇ........ ಮನಃಪ್ರಾಣೇ ಪ್ರಾಣಸ್ತೇಜಸಿ ತೇಜಃ ಪರಸ್ಯಾಂ ದೇವತಾಯಾಂ" (ಛಾಂ. ಉ. ೬-೮-೬) ಇತ್ಯಾದಿ ವಾಕ್ಯಗಳಿಂದ ಜೀವನ ಶರೀರತ್ಯಾಗ ಸಮಯದಲ್ಲಿ ನಡೆಯುವ ಕಾರ್ಯವನ್ನು ಹೇಳಿದೆ. ಇಂದ್ರಿಯಗಳು ಮನಸ್ಸಿನೊಡನೆ ಹೋಗಿ ಸೇರುವ ಕಾಲದಲ್ಲಿ ಶರೀರದಲ್ಲಿರುವ ಪ್ರಾಣಗಳೆಲ್ಲಾ ಹೃದಯಾಭಿಮುಖವಾಗಿ ಪ್ರಯಾಣಮಾಡಿ ಹೃದಯದಲ್ಲಿರುವ ಪ್ರಾಣನೊಡನೆ ಸೇರುತ್ತವೆ. ಇಂದ್ರಿಯಗಳೊಡನೆ ಸೇರಿ ಮನಸ್ಸು ಈ ಪ್ರಾಣನೊಡನೆ ಸೇರುತ್ತದೆ.

" ಏವಮೇವಮಾತ್ಮಾನಮನ್ತಕಾಲೇ ಸರ್ವೇ ಪ್ರಾಣಾ ಅಭಿಸಮಾಯನ್ತಿ" (ಬೃ. ಉ. ೪-೩-೩೮).

"ತಮುತ್ಕ್ರಾಮನ್ತಂ ಪ್ರಾಣೋಽನೂತ್ಕ್ರಾಮತಿ" (ಬೃ. ಉ. ೪-೪-೨) "ಕಸ್ಮಿನ್ನುತ್ಕ್ರಾನ್ತ ಉತ್ಕ್ರಾನ್ತೋ ಭವಿಷ್ಯಾಮಿ ಕಸ್ಮಿನ್ವಾ ಪ್ರತಿಷ್ಠಿತೇ ಪ್ರತಿಷ್ಠಾಸ್ಯಾಮಿ" (ಪ್ರ. ಉ. ೬-೩) ಎಂದರೆ—ಮರಣಸಮಯದಲ್ಲಿ ಎಲ್ಲಾ ಪ್ರಾಣಗಳೂ ಜೀವನ ಅಭಿಮುಖವಾಗಿ ಬರುತ್ತವೆ. ಜೀವನು ಶರೀರವನ್ನು ಬಿಟ್ಟುಹೊರಡುವಾಗ ಪ್ರಾಣಗಳೂ ಅವನ ಜೊತೆಯಲ್ಲಿಯೇ ಹೊರಡುತ್ತವೆ. ಆದ್ದರಿಂದ ಜೀವನು ಮನಸ್ಸಿನೊಡನೆ ಕೂಡಿದ ಪ್ರಾಣದೊಡನೆ ತೇಜಸ್ಸಿನಲ್ಲಿ ಎಂದರೆ—ಭೂತಸೂಕ್ಷ್ಮಗಳೊಡನೆ ಸೇರುವನು. ಸೂಕ್ಷ್ಮವಾದ ಪಂಚಭೂತಗಳ ಸಂಯೋಗವು ತೇಜೋರೂಪವಾಗಿರುವುದು. "ತೇಜಃ ಪರಸ್ಯಾಂ ದೇವತಾಯಾಂ" ಎಂಬ ಶ್ರುತಿವಾಕ್ಯರೀತ್ಯಾ ಭೂತಸೂಕ್ಷ್ಮಾದಿಗಳೊಡನೆ ಸೇರಿ ಜೀವಾತ್ಮನು ತನ್ನ ಹೃದ್ಯಂತಸ್ಥಿತನಾದ ಪರಮಾತ್ಮನನ್ನು ಹೋಗಿಸೇರುವನು. ಇಲ್ಲಿಯವರಿವಿಗೂ ನಡೆಯುವ

ಕಾರ್ಯವೆಲ್ಲಾ ಮುಕ್ತ ಮತ್ತು ಬದ್ಧರಾದ ಸಮಸ್ತ ಜೀವರಿಗೂ ಸಾಧಾರಣ ವಾಗಿ ನಡೆಯುವ ಕಾರ್ಯಗಳು.

"ಶತಂಚೈಕಾಚ ಹೃದಯಸ್ಯ ನಾಡ್ಯಸ್ತಾಸಾಂ ಮೂರ್ಧಾನಮಭಿ ನಿಸ್ಸೃತೈಕಾ| ತಯೋರ್ಧ್ವಮಾಯನ್ನಮೃತತ್ವಮೇತಿವಿಷ್ವಙ್ಙನ್ಯಾ ಉತ್ಕ್ರಮಣೇ ಭವನ್ತಿ" (ಕಠ. ಉ. ೨-೬-೧೬) ಎಂದರೆ–ಅರ್ಚಿರಾದಿ ಗತಿಯಿಂದ ಹೋಗುವವನು ಹೃದಯದಿಂದ ನಾನಾಮುಖವಾಗಿ ಹೊರಟಿರುವ ನೂರೊಂದು ನಾಡಿಗಳಲ್ಲಿ ಕೊನೆಯದಾಗಿ ಶಿರಸ್ಸಿಗೆ ಹೋಗುವ ಸುಷುಮ್ನಾ (ಮೂರ್ಧನ್ಯ) ನಾಡಿಯ ಮಾರ್ಗವಾಗಿ ಶರೀರವನ್ನು ತ್ಯಜಿಸಿ ಅಮೃತತ್ವ ವನ್ನು ಹೊಂದುವನು, ಎಂದರೆ–ಜೀವನು ಪರಮಾತ್ಮನೊಡನೆ ಸೇರಿದಮೇಲೆ ಮುಕ್ತನಿಗೆ ಸುಷುಮ್ನಾನಾಡಿಯ ಮಾರ್ಗವಾಗಿ ಶರೀರದಿಂದ ಉತ್ಕ್ರಾಂತಿ ಯಾಗುವುದು.

ಇತರರಿಗೆ ಶಾಸ್ತ್ರರೀತ್ಯಾ ಬೇರೆ ನಾಡಿಗಳ ಮೂಲಕ ಉತ್ಕ್ರಾನ್ತಿ ಯಾಗುವುದು.

ಮರಣಕಾಲದಲ್ಲಿ ಪ್ರಾಣಗಳು ಪ್ರಯಾಣಮಾಡಿ ಹೃದಯಪ್ರದೇಶ ವನ್ನು ಸೇರುವಕಾಲದಲ್ಲಿ ಮೊದಲು ಕೈಕಾಲುಗಳೆಲ್ಲಾ ತಣ್ಣಗಾಗುತ್ತಾ ಬರುವುವು. ಕೊನೆಗೆ ಶರೀರವೆಲ್ಲಾ ತಣ್ಣಗಾಗಿ ಹೃದಯದ ಏಕದೇಶದಲ್ಲಿ ಮಾತ್ರ ಸ್ವಲ್ಪ ಉಷ್ಣವಿರುವುದು. ಪ್ರಾಣವು ಹೋದಮೇಲೆ ಸಂಪೂರ್ಣ ವಾಗಿ ಶರೀರವೆಲ್ಲಾ ತಣ್ಣಗಾಗುವುದು. ಈ ಉಷ್ಣವು ಸ್ಥೂಲಶರೀರದ ಧರ್ಮವಾಗಿದ್ದಿದ್ದರೆ ಶರೀರದ ಎಲ್ಲಾ ಭಾಗದಲ್ಲಿಯೂ ಇರುತ್ತಿತ್ತು. ಆದ್ದ ರಿಂದ ಇದು ಲಿಂಗ (ಎಂದರೆ ಸೂಕ್ಷ್ಮ) ಶರೀರಕ್ಕೆ ಮಾತ್ರ ಸಂಬಂಧ ಪಟ್ಟದ್ದು ಎಂದು ಸಿದ್ಧಾನ್ತವು. ಪ್ರಯಾಣಸನ್ನದ್ಧವಾಗಿ ಈ ಲಿಂಗಶರೀರವು ಸ್ಥೂಲಶರೀರದ ಏಕದೇಶದಲ್ಲಿ ಬಂದು ನಿಲ್ಲುವುದು. ಆ ಸ್ಥಳದಲ್ಲಿ ಮಾತ್ರ ಉಷ್ಣವಿರುವುದು. ಆದ್ದರಿಂದ ಜೀವಾತ್ಮನು ಸೂಕ್ಷ್ಮಶರೀರದೊಡನೆ ಉತ್ಕ್ರಮಿಸಿಹೋಗುತ್ತಾನೆ ಎಂದು ಸಿದ್ಧಾನ್ತವು.

ಕೆಲವರು ಉಪಾಸಕನಿಗೆ ಉತ್ಕ್ರಾನ್ತಿಯಿಲ್ಲವೆಂದು ವಾದಿಸುವರು: ಬೃಹದಾರಣ್ಯಕೋಪನಿಷತ್ತಿನಲ್ಲಿ "ಸ ಏತಾಸ್ತೇಜೋಮಾತ್ರಾಸ್ಸಮಭ್ಯಾದದಾನೋಹೃದಯಮೇವಾನ್ವಪಕ್ರಾಮತಿ" (ಬೃ. ಉ. ೪-೪-೧) ಎಂದು ಆರಂಭಿಸಿ "ಇತಿತುಕಾಮಯಮಾನಃ" (ಬೃ. ಉ. ೪-೪-೪) ಎಂಬವರೆವಿಗೂ ಉಪಾಸಕನಲ್ಲದ ಜೀವನ ಉತ್ಕ್ರಮಣ ಮತ್ತು ಲೋಕಾಂತರ ಗಮನಾದಿಗಳನ್ನೂ ಹೇಳಿದನಂತರ "ಅಥಕಾಮಯಮಾನಃ" (ಬೃ. ಉ. ೪-೪-೬) ಎಂದು ಆರಂಭಿಸಿ "ನತಸ್ಯಪ್ರಾಣಾ ಉತ್ಕ್ರಾಮನ್ತಿ" (ಬೃ. ಉ. ೪-೪-೬) ಎಂಬ ಶ್ರುತಿವಾಕ್ಯಕ್ಕೆ ಉಪಾಸಕನ ಪ್ರಾಣವು ಶರೀರವನ್ನು ಬಿಟ್ಟುಹೋಗುವುದಿಲ್ಲ ಎಂದು ಅರ್ಥಮಾಡಿ ಉಪಾಸಕನ ಆತ್ಮನ ಪ್ರಾಣಕ್ಕೆ ಉತ್ಕ್ರಾನ್ತಿಯಿಲ್ಲ ಎಂದು ವಾದಿಸುತ್ತಾರೆ.

**ಸಿದ್ಧಾನ್ತ :—**

"ನತಸ್ಯಪ್ರಾಣಾಉತ್ಕ್ರಾಮನ್ತಿ" ಎಂಬ ವಾಕ್ಯಕ್ಕೆ ಅವನ ಶರೀರದಿಂದ ಪ್ರಾಣವು ಬಿಟ್ಟುಹೋಗುವುದಿಲ್ಲ—ಎಂದು ಅರ್ಥವಲ್ಲ. ಆತ್ಮನು ಉತ್ಕ್ರಮಿಸಿ ಹೋಗುವಾಗ ಪ್ರಾಣಗಳು ಅವನನ್ನು ಬಿಡದೆ ಜೊತೆಯಲ್ಲಿಯೇ ಹೋಗುತ್ತವೆ—ಎಂದು ಅರ್ಥವು. ಶಾರೀರನಾದ ಜೀವನಿಂದ ಪ್ರಾಣವು ಉತ್ಕ್ರಮಿಸುವುದಿಲ್ಲ—ಎಂಬ ಅರ್ಥವನ್ನು ಈ ಶ್ರುತಿವಾಕ್ಯವು ಪ್ರತಿಪಾದಿಸುವುದು.

ಉತ್ಕ್ರಾನ್ತನಾದ ಜೀವನೊಡನೆ ಪ್ರಾಣವು ಇರಕೂಡದು ಎಂದು ಶಂಕಿಸಬಹುದು. ಆದರೆ ಪ್ರಾಣಗಳು, ಜೀವನು ಬ್ರಹ್ಮಾಣ್ಡವನ್ನೂ ಪ್ರಕೃತಿಮಂಡಲವನ್ನೂ ದಾಟಿಹೋಗುವವರೆವಿಗೂ ಚಂದ್ರಲೋಕಾದಿಗಳಲ್ಲಿ ಆಯಾ ದೇವತೆಗಳೊಡನೆ ಸಂಭಾಷಣಾದಿಗಳು ನಡೆಯಬೇಕಾದ್ದರಿಂದ, ಅದಕ್ಕೆ ಸೂಕ್ಷ್ಮಶರೀರವೂ ಪ್ರಾಣವೂ ಅವಶ್ಯಕವಾದ್ದರಿಂದ ಅವುಗಳು ಜೀವನನ್ನು ಬಿಡದೆ ಅನುಸರಿಸುವುವು. ಈ ಅರ್ಥವು ಮೇಲಿನ ಶ್ರುತಿವಾಕ್ಯದಲ್ಲಿ ಸ್ಪಷ್ಟವಾಗಿಲ್ಲದಿದ್ದರೂ ಮಾಧ್ಯನ್ದಿನ ಶಾಖೆಯಲ್ಲಿ "ನೇತಿ ನೇತಿ ಹೋವಾಚ ಯಾಜ್ಞ್ಯವಲ್ಕ್ಯೋತ್ರೈವಸಮವನೀಯನ್ತೇ ಸ ಉಚ್ಛ್ವಯತ್ಯಾಧ್ಮಾತೋ ಮೃತಃ ಶೇತೆ" (ಬೃ. ಉ. ೩-೨-೧೧) ಎಂದರೆ

ಆತ್ಮನು ಶರೀರವನ್ನು ತ್ಯಜಿಸುವಾಗ ಪ್ರಾಣವು ಅವನನ್ನು ಬಿಟ್ಟುಹೋಗು ವುದೋ? ಎಂಬ ಪ್ರಶ್ನೆಗೆ ಯಾಜ್ಞವಲ್ಕ್ಯರು "ಇಲ್ಲ ಇಲ್ಲ ಪ್ರಾಣಗಳು (ಅಂದರೆ ಇಂದ್ರಿಯಗಳು) ಜೀವನೊಡನೆ ಸಂಶ್ಲೇಷಿಸುವವು. ಆಗ ಜೀವನು ಹೊರಟುಹೋಗುವನು. ಶರೀರವು ಮೃತಿಯನ್ನು ಹೊಂದು ವುದು"—ಎಂದು ಹೇಳಿರುವರು. ಇದರಿಂದ ಈ ವಾಕ್ಯದಲ್ಲಿ ಪ್ರಾಣಕ್ಕೆ ಜೀವನೊಡನೆ ಸಹಗಮನವು ಹೇಳಿರುವುದು. ಈ ಅರ್ಥವೂ ವಿಶದವಾಗಿದೆ. ಆದ್ದರಿಂದ ಪ್ರಾಣನು ಉಪಾಸಕ, ಅನುಪಾಸಕ, ಇವರಿಬ್ಬರ ದೇಹ ದಿಂದಲೂ ಜೀವಾತ್ಮನೊಡನೆ ಉತ್ಕ್ರಮಿಸುವನು–ಎಂಬುದೇ ಸಿದ್ಧಾಂತವು.

ಸ್ಮೃತಿಯಲ್ಲಿಯೂ ಕೂಡ "ಊರ್ಧ್ವಮೇಕಸ್ಥಿತಸ್ತೇಷಾಂ । ಯೋಭಿತ್ವಾಸೂರ್ಯಮಂಡಲಂ । ಬ್ರಹ್ಮಲೋಕಮತಿಕ್ರಮ್ಯ । ತೇನಯಾತಿ ಪರಾಂಗತಿಂ ॥" (ಯಾಜ್ಞವಲ್ಕ್ಯಸ್ಮೃತಿ ೩-೧೬೭) ಎಂದರೆ ಉಪಾಸಕನ ಜೀವನು ಮೂರ್ಧನ್ಯನಾಡಿಯ ಮಾರ್ಗವಾಗಿ ಶರೀರವನ್ನು ತ್ಯಜಿಸಿ ಸೂರ್ಯ ಮಂಡಲವನ್ನು ಭೇದಿಸಿಕೊಂಡು ಹೋಗಿ ಬ್ರಹ್ಮಲೋಕವನ್ನು ಅತಿಕ್ರಮಿಸಿ ಆ ಮಾರ್ಗವಾಗಿ ಮುಂದೆ ಹೋಗಿ ಪರಮಪ್ರಾಪ್ಯವಾದ ವೈಕುಂಠವನ್ನು ಸೇರುವನು ಎಂದು ಅರ್ಥವು. ಇದರಿಂದ ಉಪಾಸಕನು ದೇಶಾಂತರ ಗಮನವನ್ನುಮಾಡಿ ವೈಕುಂಠವನ್ನು ಸೇರುವನು ಎಂದೂ, ಅವನು ಶರೀರ ವನ್ನು ಉತ್ಕ್ರಮಿಸಿ ಹೋಗುವನು ಎಂದೂ, ಅವನೊಡನೆ ಪ್ರಾಣವೂ ಶರೀರವನ್ನು ತ್ಯಜಿಸುವಾಗ ಜೀವನನ್ನು ಬಿಡದೆ ಜೊತೆಯಲ್ಲಿಯೇ ಹೋಗುವುದೆಂದೂ ಸಿದ್ಧಿಸುವುದು.

"ತಾನಿಪರೇತಥಾಹ್ಯಾಹ" (ಶಾ. ಮಿಾ. ೪-೨-೧೪) ಎಂದರೆ "ತೇಜಃಪರಸ್ಯಾಂ ದೇವತಾಯಾಂ" ಎಂಬ ಶ್ರುತಿವಾಕ್ಯರೀತ್ಯಾ ಭೂತ ಸೂಕ್ಷ್ಮಗಳೊಡನೆ ಜೀವನು ಹೃದ್ಯಂತಸ್ಥಿತನಾದ ಪರಮಾತ್ಮನಲ್ಲಿ ಸಂಶ್ಲೇಷಿ ಸುವನು. ಆಗ ಜೀವನಿಗೆ ಅನೇಕ ದಿವಸಗಳಿಂದ ಅನುಭವಿಸಿದ ದುಃಖಾದಿ ಗಳ ಮತ್ತು ಉತ್ಕ್ರಾನ್ತಿನಿಬನ್ಧನರೂಪವಾದ ಆಯಾಸದ ಪರಿಹಾರವು ಆಗುವುದು. "ಸರ್ವಸ್ಯಚಾಹಂ ಹೃದಿಸನ್ನಿವಿಷ್ಟಃ" (ಭ. ಗೀ. ೧೫-೫) "ತಸ್ಯಾಶ್ಶಿಖಾಯಾಮಧ್ಯೇ ಪರಮಾತ್ಮಾವ್ಯವಸ್ಥಿತಃ" (ನಾರಾ. ಸೂಕ್ತ ೧೨).

ಇತ್ಯಾದಿ ವಾಕ್ಯರೀತ್ಯಾ ಜೀವನ ಶರೀರದಲ್ಲಿ ಪರಮಾತ್ಮನಸ್ಥಾನವು ಶ್ರುತಿ ಮತ್ತು ಸ್ಮೃತಿ ಸಿದ್ಧವು.

ಈರೀತಿಯಾಗಿ "ವಾಸುದೇವತರುಚ್ಛಾಯೆ"ಯನ್ನು ಹೋಗಿ ಸೇರಿ ವಿಶ್ರಾಂತಿಯನ್ನು ಹೊಂದುವನು. ಅನಂತರ ಹೃದಯದಿಂದ ಹೊರಡುವ ನೂರೊಂದು ನಾಡಿಯಲ್ಲಿ ಊರ್ಧ್ವನಾಡಿಯಾದ ಬ್ರಹ್ಮನಾಡಿ (ಸುಷುಮ್ನಾ ನಾಡಿ)ಯ ಮಾರ್ಗವಾಗಿ ಜೀವನು ಶಿರಃಕಪಾಲವನ್ನು ಭೇದಿಸಿಕೊಂಡು ಶರೀರವನ್ನು ತ್ಯಜಿಸುವನು.

ನೂರೊಂದು ನಾಡಿಗಳಲ್ಲಿ ಜೀವನಿಗೆ ಸುಷುಮ್ನಾ ನಾಡಿಯು ಹ್ಯಾಗೆ ತಿಳಿಯುವುದು ಎಂದು ಶಂಕಿಸಬಹುದುದು. "ತದೋಕೋಗ್ರಜ್ವಲನಂ ತತ್ಪ್ರಕಾಶಿತದ್ವಾರೋ ವಿದ್ಯಾಸಾಮರ್ಥ್ಯಾತ್ತಚ್ಛೇಷಗತ್ಯನುಸ್ಮೃತಿಯೋಗಾಚ್ಚ ಹಾರ್ದಾನುಗೃಹೀತಶ್ಶತಾಧಿಕಯಾ" (ಶಾ. ಸೂ. ೪-೨-೧೬) ಎಂಬ ಸೂತ್ರರೀತ್ಯಾ ಜೀವನ ಉಪಾಸನಮಹಿಮೆಯಿಂದಲೂ, ಆ ವಿದ್ಯೆಗೆ ಅಂಗವಾದ ಅರ್ಚಿರಾದಿಗತಿ ಚಿಂತನೆಯಿಂದಲೂ, ಹೃದಿಸ್ಥಿತನಾದ ಪರಮಾತ್ಮನ ಅನುಗ್ರಹದಿಂದಲೂ, ಆ ಸುಷುಮ್ನಾ ನಾಡಿಯ ಮುಖದಲ್ಲಿ ಪ್ರಕಾಶವು (ಎಂದರೆ ಒಂದು ಬೆಳಕು) ಏರ್ಪಡುವುದು. ಈ ವಿಧವಾಗಿ ಪ್ರಕಾಶಿಸಲ್ಪಟ್ಟ ಮಾರ್ಗವನ್ನು ಅನುಸರಿಸಿ ಆ ಸುಷುಮ್ನಾನಾಡಿಯ ಮಾರ್ಗವಾಗಿ ಜೀವನು ಶರೀರವನ್ನು ತ್ಯಜಿಸುವನು.

## ಮುಕ್ತಜೀವನ ಅರ್ಚಿರಾದಿ ಗತಿಪ್ರಯಾಣವು:—

"ಅಥಯತ್ರೈತದಸ್ಮಾಚ್ಛರೀರಾದುತ್ಕ್ರಾಮತಿ ಅಥೈತೈರೇವರಶ್ಮಿಭಿರೂರ್ಧ್ವಮಾಕ್ರಮತೇ" (ಛಾಂ. ಉ. ೮-೬-೫) ಎಂದರೆ ಉಪಾಸಕನು ಶರೀರದಿಂದ ಉತ್ಕ್ರಮಿಸಿದನಂತರ ಸೂರ್ಯಕಿರಣಗಳ ಮಾರ್ಗವಾಗಿ ಪ್ರಯಾಣಮಾಡುತ್ತಾನೆ ಎಂದು ಶ್ರುತಿವಾಕ್ಯವಿರುವುದು.

ಸೂರ್ಯಕಿರಣಗಳು ಹಗಲಿನಲ್ಲಿ ಮಾತ್ರ ಕಾಣುವುದರಿಂದ ರಾತ್ರಿಯಲ್ಲಿ ಮರಣವನ್ನು ಹೊಂದಿದವರಿಗೆ ಸದ್ಗತಿಯಿಲ್ಲವೇ ಎಂದು ಪ್ರಶ್ನೆ.

ಇದಕ್ಕೆ ಪೂರ್ವಪಕ್ಷದವರು ಹೇಳುವುದೇನೆಂದರೆ:—ಉಪಾಸಕನು ಹಗಲಿನಲ್ಲಿಯಾಗಲಿ ರಾತ್ರಿಯಲ್ಲಿಯಾಗಲಿ ಬ್ರಹ್ಮಪ್ರಾಪ್ತಿಯನ್ನು ಹೊಂದುವುದರಿಂದಲೂ, ರಾತ್ರಿಯಕಾಲದಲ್ಲಿ ಸೂರ್ಯಕಿರಣಗಳು ಇಲ್ಲದ್ದರಿಂದಲೂ ಸೂರ್ಯಕಿರಣಗಳ ಮಾರ್ಗವಾಗಿ ಹೋಗಬೇಕೆಂಬ ನಿಯಮವಿಲ್ಲ ಎಂದು ಹೇಳುತ್ತಾರೆ.

**ಸಿದ್ಧಾನ್ತ :—**

ರಾತ್ರಿಯಕಾಲದಲ್ಲಿ ಸೂರ್ಯನ ಬೆಳಕು ಇಲ್ಲದಿದ್ದರೂ ಸೂರ್ಯಕಿರಣಗಳು ಹಗಲಾಗಲಿ ರಾತ್ರಿಯಾಗಲಿ ಸರ್ವಕಾಲದಲ್ಲಿಯೂ ಭೂಮಿಯನ್ನು ಆವರಿಸಿರುತ್ತವೆ. ಗ್ರೀಷ್ಮಕಾಲದಲ್ಲಿ ಉಷ್ಣವಿರುವುದಕ್ಕೆ ಇದೇ ಕಾರಣವು. ಛಳಿಗಾಲದಲ್ಲಿ ಛಳಿಯ ಸಾಮೀಪ್ಯದಿಂದ ಸೂರ್ಯಕಿರಣಗಳ ಉಷ್ಣವು ಪ್ರದರ್ಶನವಾಗುವುದಿಲ್ಲ.

"ಆದಿತ್ಯರಶ್ಮಯ ಉಭೌ ಲೋಕೌ" (ಛಾಂ. ಉ. ೮-೬-೨) ಎಂಬ ಶ್ರುತಿವಾಕ್ಯರೀತ್ಯಾ ಸೂರ್ಯಕಿರಣಗಳು ನಮ್ಮ ನಾಡಿಗಳಲ್ಲಿ ಪ್ರವೇಶಿಸಿ ಆ ನಾಡಿಗಳಿಂದ ಪುನಃ ಸೂರ್ಯನಲ್ಲಿ ಪ್ರವೇಶಿಸುತ್ತವೆ. ಆದ್ದರಿಂದ ನಮ್ಮ ನಾಡಿಗಳು ಸೂರ್ಯಕಿರಣಗಳ ಒಂದು ಭಾಗದಲ್ಲಿರುವುವು. ಆದ್ದರಿಂದ ಜೀವನು ಹಗಲಾಗಲಿ ರಾತ್ರಿಯಾಗಲಿ ಸೂರ್ಯಕಿರಣಗಳ ಮಾರ್ಗವನ್ನು ಅನುಸರಿಸಿ ಹೋಗುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಜೀವನಿಗೆ ಮೋಕ್ಷಪ್ರಾಪ್ತಿಯ ಕಾಲದಲ್ಲಿ ಪ್ರಾರಬ್ಧಕರ್ಮ, ಪೂರ್ವಾಘ, ಉತ್ತರಾಘಗಳೆಲ್ಲವೂ ಸಂಪೂರ್ಣವಾಗಿ ನಶಿಸಿಹೋಗುವುದರಿಂದ ಅವನು ರಾತ್ರಿಯಲ್ಲಿ ಮೃತಿಹೊಂದಿದರೂ ಮುಕ್ತನಾಗಲೇಬೇಕು.

ಈ ಮೇಲೆ ಹೇಳಿದ ಕಾರಣದಿಂದಲೇ ಉಪಾಸಕನು ದಕ್ಷಿಣಾಯನದಲ್ಲಿ ಮೃತಿಹೊಂದಿದರೂ ಮೋಕ್ಷವನ್ನು ಹೊಂದುತ್ತಾನೆ—ಎಂದು "ಅತಶ್ಚಾಯನೇಽಪಿದಕ್ಷಿಣೇ" (ಶಾ. ಮಿ. ೪-೨-೧೯) ಎಂಬ ಸೂತ್ರದಲ್ಲಿ ಹೇಳಿದೆ.

ಆದರೆ "ಅಥಯೋ ದಕ್ಷಿಣೇ ಪ್ರಮಿಾಯತೇ ಪಿತೃಣಾಮೇವ ಮಹಿಮಾನಂ ಗತ್ವಾ ಚಂದ್ರಮಸಸ್ಸಾಯುಜ್ಯಂ ಗಚ್ಛತಿ" (ತ್ರೈ. ನಾ. ೫೨) ದರೆ—ದಕ್ಷಿಣಾಯನದಲ್ಲಿ ಮೃತಿಹೊಂದಿದವರು ಚಂದ್ರನನ್ನು ಹೋಗಿ ುವರು ಎಂದು ಹೇಳಿರುವುದರಿಂದಲೂ, "ಆಧ್ಯೈತಮೇವಾಧ್ವಾನಂ ಪುನರ್ನಿವರ್ತತೇ" (ಛಾಂ. ಉ. ೫-೧೦-೫) ಎಂದರೆ ಚಂದ್ರಲೋಕವನ್ನು ೀರಿದವರು ಪುನಃ ಸಂಸಾರದಲ್ಲಿ ತಳ್ಳಲ್ಪಡುವರೆಂದು ಹೇಳಿರುವುದ ರಿಂದಲೂ ಮತ್ತು ಮಹಾಭಾರತದಲ್ಲಿ ಭೀಷ್ಮನು ತನ್ನ ಯೋಗಬಲದಿಂದ ಉತ್ತರಾಯಣವು ಬರುವವರಿವಿಗೂ ತನ್ನ ಪ್ರಾಣವನ್ನು ಧರಿಸಿದ್ದುದ ರಿಂದಲೂ, ಈ ಕಾರಣಗಳಿಂದ ದಕ್ಷಿಣಾಯನದಲ್ಲಿ ಮೃತಿಹೊಂದಿದವರಿಗೆ ಮೋಕ್ಷವಿಲ್ಲ ಎಂದು ಪೂರ್ವಪಕ್ಷವು.

## ಸಿದ್ಧಾನ್ತ

ಉಪಾಸಕನು ದಕ್ಷಿಣಾಯನದಲ್ಲಿ ಮೃತಿಹೊಂದಿದರೂ ಅವನು ಚಂದ್ರಲೋಕಕ್ಕೆ ಮೊದಲು ಹೋಗಿ ಅಲ್ಲಿ ವಿಶ್ರಮಿಸಿಕೊಂಡಿದ್ದು ಅರ್ಚಿ ರಾದಿ ಮಾರ್ಗವನ್ನು ಅನುಸರಿಸಿ ಹೋಗಿ ಮೋಕ್ಷವನ್ನು ಹೊಂದುತ್ತಾನೆ. ಮೇಲೆ ಹೇಳಿದಂತೆ ಉಪಾಸಕನಿಗೆ ಕರ್ಮವು ಸಂಪೂರ್ಣವಾಗಿ ನಶಿಸಿ ಹೋಗುವುದರಿಂದ ಅವನಿಗೆ ಸಂಸಾರವೇ ಇಲ್ಲವು. ಮೇಲೆ ಹೇಳಿರುವ ಪೂರ್ವಪಕ್ಷದ ಶ್ರುತಿವಾಕ್ಯಗಳು ಅನುಪಾಸಕರ ವಿಷಯವಾಗಿ ಹೇಳಿರು ವುದು. ಉಪಾಸಕನ ವಿಷಯವಾಗಿ ಅಲ್ಲ. ಭೀಷ್ಮನ ಮರಣ ವಿಚಾರದಲ್ಲಿ ಉತ್ತರಾಯಣದಲ್ಲಿ ಮರಣವನ್ನು ಹೊಂದುವುದು ಶ್ರೇಷ್ಠವೆಂದು ಜನಗಳಿಗೆ ತಿಳಿಸುವುದಕ್ಕಾಗಿ ಉದಾಹರಣಮಾತ್ರವು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳಿದ "ಅಗ್ನಿರ್ಜ್ಯೋತಿರಹಃಶುಕ್ಲಃ ಷಣ್ಮಾಸಾಉತ್ತರಾ ಯಣಂ...." (ಭ. ಗೀ. ೮-೨೪) ಎಂಬ ಶ್ಲೋಕದಲ್ಲಿ ಹೇಳುವುದು ಉತ್ತರಾಯಣಕಾಲವಲ್ಲವು. ಅರ್ಚಿರಾದಿಮಾರ್ಗಪ್ರಯಾಣದಲ್ಲಿ ಇವನು ಪ್ರಯಾಣಮಾಡಿಹೋಗುವ ಮಾರ್ಗದಲ್ಲಿ ಇವನು ಅತಿಕ್ರಮಿಸಿ ಹೋಗುವ ದೇವತೆಗಳ ಪ್ರದೇಶಗಳನ್ನು ಸೂಚಿಸುತ್ತದೆ. ಆದ್ದರಿಂದ ದಕ್ಷಿಣಾಯನದಲ್ಲಿ ಮೃತಿಹೊಂದಿದರೂ ಉಪಾಸಕನು ಮೋಕ್ಷವನ್ನು

ಹೊಂದುತ್ತಾನೆ ಎಂಬುದೇ ಸಿದ್ಧಾನ್ತವು. ಅನುಪಾಸಕನು ಉತ್ತರಾಯಣದಲ್ಲಿ ಮೃತಿಹೊಂದಿದರೂ ಅವನು ಹ್ಯಾಗೆ ಮೋಕ್ಷವನ್ನು ಹೊಂದುವುದಿಲ್ಲವೋ ಹಾಗೆಯೇ ಉಪಾಸಕನು ದಕ್ಷಿಣಾಯನದಲ್ಲಿ ಮೃತಿಹೊಂದಿದರೂ ಸಂಸಾರಕ್ಕೆ ಹಿಂತಿರುಗುವುದಿಲ್ಲ.

ಸೂರ್ಯಮಂಡಲದ್ವಾರದಿಂದ ಮುಂದಕ್ಕೆ ಪ್ರಯಾಣಮಾಡುವ ಜೀವನನ್ನು ಅರ್ಚಿರಾದಿ ದೇವತೆಗಳು ಅವನ ಪ್ರಯಾಣದಲ್ಲಿ ಜೊತೆಯಾಗಿದ್ದು ದಾರಿಯನ್ನು ನಡೆಯಿಸಿಕೊಂಡು ಹೋಗುತ್ತಾರೆ ಎಂದು ಶ್ರುತಿ ಪ್ರಮಾಣವಿದೆ.

"ಅರ್ಚಿಷಮೇವಾಭಿಸಂಭವನ್ತಿ ಅರ್ಚಿಷೋಽಅಹರಹ್ನ ಆಪೂರ್ಯಮಾಣಪಕ್ಷಮಾಪೂರ್ಯಮಾಣಕ್ಷಾದ್ಯಾನ್ ಷಡುದಙ್ಙೇತಿ ಮಾಸಾಂಸ್ತಾನ್ ಮಾಸೇಭ್ಯಸ್ಸಂವತ್ಸರಂ ಸಂವತ್ಸರಾದಿತ್ಯಂ ಆದಿತ್ಯಾಚ್ಚಂದ್ರಮಸಂ ಚಂದ್ರಮಸೋವಿದ್ಯುತಂ ತತ್ಪುರುಷೋಽಮಾನವಸ್ಸಏತಾನ್ ಬ್ರಹ್ಮಗಮಯತ್ಯೇಷ ದೇವಪಥೋ ಬ್ರಹ್ಮಪಥಃ'' (ಛಾಂ. ಉ. ೪-೧೫-೫, ೬) ಎಂದು— ಉಪಾಸಕನು ಶರೀರತ್ಯಾಗಾನಂತರ ಕ್ರಮವಾಗಿ ಅಗ್ನಿ, ಅಹಸ್ಸು, ಶುಕ್ಲಪಕ್ಷ, ಉತ್ತರಾಯಣ, ವರ್ಷ, ಸೂರ್ಯ, ಚಂದ್ರ, ಮಿಂಚು, ಇವುಗಳನ್ನು ದಾಟಿಕೊಂಡುಹೋಗಿ "ಅಮಾನವನಿಂದ'' ಪರಮಾತ್ಮನ ಸಮೀಪಕ್ಕೆ ಕರೆದುಕೊಂಡು ಹೋಗಲ್ಪಡುವನು ಎಂದು ಹೇಳಿದೆ. ಕೌಶೀತಕೀ ಉಪನಿಷತ್ತಿನಲ್ಲಿ "ಸ ಏತಂ ದೇವಯಾನಪನ್ಥಾನಮಾಪದ್ಯ ಅಗ್ನಿಲೋಕಮಾಗಚ್ಛತಿ, ಸವಾಯುಲೋಕಂ, ಸವರುಣಲೋಕಂ, ಸ ಆದಿತ್ಯಲೋಕಂ, ಸ ಇಂದ್ರಲೋಕಂ, ಸಪ್ರಜಾಪತಿಲೋಕಂ, ಸಬ್ರಹ್ಮಲೋಕಂ" (ಕೌ. ಉ. ೧-೩) ಎಂದು ಕ್ರಮವಾಗಿ ಅಗ್ನಿಲೋಕವು, ವಾಯುಲೋಕವು, ವರುಣಲೋಕವು, ಆದಿತ್ಯಲೋಕವು, ಇಂದ್ರಲೋಕವು ಪ್ರಜಾಪತಿಯಲೋಕವು ಇವುಗಳನ್ನು ದಾಟಿ ಪರಮಾತ್ಮನನ್ನು ಸೇರುವನು ಎಂದು ಹೇಳಿದೆ.

ಈ ಎರಡು ಉಪನಿಷದ್ವಾಕ್ಯಗಳಲ್ಲಿ ಸ್ವಲ್ಪ ವ್ಯತ್ಯಾಸವು ಕಂಡುಬಂದಾಗ್ಯೂ ಇವೆರಡೂ ಬೇರೆಬೇರೆ ದಾರಿಗಳೆಂದು ತಿಳಿಯಕೂಡದು.

ಅರ್ಚಿರಾದಿ ಮಾರ್ಗವೆಲ್ಲಾ ಒಂದೇ ದಾರಿಯು. ಇವೆರಡು ಶ್ರುತಿವಾಕ್ಯಗಳನ್ನೂ ಸೇರಿಸಿ ಸರಿಯಾಗಿ ಅರ್ಥಮಾಡಿದರೆ ಜೀವನು–ಅರ್ಚಿಸ್ಸು, (ಎಂದರೆ ಅಗ್ನಿ) ಅಹಸ್ಸು, ಶುಕ್ಲಪಕ್ಷ, ಉತ್ತರಾಯಣ ಸಂವತ್ಸರ, ವಾಯು, ಸೂರ್ಯ, ಚಂದ್ರ, ವಿದ್ಯುತ್, ವರುಣ, ಇಂದ್ರ, ಪ್ರಜಾಪತಿ–ಎಂಬ ಹನ್ನೆರಡು ಅರ್ಚಿರಾದಿದೇವತೆಗಳ ಲೋಕಗಳ ಮಾರ್ಗವಾಗಿ ಕ್ರಮವಾಗಿ ಪ್ರಯಾಣಮಾಡಿ, ಬ್ರಹ್ಮಾಂಡವನ್ನು ಅತಿಕ್ರಮಿಸಿ ಹೋಗುವನು.

ಬ್ರಹ್ಮಾಂಡವನ್ನು ಅತಿಕ್ರಮಿಸಿದನಂತರ "ದಶಗುಣಿತೋತ್ತರಂ ಚಾವರಣಸಪ್ತಕಂ" (ವೈಕುಂಠಗದ್ಯಂ) ಎಂದರೆ ಬ್ರಹ್ಮಾಂಡಕ್ಕೆ ಹತ್ತರಷ್ಟು ಪ್ರಮಾಣವುಳ್ಳ ಅಪ್ಪು, ತೇಜಸ್ಸು, ವಾಯು, ಆಕಾಶ, ಅಹಂಕಾರ, ಮಹತ್, ಪ್ರಕೃತಿಎಂಬ ಏಳು ಆವರಣಗಳನ್ನು ದಾಟಿ ಮುಂದಕ್ಕೆ ಪ್ರಯಾಣಮಾಡಿ ವಿರಜಾನದಿಯ ದಡವನ್ನು ಸೇರುವನು ಎಂದು ಶಾಸ್ತ್ರ ಪ್ರಮಾಣವಿದೆ.

ಈ ಅರ್ಚಿರಾದಿದೇವತೆಗಳೆಲ್ಲಾ ಆ ಜೀವನು ತಮ್ಮ ಎಲ್ಲೆಯಲ್ಲಿ ಪ್ರಯಾಣಮಾಡುವಾಗ ಅವನನ್ನು ತಮ್ಮ ಎಲ್ಲೆಯ ಆರಂಭದಲ್ಲಿ ಎದುರ್ಗೊಂಡು, ಸತ್ಕರಿಸಿ, ತಮ್ಮ ಎಲ್ಲೆಯ ಕಡೆಯವರಿವಿಗೂ ದಾರಿ ನಡೆಯಿಸಿಕೊಂಡು ಅವನ ಪ್ರಯಾಣವು ಸುಖವಾಗಿ ಜರಗುವಂತೆ ಮಾಡುತ್ತಾರೆ. ಹೀಗೆ ದಾರಿ ನಡೆಯಿಸಿಕೊಂಡುಹೋಗುವವರಿಗೆ "ಆತಿವಾಹಿಕರು" ಎಂದು ಹೆಸರು. "ಆತಿವಾಹಿಕರು" ಎಂಬ ಪದಕ್ಕೆ ದಾರಿ ನಡೆಯಿಸಿಕೊಂಡುಹೋಗುವವರು ಎಂದು ಅರ್ಥ. ಅರ್ಚಿಸ್ಸು, ಅಹಸ್ಸು, ಶುಕ್ಲಪಕ್ಷ, ಉತ್ತರಾಯಣ, ಸಂವತ್ಸರ, ವಾಯು, ಸೂರ್ಯ, ಚಂದ್ರ, ವಿದ್ಯುತ್ ಎಂಬ ಈ ಒಂಭತ್ತು ದೇವತೆಗಳೂ "ಆತಿವಾಹಿಕರು." "ವಿದ್ಯುತ್" ದೇವತೆಯು ತನ್ನ ಲೋಕದ ಎಲ್ಲೆಯನ್ನು ದಾಟಿಹೋದ ಮೇಲೆಯೂ ಆ ಜೀವನ ಮುಂದಿನ ಪ್ರಯಾಣದಲ್ಲಿ ಎಂದರೆ–ವರುಣ, ಇಂದ್ರ ಮತ್ತು ಪ್ರಜಾಪತಿಗಳ ಲೋಕಗಳಲ್ಲೆಲ್ಲಾ ಆತಿವಾಹಕತ್ವವನ್ನು ಮಾಡುತ್ತಾನೆ. ವರುಣ, ಇಂದ್ರ ಮತ್ತು ಪ್ರಜಾಪತಿಗಳು ವಿದ್ಯುತನಿಗೆ ಸಹಕಾರಿಗಳಾಗಿರುತ್ತಾರೆಯೇವಿನಾ ಆತಿವಾಹಕತ್ವವನ್ನು ಮಾಡು[illegible]

ಇಲ್ಲಿ ಪೂರ್ವಪಕ್ಷದವರ ಕೆಲವು ಅನುಮಾನಗಳು ಚರ್ಚಿಸಲ್ಪಡುತ್ತವೆ. "ಬಾದರಿ" ಎಂಬ ಋಷಿಯು ಹೇಳುವುದೇನೆಂದರೆ—ಉಪಾಸಕರಲ್ಲಿ ಚತುರ್ಮುಖೋಪಾಸಕರು, ಜೀವಾತ್ಮೋಪಾಸಕರು (ಎಂದರೆ ಕೇವಲರು) ಮತ್ತು ಪರಮಾತ್ಮೋಪಾಸಕರು ಎಂದು ಮೂರುವಿಧ. ಇವರಲ್ಲಿ ಪರಮಾತ್ಮೋಪಾಸಕ ಸರ್ವಜಗತ್ತೂ ಬ್ರಹ್ಮಮಯವಾಗಿಯೇ ಇರುವುದರಿಂದ ಅವರು ಮುಕ್ತಿಗಾಗಿ ದೇಶಾಂತರವನ್ನು ಪ್ರಯಾಣಮಾಡಿ ಹೋಗಬೇಕಾದ್ದಿಲ್ಲ. ಅವರು ಮಾಡುವ ಉಪಾಸನವು ಅವರ ಅವಿದ್ಯಾನಿವೃತ್ತಿಗೋಸ್ಕರವಾಗಿಯೇ. ಚತುರ್ಮುಖೋಪಾಸಕನಿಗೆ ಚತುರ್ಮುಖಲೋಕವು ದೇಶಾಂತರದಲ್ಲಿರುವುದರಿಂದ ಅಲ್ಲಿಯವರಿವಿಗೂ ಪ್ರಯಾಣಮಾಡಿ ಹೋಗಬೇಕು. ಆದ್ದರಿಂದ ಅವರನ್ನೇ ಆತಿವಾಹಿಕರು ದಾರಿನಡೆಯಿಸಿಕೊಂಡು ಹೋಗುತ್ತಾರೆ ಎಂದು ಹೇಳುತ್ತಾರೆ.

"ತತ್ಪುರುಷೋऽಮಾನವಏತ್ಯ ಬ್ರಹ್ಮಲೋಕಾನ್ ಗಮಯತಿ" (ಬೃ. ಉ. ೬-೨-೧೫) "ಪ್ರಜಾಪತೇಸ್ಸಭಾಂವೇಶ್ಮಪ್ರಪದ್ಯೆ" (ಛಾಂ.ಉ. ೮-೧೪-೧) ಎಂದು ಅರ್ಚಿರಾದಿಮಾರ್ಗಸ್ಥನಾದ ಉಪಾಸಕನು ಬ್ರಹ್ಮಲೋಕಕ್ಕೆ ಹೋಗುವನೆಂದೂ, ಅಲ್ಲಿ "ಪ್ರಜಾಪತಿಯಸಭೆ" ಎಂದು ವಿಶೇಷಿಸಿರುವುದರಿಂದಲೂ, ಉಪಾಸಕನು ಹೋಗುವ ಬ್ರಹ್ಮಲೋಕವು "ಚತುರ್ಮುಖಬ್ರಹ್ಮನಲೋಕ"ವೆಂದೇ ಅರ್ಥವಾಗಬೇಕು ಎಂದು ಹೇಳುತ್ತಾರೆ. "ಬ್ರಹ್ಮಲೋಕಂ" ಎಂಬ ಪದದಲ್ಲಿ ಬ್ರಹ್ಮಶಬ್ದವು ಪರಬ್ರಹ್ಮಸಾಮೀಪ್ಯದಿಂದ ಚತುರ್ಮುಖನಿಗೂ ಅನ್ವಯಿಸಬಹುದಾದ್ದರಿಂದ ಚತುರ್ಮುಖಬ್ರಹ್ಮಲೋಕವೆಂದೂ ಅರ್ಥಮಾಡಬಹುದು ಎಂದು ಹೇಳುತ್ತಾರೆ. "ಇಮಂ ಮಾನವ ಮಾವರ್ತಂ ನಾವರ್ತಂತೆ" ಎಂದರೆ ಮುಕ್ತಿಯನ್ನು ಹೊಂದಿದವನು ಪುನಃ ಸಂಸಾರಕ್ಕೆ ಹಿಂತಿರುಗುವುದಿಲ್ಲವೆಂದು ಅರ್ಥವು. ಆದರೆ "ತೇಬ್ರಹ್ಮಲೋಕೇಷು ಪರಾನ್ತಕಾಲೇ ಪರಾಮೃತಾತ್ಪರಿಮುಚ್ಯನ್ತಿಸರ್ವೇ" (ತೈ. ನಾ. ೧೦-೨೪) ಎಂದರೆ ಚತುರ್ಮುಖಬ್ರಹ್ಮಲೋಕದಲ್ಲಿರುವವರು ಎರಡು ಪರಾರ್ಧಗಳು ಅಲ್ಲಿಯೇ ಇರುವರು, ಮಹಾಪ್ರಳಯದಲ್ಲಿ ಆ ಲೋಕವು ನಶಿಸುವುದು. ಆ ಕಾಲದಲ್ಲಿ ಆ ಲೋಕದ

ವರೆಲ್ಲರೂ ವಿಷ್ಣುಸ್ವರೂಪವನ್ನು ಹೊಂದಿ ಮುಕ್ತರಾಗುವರು—ಎಂದು ಹೇಳುವುದರಿಂದ ಚತುರ್ಮುಖನ ಲೋಕವನ್ನು ಸೇರಿದವರು ಸಂಸಾರಕ್ಕೆ ಹಿಂತಿರುಗುವುದಿಲ್ಲ. ಇದು ಶ್ರುತಿವಾಕ್ಯಾನುಸಾರವಾಗಿ ಸಮನ್ವಯಿಸುವುದರಿಂದ ಮುಕ್ತನು ಚತುರ್ಮುಖಲೋಕಕ್ಕೇ ಹೋಗುವನು ಎಂದು ಕೆಲವರು ಹೇಳುತ್ತಾರೆ. "ಬ್ರಹ್ಮಣಾಸಹತೇ ಸರ್ವೇ ಸಂಪ್ರಾಪ್ತೇ ಪ್ರತಿಸಂಚರೇ ಪರಸ್ಯಾನ್ತೇ ಕೃತಾತ್ಮಾನಃ ಪ್ರವಿಶನ್ತಿ ಪರಂಪದಂ" ಎಂದರೆ—ಕರ್ಮಬ್ರಹ್ಮನನ್ನು ಪಡೆದವರು ಆ ಬ್ರಹ್ಮನ ಅವಸಾನಕಾಲದಲ್ಲಿ ಆ ಕರ್ಮಬ್ರಹ್ಮಲೋಕವು ನಶಿಸುವಾಗ ಅವರು ಬ್ರಹ್ಮನೊಡನೆ ಪರಸ್ವರೂಪವನ್ನು ಪಡೆಯುವರು. ಎಂದು ಸ್ಮೃತಿವಚನವು ಇರುವುದರಿಂದ ಮುಕ್ತನು ಚತುರ್ಮುಖಬ್ರಹ್ಮಲೋಕಕ್ಕೆ ಹೋಗುವನು ಎಂದು ಅರ್ಥವಾಗಬಹುದು—ಎಂದು ಕೆಲವರು ಹೇಳುತ್ತಾರೆ.

ಜೈಮಿನಿಯೆಂಬವರು ಬಾದರಿಯ ಮತವನ್ನು ಖಂಡಿಸಿ ಈ ಕೆಳಗೆ ಹೇಳುವಂತೆ ಉಪನ್ಯಸಿಸಿರುತ್ತಾರೆ—

"ಬ್ರಹ್ಮಗಮಯನ್ತಿ" ಎಂಬ ವಾಕ್ಯದಲ್ಲಿ ಪರಬ್ರಹ್ಮನೆಂದೇ ಅಂಗೀಕರಿಸಬೇಕು. ಹಿರಣ್ಯಗರ್ಭಲೋಕವೆಂದು ಅರ್ಥವಾಗುವಂತೆ ವಿವರಿಸಿ ಹೇಳುವ ಪದಗಳಾಗಲೀ ವಾಕ್ಯಗಳಾಗಲೀ ಇಲ್ಲವು. "ಬ್ರಹ್ಮ"ಶಬ್ದವು ನಪುಂಸಕಲಿಂಗವಾಗಿ, ಪರಬ್ರಹ್ಮನು ಸರ್ವತ್ರವ್ಯಾಪಿಯಾದರೂ, ಮೋಕ್ಷಾನುಭವಸ್ಥಳವು ದೇಶಾಂತರದಲ್ಲಿರುವುದರಿಂದ ದೇಶಾಂತರಗಮನವು ಅತ್ಯವಶ್ಯಕವು. ಪರಬ್ರಹ್ಮನು ಸರ್ವವ್ಯಾಪಿಯಾಗಿದ್ದರೂ ಮೋಕ್ಷವು ಉಪಾಸನಾದಿಗಳಿಂದ ಅವಿದ್ಯಾನಾಶನಪೂರ್ವಕವಾಗಿ ಆಗುವುದರಿಂದಲೂ, ಅದಕ್ಕೆ ಪರಬ್ರಹ್ಮನು ಸಹಕಾರಿಯಾದ್ದರಿಂದಲೂ, ಪರಬ್ರಹ್ಮೋಪಾಸನವು ಅರ್ಚಿರಾದಿಗತಿಗೆ ಅವಶ್ಯಕವು.

"ಬ್ರಹ್ಮಲೋಕಾನ್" ಎಂಬ ಬಹುವಚನ ಪದವು ಪರಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಲೋಕಗಳು ಅನೇಕವಾಗಿರುವುದರಿಂದ ಬಹುವಚನ ಪ್ರಯೋಗವು ವಿರೋಧವಲ್ಲವು ಎಂದು ಜೈಮಿನಿಯವರ ತಾತ್ಪರ್ಯವು.

"ಏಷಸಂಪ್ರಸಾದೋಽಸ್ಮಾಚ್ಛರೀರಮುತ್ಥಾಯ ಪರಂಜ್ಯೋತಿರುಪಸಂಪದ್ಯ ಸ್ವೇನರೂಪೇಣಾಬಿನಿಷ್ಪದ್ಯತ" (ಛಾಂ. ಉ. ೮-೩-೪) ಎಂದರೆ—ಈ ಜೀವನು ಶರೀರದಿಂದ ಹೊರಟು ಪರಮಾತ್ಮಸ್ವರೂಪವನ್ನು ಹೊಂದಿ ಅವಿದ್ಯಾನಿರ್ಮುಕ್ತನಾಗಿ ಸ್ವಸ್ವರೂಪವನ್ನು ಹೊಂದುವನು ಎಂಬ ಶ್ರುತಿ ವಾಕ್ಯಪ್ರಕಾರ ಆತಿವಾಹಿಕರ ಸಹಾಯದಿಂದ ಪರಬ್ರಹ್ಮಪ್ರಾಪ್ತಿಯೆಂದೇ ಸರಿಯಾದ ಅರ್ಥವು. ಅದೂ ಅಲ್ಲದೆ ಕಾರ್ಯಬ್ರಹ್ಮನನ್ನು ಹೊಂದಬೇಕೆಂಬ ಸಂಕಲ್ಪವು ಉಪಾಸಕನಿಗೆ ಯಾವಾಗ್ಯೂ ಇರಲೇ ಇಲ್ಲ.

"ಪರಮೇವನಯತಿ ನಚಕಾರ್ಯೆ ಪ್ರತ್ಯಭಿಸನ್ಧಿಃ ಪ್ರಜಾಪತಿಸ್ಸಭಾಂ ಪ್ರವೇಶ್ಮಪ್ರಪದ್ಯ" ಎಂದು ಉಪಾಸಕನು ಪರಬ್ರಹ್ಮೋಪಾಸನೆಯನ್ನು ಮಾಡಿದನೇವಿನಾ ಚತುರ್ಮುಖಬ್ರಹ್ಮೋಪಾಸನೆಯನ್ನು ಮಾಡಲಿಲ್ಲ. "ಯಶೋಽಹಂ ಭವಾಮಿ ಬ್ರಾಹ್ಮಣಾನಾಂ" (ಛಾಂ. ಉ. ೮-೧೪-೧) ಎಂದು ಸರ್ವಾತ್ಮಭಾವದಿಂದಲೂ ಪರಬ್ರಹ್ಮೋಪಾಸನವನ್ನೇ ಮಾಡಿರುವನು. ಹಿರಣ್ಯಗರ್ಭೋಪಾಸನವು ಈ ವಿಧವಾಗಿಲ್ಲ. ಸಮಸ್ತವಾದ ಅವಿದ್ಯೆಯನ್ನೂ ಕಳೆದುಕೊಂಡು, ಪರಬ್ರಹ್ಮಜ್ಞಾನಸಿದ್ಧಿಯನ್ನು ಹೊಂದುವುದರಿಂದಲೂ, ಈ ವಿಧವಾದ ಜ್ಞಾನಸಿದ್ಧಿಯು ಚತುರ್ಮುಖಲೋಕ ಗಾಮಿಗಳಿಗೆ ಸಂಪೂರ್ಣವಾಗಿ ಇರುವುದಿಲ್ಲವಾದ್ದರಿಂದಲೂ ; ಮತ್ತೂ—"ಅಶ್ವ ಇವರೋಮಾಣಿ ವಿಧೂಯಪಾಪಂ ಚಂದ್ರಇವರಾಹೋರ್ಮುಖಾತ್ಪ್ರಮುಚ್ಯ | ಧೂತ್ವಾಶರೀರಮಕೃತಂ...." (ಛಾಂ. ಉ. ೮-೧೩-೧) ಇತ್ಯಾದಿ ವಾಕ್ಯರೀತ್ಯಾ ಸಮಸ್ತಪಾಪವನ್ನೂ ಸಂಪೂರ್ಣವಾಗಿ ಒದರಿಬಿಟ್ಟು, ರಾಹುವಿನಿಂದ ಬಿಡಲ್ಪಟ್ಟ ಚಂದ್ರನಂತೆ ಶರೀರವನ್ನು ತ್ಯಜಿಸಿ ನಿತ್ಯವಾದ ಬ್ರಹ್ಮಲೋಕವನ್ನು ಸೇರುವನು, ಎಂದು ಸಾಕ್ಷಾತ್ ಅವಿದ್ಯಾನಿವೃತ್ತಿಯನ್ನೂ ಮತ್ತು ಪ್ರಾಪ್ಯಪ್ರದೇಶವನ್ನೂ ನಿತ್ಯವಾದುದ್ದಾಗಿ ಹೇಳಿರುವುದರಿಂದಲೂ; ಚತುರ್ಮುಖಲೋಕವು ನಿತ್ಯವಲ್ಲದ್ದರಿಂದಲೂ, ಅಲ್ಲಿಗೆ ಹೋಗುವ ಉಪಾಸಕರಿಗೆ ಸಂಪೂರ್ಣವಾದ ಅವಿದ್ಯಾನಿವೃತ್ತಿಯಿಲ್ಲದಿರುವುದರಿಂದಲೂ, ಇವನ ಉಪಾಸನವು ಕಾರ್ಯಬ್ರಹ್ಮೋಪಾಸನೆಯಲ್ಲದ್ದರಿಂದಲೂ, ಎಲ್ಲಾ ಬ್ರಹ್ಮೋಪಾಸಕರನ್ನೂ ಆತಿವಾಹಿಕರು ಪರಬ್ರಹ್ಮಲೋಕಕ್ಕೆ ಕರೆದುಕೊಂಡು ಹೋಗುತ್ತಾರೆ.

**ಸಿದ್ಧಾಂತ–ಅರ್ಚಿರಾದಿಗತಿಗೆ ಅಧಿಕಾರಿ:—**

ಭಗವದ್ಬಾದರಾಯಣರ ಮತ್ತು ಭಗವದ್ರಾಮಾನುಜರ ಸಿದ್ಧಾನ್ತವು ಕೆಳಗೆ ಹೇಳಲ್ಪಡುವುದು.

"ಅಪ್ರತೀಕಾಲಮ್ಬನಾನ್ನಯತೀತಿ ಬಾದರಾಯಣ ಉಭಯದಾಚ ದೋಷಾತ್ತತ್ಕ್ರತುಶ್ಚ" (ಶಾ. ಮಿಾ. ೪-೩-೧೪) ಎಂದರೆ ಮೇಲೆ ಹೇಳಿದ ಎರಡು ತರ್ಕಗಳಲ್ಲಿಯೂ ದೋಷವಿರುವುದರಿಂದಲೂ, ಉಪಾಸಕನು ತನ್ನ ಉಪಾಸನಾನುಗುಣವಾಗಿ ಫಲವನ್ನು ಹೊಂದಬೇಕಾದ್ದರಿಂದಲೂ "ಪ್ರತೀಕೋಪಾಸಕ"ರಲ್ಲದವರನ್ನು ಆತಿವಾಹಿಕರು ಕರೆದುಕೊಂಡು ಹೋಗುತ್ತಾರೆ ಎಂದು ಭಗವದ್ವೇದವ್ಯಾಸಋಷಿಗಳ ಮತ್ತು ಭಗವದ್ರಾಮಾನುಜರ ಮತವು.

ಪರಬ್ರಹ್ಮೋಪಾಸಕರಿಗೇ ಅರ್ಚಿರಾದಿಗತಿ ಎಂದು ಜೈಮಿನಿಯವರ ಮತವು ಎಂದು ಮೇಲೆ ಹೇಳಿತು. ಚತುರ್ಮುಖಬ್ರಹ್ಮೋಪಾಸಕನಿಗೇ ಅರ್ಚಿರಾದಿಗತಿ ಎಂದು ಬಾದರಿಯವರ ಮತವು.

ಪಂಚಾಗ್ನಿ ವಿದ್ಯೋಪಾಸಕರನ್ನೂ ಮತ್ತು ಪರಬ್ರಹ್ಮೋಪಾಸಕರನ್ನೂ ಈ ಇಬ್ಬರನ್ನೂ ಆತಿವಾಹಿಕರು ಕರೆದುಕೊಂಡುಹೋಗುತ್ತಾರೆ ಎಂದು ವ್ಯಾಸಮಹರ್ಷಿಗಳವರ ಸಿದ್ಧಾನ್ತವು.

**ಚತುರ್ಮುಖಬ್ರಹ್ಮೋಪಾಸಕನಿಗೇ ಅರ್ಚಿರಾದಿಗತಿ ಎಂದು ಹೇಳುವ ಪಕ್ಷದಲ್ಲಿ**

"ಅಸ್ಮಾಚ್ಛರೀರಾತ್ಸಮುತ್ಥಾಯ ಪರಂಜ್ಯೋತಿರುಪಸಂಪದ್ಯ" (ಛಾಂ. ಉ. ೮-೧೨-೩) ಎಂದರೆ ಜೀವನು ಶರೀರದಿಂದ ಹೊರಟು ಪರಬ್ರಹ್ಮನನ್ನು ಸೇರಿ ಸ್ವಸ್ವರೂಪಾವಿರ್ಭಾವವನ್ನು ಪಡೆಯುವನು ಎಂಬ ಫಲವು ಸರಿಯಾಗುವುದಿಲ್ಲ. ಯಾತಕ್ಕೆಂದರೆ ಚತುರ್ಮುಖನನ್ನು ಹೊಂದುವವರಿಗೆ ಸ್ವರೂಪಾವಿರ್ಭಾವವಿರುವುದಿಲ್ಲ. ಜೈಮಿನಿಯ ವಾಕ್ಯದಂತೆ "ಪರಮೇವೋಪಾಸತೆ" ಎಂದು ಪರಮಾತ್ಮೋಪಾಸನೆಯನ್ನು ಮಾತ್ರವೇ

ಹೇಳಿದರೆ ಪಂಚಾಗ್ನಿವಿದ್ಯಾಶ್ರುತಿಯಲ್ಲಿ "ತದ್ಯ ಇತ್ಥಂ ವಿದುಃ ಯೇಚೇ-ಮೇಽರಣ್ಯೇ ಶ್ರದ್ಧಾ ತಪಸ ಇತ್ಯುಪಾಸತೇ ತೇ ಅರ್ಚಿಷಮಭಿಸಂಭವನ್ತಿ (ಛಾಂ. ಉ. ೫-೧೦-೧) ಎಂಬ ಶ್ರುತಿವಾಕ್ಯರೀತ್ಯಾ "ತದ್ಯ ಇತ್ಥಂ ವಿದುಃ" ಎಂದರೆ "ಪಂಚಾಗ್ನಿ ವಿದ್ಯೆಯ ಸ್ವರೂಪವನ್ನು ಸರಿಯಾಗಿ ತಿಳಿದು" ಎಂದು ಹೇಳಿರುವುದರಿಂದ ಇಲ್ಲಿ "ಅಪ್ರತೀಕೋಪಾಸನವೇ" ಅರ್ಚಿರಾದಿ ಮಾರ್ಗಸಾಧನವೆಂದು ಹೇಳಲ್ಪಟ್ಟಿದೆ.

ಆದ್ದರಿಂದ ಪಂಚಾಗ್ನಿ ವಿದ್ಯಾನಿಷ್ಠನೂ ಮತ್ತು ಪರಬ್ರಹ್ಮವಿದ್ಯಾ ನಿಷ್ಠನೂ ಇವರಿಬ್ಬರೂ ಅಪ್ರತೀಕೋಪಾಸಕರು; ಮತ್ತು ಇವರಿಬ್ಬರಿಗೂ ಅರ್ಚಿರಾದಿಗತಿಯು ಸಿದ್ಧಿಸುವುದು.

**ಪ್ರತೀಕೋಪಾಸನವು :—**

ಛಾಂದೋಗ್ಯೋಪನಿಷತ್ತಿನಲ್ಲಿ ಏಳನೆಯ ಅಧ್ಯಾಯದಲ್ಲಿ ಪ್ರತೀಕೋಪಾಸನದ ವಿಷಯವು ಹೇಳಲ್ಪಟ್ಟಿದೆ. ಇದರಲ್ಲಿ ನಾಮ, ವಾಕ್ಕು, ಮನಸ್ಸು, ಚಿತ್ತ ಇತ್ಯಾದಿಗಳನ್ನು ಪರಬ್ರಹ್ಮಭಾವದಿಂದ ಉಪಾಸಿಸುವಂತೆ ಹೇಳಿದೆ. ಇವುಗಳಲ್ಲಿ ಒಂದಕ್ಕಿಂತ ಮತ್ತೊಂದು ಶ್ರೇಷ್ಠವೆಂದು ವಿವರಿಸಿರುವುದು. ನಾಮಕ್ಕಿಂತಲೂ ವಾಕ್ಕು ಉತ್ತಮವು; ವಾಕ್ಕಿಗಿಂತಲೂ ಮನಸ್ಸು ಉತ್ತಮವು; ಸಂಕಲ್ಪವು ಮನಸ್ಸಿಗಿಂತಲೂ ಉತ್ತಮವು; ಚಿತ್ತವು ಸಂಕಲ್ಪಕ್ಕಿಂತಲೂ ಉತ್ತಮವು; ಧ್ಯಾನವು ಚಿತ್ತಕ್ಕಿಂತಲೂ ಉತ್ತಮವು; ವಿಜ್ಞಾನವು ಧ್ಯಾನಕ್ಕಿಂತಲೂ ಉತ್ತಮವು; ಬಲವು (ಎಂದರೆ ಶಕ್ತಿಯು) ವಿಜ್ಞಾನಕ್ಕಿಂತಲೂ ಉತ್ತಮವು; ಅನ್ನವು ಬಲಕ್ಕಿಂತಲೂ ಉತ್ತಮವು; ಜಲವು ಅನ್ನಕ್ಕಿಂತಲೂ ಉತ್ತಮವು; ತೇಜಸ್ಸು ಜಲಕ್ಕಿಂತಲೂ ಉತ್ತಮವು; ಆಕಾಶವು ತೇಜಸ್ಸಿಗಿಂತಲೂ ಉತ್ತಮವು; ಸ್ಮೃತಿಯು ಆಕಾಶಕ್ಕಿಂತಲೂ ಉತ್ತಮವು; ಆಶೆಯು ಸ್ಮೃತಿಗಿಂತಲೂ ಉತ್ತಮವು; ಮತ್ತು ಪ್ರಾಣವು ಆಶೆಗಿಂತಲೂ ಉತ್ತಮವು.

ಈರೀತಿಯಾಗಿ ಪ್ರತೀಕೋಪಾಸನವನ್ನು ಒಂದಕ್ಕಿಂತ ಮತ್ತೊಂದನ್ನು ಉತ್ಕೃಷ್ಟವೆಂಬದಾಗಿ ಹೇಳಿದೆ. ಈ ಉಪಾಸನೆಗಳಿಗೆ ತಕ್ಕಂತೆ

ಫಲವೂ ಒಂದಕ್ಕಿಂತ ಮತ್ತೊಂದು ಅತಿಶಯವಾಗಿಯೇ ಇರುವುವು. ಈ ಉಪಾಸನೆಗಳಿಗೆ ಅರ್ಚಿರಾದಿಗತಿಯಲ್ಲದ ಬೇರೆಬೇರೆ ಉತ್ತಮ ಫಲಾನುಭವಗಳು ಶಾಸ್ತ್ರದಲ್ಲಿ ಹೇಳಿರುವುವು. ಆದ್ದರಿಂದ ಪ್ರತೀಕೋಪಾಸನೆಗೆ ಅರ್ಚಿರಾದಿಗತಿಯಿಲ್ಲವು. ಪರಮಾತ್ಮೋಪಾಸಕನಿಗೂ ಮತ್ತು ಪಂಚಾಗ್ನಿ ವಿದ್ಯೋಪಾಸಕನಿಗೂ ಮಾತ್ರವೇ ಅರ್ಚಿರಾದಿಯುಂಟು ಎಂದೇ ಸಿದ್ಧಾನ್ತವು.

## ಮುಕ್ತನ ಸ್ವರೂಪಾನಂದಾದ್ಯನುಭವಗಳು–(ಮುಕ್ತೈಶ್ವರ್ಯಗಳು)

ಮುಕ್ತಜೀವನ ಸ್ವರೂಪಾವಿರ್ಭಾವ ಗುಣ, ವಿಭವೈಶ್ವರ್ಯಾದಿಗಳು ಮುಂದೆ ಹೇಳಲ್ಪಡುತ್ತವೆ.

## ಮುಕ್ತನ ಸ್ವರೂಪಾವಿರ್ಭಾವವು :—

ಅರ್ಚಿರಾದಿ ಮಾರ್ಗದಿಂದ ಹೊರಟ ಜೀವನು "ಪರಂಜ್ಯೋತಿರುಪಸಂಪದ್ಯ' ಸ್ವೇನರೂಪೇಣಾಭಿನಿಷ್ಪದ್ಯತೆ" (ಛಾಂ. ಉ. ೮-೧೨-೨) ಎಂದರೆ ಮುಕ್ತಜೀವನು ಮೊದಲು ತನ್ನ ಸ್ವರೂಪವನ್ನು ಹೊಂದುತ್ತಾನೆ ಎಂದು ಶ್ರುತಿವಾಕ್ಯವು ಹೇಳುತ್ತದೆ. ವೈಕುಂಠದಲ್ಲಿ ಸ್ವಸ್ವರೂಪವನ್ನು ಪಡೆಯುವನು ಎಂದು ಇದರಿಂದ ಸಿದ್ಧಿಸುವುದು.

ಸ್ವಸ್ವರೂಪವೆಂದರೆ ತನ್ನ ಸ್ವಂತ ಸ್ವರೂಪವೆಂದು ಅರ್ಥವಾಗುವುದರಿಂದ ಈ ಸ್ವಸ್ವರೂಪವನ್ನು ಫಲಸ್ವರೂಪವಾಗಿ ಹೇಳುವುದು ಅನುಚಿತವಲ್ಲವೇ ? ಆದ್ದರಿಂದ ಇದನ್ನು ಫಲಸ್ವರೂಪವೆಂದು ಹೇಳಕೂಡದು ಎಂದು ಕೆಲವರು ಹೇಳುತ್ತಾರೆ. ಆದರೆ ಶರೀರದಲ್ಲಿರುವ ರೋಗವು ನಿವೃತ್ತಿಯಾದ ನಂತರ "ಆರೋಗ್ಯಂ ನಿಷ್ಪದ್ಯತೇ" ಎಂದು ರೋಗಕ್ಕೆ ಮೊದಲು ಇದ್ದ ಆರೋಗ್ಯವನ್ನೇ "ನಿಷ್ಪದ್ಯತೇ" ಎಂದು ಹೇಳುವುದು ರೂಢಿಯಲ್ಲಿದೆ. ಇಲ್ಲಿಯೂ ಜೀವನಿಗೆ "ಅವಿದ್ಯಾ" ನಿವೃತ್ತಿಯುಂಟಾಗುವುದು.

ಸ್ವಸ್ವರೂಪವು "ಸುಷುಪ್ತಿ"ಯಲ್ಲಿಯೂ ಇರುವುದರಿಂದಲೂ, ಆಗ ಅದು ತೋರದೇ ಇರುವುದರಿಂದ "ಸ್ವಸ್ವರೂಪಾವಿರ್ಭಾವವು ಮೋಕ್ಷವು"

ಎಂದು ಹೇಳುವ ಶಾಸ್ತ್ರವು ಪುರುಷಾರ್ಥಪ್ರತಿಪಾದಕವಾಗಲಾರದು ಎಂದರೆ ಆತ್ಮಸ್ವರೂಪವು ಅಪಹತಪಾಪ್ಮತ್ವಾದಿ ಗುಣಗಳುಳ್ಳದ್ದಾಗಿಯೂ, ನಿರತಿಶಯಾನಂದರೂಪವಾಗಿಯೂ ಇರುವುದು. ಅಂತಹ ಸ್ವಸ್ವರೂಪವು ಅನಾದಿಯಾದ ಅವಿದ್ಯೆಯಿಂದ ಮರೆಸಿಹೋಗುವುದರಿಂದ ಸುಷುಪ್ತ್ಯಾದಿಗಳಲ್ಲಿ ಅದು ತಿಳಿಯುವುದಿಲ್ಲ. ಪರಮಾತ್ಮ ಸಾಮೀಪ್ಯವನ್ನು ಹೊಂದಿದ ನಂತರ ಆ ಅವಿದ್ಯೆಯು ಬಿಟ್ಟುಹೋಗುವುದರಿಂದ ಸ್ವಾಭಾವಿಕವಾದ ರೂಪವು ಪ್ರಕಾಶಿಸುವುದು. ಇವನಿಗೆ ಇದೇ ಸ್ವಸ್ವರೂಪವೆಂಬುದು. ಈ ಸ್ವರೂಪವು— "ಯಆತ್ಮಾಽಪಹತಪಾಪ್ಮಾ ವಿಜರೋವಿಮೃತ್ಯುರ್ವಿಶೋಕೋಽವಿಜಿಘತ್ಸೋಽಪಿಪಾಸಃ ಸತ್ಯಕಾಮಃ ಸತ್ಯಸಂಕಲ್ಪಃ...." (ಛಾಂ. ಉ. ೮-೭-೧) ಇತ್ಯಾದಿ ಶ್ರುತಿವಾಕ್ಯಗಳಿಂದ ಸಿದ್ಧಿಸುವುದು. ಈ ವಿಧವಾದ ಸ್ವಸ್ವರೂಪವು ನಿರತಿಶಯ ಪುರುಷಾರ್ಥವಾದ್ದರಿಂದ ಶಾಸ್ತ್ರವು ನಿರತಿಶಯ ಪುರುಷಾರ್ಥ ಪ್ರತಿಪಾದಕವಾಗುವುದರಲ್ಲಿ ಯಾವ ಕೊರತೆಯೂ ಇಲ್ಲ.

ಈ ಮೇಲೆ ಹೇಳಿದ ಸ್ವಸ್ವರೂಪವೆಂಬುದು ಯಾವುದು? ಪದ್ಮಪುರಾಣದಲ್ಲಿ ಮುಕ್ತನ ಸ್ವರೂಪವನ್ನು ವಿವರಿಸಿ "ಸೂರ್ಯಕೋಟಿ ಪ್ರತೀಕಾಶಾಃ | ಪೂರ್ಣೇನ್ದ್ವಯುತಸನ್ನಿಭಾಃ | ಯಸ್ಮಿನ್ ಪದೇ ವಿರಾಜನ್ತೇ | ಮುಕ್ತಾಸ್ಸಂಸಾರಬನ್ಧನೈಃ || ಎಂದರೆ—ಮುಕ್ತನಾದ ಜೀವನು ಕೋಟಿ ಸೂರ್ಯಪ್ರಕಾಶಮಾನವಾದ ತೇಜಸ್ಸುಳ್ಳವನಾಗಿಯೂ, ಹತ್ತುಸಾವಿರ ಚಂದ್ರರು ಸೇರಿದಷ್ಟು ಸೌಂದರ್ಯವುಳ್ಳವನಾಗಿಯೂ ಕಾಣುವನು–ಎಂದು ಹೇಳಿದೆ. ಪರಬ್ರಹ್ಮನೇ ತನಗೆ ಆತ್ಮನು ಎಂಬುದನ್ನೂ, ಮತ್ತು ಪರಬ್ರಹ್ಮನಿಂದ ತಾನು ಸಂಪೂರ್ಣವಾಗಿ ಆವಿರ್ಭಾವಿಸಲ್ಪಟ್ಟಿರುವನೆಂಬುದನ್ನೂ, ಭಗವದನುಗ್ರಹದಿಂದ ಸಾಕ್ಷಾತ್ಕರಿಸುವನು. ಆಗ ಅವನಿಗೆ "ಅಹಂ ಬ್ರಹ್ಮಾಸ್ಮಿ" ಎಂದು ತನ್ನನ್ನೇ ತಾನು ಮರೆಯುವಷ್ಟು ಸಂತೋಷದಿಂದ ಬ್ರಹ್ಮಾನಂದದಿಂದ ಇರುತ್ತಾನೆ.

"ಅಹಂಬ್ರಹ್ಮಾಸ್ಮಿ" ಎಂಬ ಪದಕ್ಕೆ "ಅಹಂಬ್ರಹ್ಮಾತ್ಮಕಮಸ್ಮಿ" ಎಂದು ಅರ್ಥವು.

**ಮುಕ್ತನ ಗುಣವಿಭವೈಶ್ವರ್ಯಾದಿಗಳು :—**

"ಸೋಽಶ್ನುತೇ ಸರ್ವಾನ್ ಕಾಮಾನ್ ಸಹಬ್ರಹ್ಮಣಾ...." (ತೈ. ಆನ. ೧-೨) ಇತ್ಯಾದಿ ಶ್ರುತಿವಾಕ್ಯರೀತ್ಯಾ ಮುಕ್ತನು ಬ್ರಹ್ಮಶರೀರತಯಾ ಬ್ರಹ್ಮನಿಗೆ ಪ್ರಾಕಾರಭೂತನಾಗಿದ್ದು, ಸ್ವಾತ್ಮಭೂತನಾದ ಪರಮಾತ್ಮನನ್ನು ಸಕಲ ಕಲ್ಯಾಣಗುಣವಿಶಿಷ್ಟನನ್ನಾಗಿ ಅನುಭವಿಸುತ್ತಾನೆ.

ಸ್ವರೂಪಾವಿರ್ಭಾವದೊಡನೆ ಪರಮಾತ್ಮನ ಸಾಧರ್ಮ್ಯಸ್ವರೂಪವಾದ ಗುಣಾಷ್ಟಕಗಳೂ ಇವನಿಗೆ ಉಂಟಾಗುವುವು. "ಯ ಆತ್ಮಾ ಅಪಹತ ಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋಽವಿಜಿಘತ್ಸೋಽಪಿಪಾಸಃ ಸತ್ಯ ಕಾಮಃ ಸತ್ಯಸಂಕಲ್ಪಃ...." (ಛಾಂ. ಉ. ೮-೭-೧) ಎಂಬ ಶ್ರುತಿವಾಕ್ಯ ರೀತ್ಯಾ ಮುಕ್ತನು ಪಾಪರಹಿತನೂ, ಜರಾಮರಣರಹಿತನೂ, ಶೋಕ ರಹಿತನೂ, ಕ್ಷುತ್ಪಿಪಾಸಾದಿರಹಿತನೂ, ಭಯರಹಿತನೂ, ಸತ್ಯಕಾಮನೂ (ಎಂದರೆ ಅವನು ಆಶಿಸಿದ್ದನ್ನೆಲ್ಲಾ ಪಡೆಯುವವನೂ) ಸತ್ಯಸಂಕಲ್ಪನೂ (ಎಂದರೆ ಸಂಕಲ್ಪಮಾತ್ರದಿಂದಲೇ ಇಷ್ಟಾರ್ಥಗಳನ್ನೆಲ್ಲಾ ಪಡೆಯುವವನೂ) ಆದ ಅಷ್ಟಗುಣಗಳು ಅವನಿಗೆ ಉಂಟಾಗುವುವು.

ಇಲ್ಲಿ ಪೂರ್ವಪಕ್ಷದ ಒಂದೆರಡು ಪ್ರಶ್ನೆಗಳು ನಿವಾರಿಸಲ್ಪಡುತ್ತವೆ. ಅವು ಯಾವುವೆಂದರೆ—ಮುಕ್ತನಿಗೆ ಅಪಹತಪಾಪ್ಮತ್ವಾದಿಗುಣಗಳು ಸ್ವಾಭಾವಿಕವಾಗಿ ಇರುವುವೇ? ಅಥವಾ ಅವನು ಚೈತನ್ಯಮಾತ್ರ ಸ್ವರೂಪನೇ? ಅಥವಾ ಇವೆರಡೂ ಇವೆಯೇ? ರೂಪವಿಲ್ಲದೆ ಚೈತನ್ಯ ಮಾತ್ರಸ್ವರೂಪನಾದರೆ ಗುಣಗಳು ಹ್ಯಾಗೆ ಅನ್ವಯಿಸುವುವು ಇತ್ಯಾದಿ ಪ್ರಶ್ನೆಗಳು.

ಉಪನ್ಯಾಸಾದಿಗಳಲ್ಲಿ ಹೇಳಿರುವುದರಿಂದ ಬ್ರಹ್ಮಸಂಬಂಧಿಯಾದ ಗುಣಾಷ್ಟಕಗಳೊಡನೆ ಜೀವನು ಮುಕ್ತದೆಸೆಯಲ್ಲಿ ಆವಿರ್ಭವಿಸುವನು ಎಂದು ಜೈಮಿನಿಯು ಹೇಳುತ್ತಾರೆ. ಉಪನ್ಯಾಸವೆಂದರೆ—"ಯ ಆತ್ಮಾಽ ಪಹತಪಾಪ್ಮಾ....ಸತ್ಯಸಂಕಲ್ಪಃ" (ಛಾಂ. ಉ. ೮-೭-೧); "ಜಕ್ಷನ್

ಕ್ರೀಡರ್ರಮಮಾಣಃ" (ಛಾಂ. ಉ. ೮-೧೨-೩) ಇತ್ಯಾದಿ ಶ್ರುತಿವಾಕ್ಯ ರೀತ್ಯಾ ಮುಕ್ತನಿಗೆ ಸತ್ಯಸಂಕಲ್ಪತ್ವಾದಿಗಳು ತೋರುವುವು.

"ಚಿತಿತನ್ಮಾತ್ರೇಣ ತದಾತ್ಮಕತ್ವಾದಿತ್ಯೌಡುಲೋಮಿಃ" (ಶಾ.ಮಿಾ. ೪-೪-೬) ಎಂದರೆ—ಚೈತನ್ಯವೇ ಆತ್ಮನಿಗೆ ಸ್ವರೂಪವಾದ್ದರಿಂದ ಚೈತನ್ಯ ಮಾತ್ರ ಸ್ವರೂಪದಿಂದಲೇ ಜೀವನು ಆವಿರ್ಭವಿಸುವನು ಎಂದು ಔಡು ಲೋಮಿಯು ಹೇಳುತ್ತಾರೆ. "ಯಥಾ ಸೈಂಧವಘನಃ . ."ಎಂದು ಆರಂಭಿಸಿ "ವಿಜ್ಞಾನಘನಏವ" (ಬೃ.ಉ. ೪-೫-೧೩) ಎಂದು ಉಪ್ಪಿನಕಲ್ಲಿನ ಚೂರು ಒಳಗೂ ಹೊರಗೂ ಸರ್ವಭಾಗವೂ ಉಪ್ಪಾಗಿಯೇ ಇರುವಂತೆ ಜೀವನೂ ಕೂಡ ಸಂಪೂರ್ಣವಾಗಿ ಜ್ಞಾನಮಾತ್ರಸ್ವರೂಪನು. ಇದನ್ನೇ ಮುಕ್ತದೆಸೆ ಯಲ್ಲಿಯೂ ಹೊಂದಬೇಕು. ಅಪಹತಪಾಪ್ಮತ್ವಾದಿ ಗುಣಗಳು ಜೀವನಿಗೆ ಸ್ವರೂಪವಲ್ಲದ್ದರಿಂದ ಇವು ಇರಕೂಡದು ಎಂದು ಔಡುಲೋಮಿಯು ಹೇಳುತ್ತಾರೆ.

**ಸಿದ್ಧಾನ್ತ :—**

ಆತ್ಮನು ಜ್ಞಾನಸ್ವರೂಪನು ಎಂದರೆ ಸ್ವರೂಪತಃ ಸ್ವಯಂಪ್ರಕಾಶನು ಎಂದು ಶ್ರುತಿಯಲ್ಲಿ ಹೇಳಿದೆ. ಆತ್ಮನಿಗೆ ಅಪಹತಪಾಪ್ಮತ್ವಾದಿ ಗುಣ ಗಳೂ ಶ್ರುತಿಯಲ್ಲಿ ಹೇಳಿವೆ. ಇವುಗಳಲ್ಲಿ ಒಂದಕ್ಕೊಂದು ವಿರೋಧವಾ ಗಿರುವಹಾಗೆ ಇದ್ದರೆ ಮಾತ್ರ ಅನುಮಾನಾಸ್ಪದವಾಗುವುದೇ ವಿನಾ ಹಾಗಿಲ್ಲ ದಿದ್ದರೆ ಒಂದು ವಾಕ್ಯವನ್ನು ಒಪ್ಪಿಕೊಂಡು ಮತ್ತೊಂದನ್ನು ಒಪ್ಪಿ ಕೊಳ್ಳದೇ ಇರುವುದಕ್ಕೆ ಯಾವ ಕಾರಣವೂ ಇಲ್ಲ. ಎರಡನ್ನೂ ಒಪ್ಪಿ ಕೊಳ್ಳಲೇಬೇಕು. ಆದ್ದರಿಂದ ಮುಕ್ತಾತ್ಮನು ಜ್ಞಾನಸ್ವರೂಪತ್ವ ಮತ್ತು ಅಪಹತಪಾಪ್ಮತ್ವಾದಿ ಗುಣಗಳನ್ನೆಲ್ಲಾ ಹೊಂದುವನು ಎಂದು ವ್ಯಾಸ ಮಹರ್ಷಿಗಳು ಹೇಳಿರುತ್ತಾರೆ.

ಶ್ರುತಿವಾಕ್ಯರೀತ್ಯಾ ಮುಕ್ತನು ಸತ್ಯಸಂಕಲ್ಪಶಕ್ತಿಯುಳ್ಳವನಾಗು ವನು. ಸತ್ಯಸಂಕಲ್ಪತ್ವವೆಂದರೆ ಸಂಕಲ್ಪಮಾತ್ರದಿಂದ ಕಾರ್ಯಪ್ರಯತ್ನಗಳಿಲ್ಲ ದೆಯೇ ಇಷ್ಟಕಾರ್ಯವನ್ನು ನೆರವೇರಿಸಬಲ್ಲ ಸಾಮರ್ಥ್ಯವು. ಈ ಶಕ್ತಿಯು

ಭಗವತ್ಪ್ರಸಾದದಿಂದ ಉಂಟಾಗುತ್ತದೆ. "ಪರಂಜ್ಯೋತಿರುಪಸಂಪದ್ಯ ಸ್ವೇನರೂಪೇಣಾಭಿನಿಷ್ಪದ್ಯತೇ" (ಛಾಂ. ಉ. ೮-೧೨-೨) "ಸ ಉತ್ತಮಃ ಪುರುಷಃ ಸ ತತ್ರ ಪರ್ಯೇತಿಜಕ್ಷ್ವ ಕ್ರೀಡ್ವ ರಮಮಾಣಃ ಸ್ತ್ರೀಭಿರ್ವಾ ಯಾನೈರ್ವಾಜ್ಞಾತಿಭಿರ್ವಾ" (ಛಾಂ. ಉ. ೮-೧೨-೩) "ಸ ಯದಿ ಪಿತೃ ಲೋಕ ಕಾಮೋ ಭವತಿ ಸಂಕಲ್ಪ ದೇವಾಸ್ಯ ಪಿತರಸ್ಸಮುತ್ತಿಷ್ಠನ್ತಿ" (ಛಾಂ. ಉ. ೮-೨-೧) ಎಂದು ಮುಕ್ತನು ತನ್ನ ಪಿತೃಗಳೊಡನೆ ಕೂಡಿ ಇರಬೇಕೆಂದು ಇಷ್ಟಪಟ್ಟರೆ ಸಂಕಲ್ಪಮಾತ್ರದಿಂದಲೇ ಎಂದರೆ ಕಾರ್ಯ ಪ್ರಯತ್ನಗಳಿಲ್ಲದೆಯೇ ಪಿತೃಗಳು ಅವನನ್ನು ಸೇರುತ್ತಾರೆ. ಸ್ತ್ರೀಸಂಗ ಅಥವಾ ಕ್ರೀಡೆಗಳನ್ನು ಇಚ್ಛಿಸಿದರೆ ಅದೂ ಹಾಗೆಯೇ ಸಂಕಲ್ಪಮಾತ್ರ ದಿಂದಲೇ ನೆರವೇರುವುದು.

ಮುಕ್ತನು ಸತ್ಯಸಂಕಲ್ಪನಾದ್ದರಿಂದಲೇ ಬೇರೆ ಯಾರಿಗೂ ಮತ್ತು ಯಾವುದಕ್ಕೂ ಅಧೀನನಲ್ಲವು. ಬೇರೊಬ್ಬರಿಗೆ ಅಧೀನನಾಗಿದ್ದರೆ ಇವನ ಸತ್ಯಸಂಕಲ್ಪಕ್ಕೆ ವಿರೋಧವು ಬರುತ್ತದೆ. ಸತ್ಯಸಂಕಲ್ಪತ್ವದಿಂದ ಇವನಿಗೆ "ಅನನ್ಯಾಧಿಪತ್ಯವು" ಸಿದ್ಧಿಸುವುದು.

**ಮುಕ್ತನ ಶರೀರದ ವಿಚಾರವು:—**

ಮುಕ್ತನಿಗೆ ಶರೀರೇಂದ್ರಿಯಗಳು ಇದ್ದೇ ಇರಬೇಕೇ ಬೇಡವೇ? ಅಥವಾ ಸಂಕಲ್ಪಾನುಸಾರ ದೇಹಸಿದ್ಧಿಯೇ? ಎಂದು ಪ್ರಶ್ನೆ.

"ನ ಹವೈ ಸ ಶರೀರಸ್ಯ ಸತಃ ಪ್ರಿಯಾ ಪ್ರಿಯರೋರಹತಿರಸ್ತಿ ಅಶರೀ ರಂವಾ ವಸಂತಂ ನಪ್ರಿಯಾ ಪ್ರಿಯೇಸ್ಪೃಶತಃ" (ಛಾಂ. ಉ. ೮-೧೨-೧) ಎಂದರೆ ಶರೀರವಿರುವರಿವಿಗೂ ಸುಖದುಃಖಾನುಭವವು ಬಿಡುವುದಿಲ್ಲ. ಶರೀರವಿಲ್ಲದಿದ್ದರೆ ಸುಖದುಃಖಾದಿಗಳು ಕೂಡುವುದಿಲ್ಲ ಎಂಬ ಶ್ರುತಿವಾಕ್ಯ ರೀತ್ಯಾ ಮುಕ್ತನಿಗೆ ಶರೀರೇಂದ್ರಿಯಗಳಿಲ್ಲವು ಎಂದು "ಬಾದರಿ"ಯೆಂಬು ವರು ಹೇಳಿರುತ್ತಾರೆ.

" ಸ ಏಕದಾಭವತಿ - ತ್ರಿದಾಭವತಿ, ಪಂಚಧಾ, ಸಪ್ತಧಾ.... " (ಛಾಂ. ಉ. ೭-೨೬-೨) ಎಂದು-ಮುಕ್ತನು ಒಂದು,

ಏಳು ಇತ್ಯಾದಿ ಶರೀರಗಳನ್ನು ಪಡೆಯುವನು ಎಂದು ಹೇಳಿರುವುದರಿಂದ– ಆತ್ಮಸ್ವರೂಪವು ಏಕವಾಗಿ ಇದ್ದರೂ ಶರೀರವು ಅನೇಕವಾಗುವುವು ಎಂದು ಜೈಮಿನಿಯು ಹೇಳುತ್ತಾರೆ.

ತನ್ನ ಸತ್ಯಸಂಕಲ್ಪತ್ವ ಶಕ್ತಿಯಿಂದ ಮುಕ್ತನು ಎರಡು ವಿಧವಾಗಿಯೂ ಇರಬಹುದು. ಸಂಕಲ್ಪಮಾತ್ರದಿಂದ ಮುಕ್ತನು ತನ್ನ ಇಷ್ಟಬಂದ ಶರೀರಗಳನ್ನು ಇಷ್ಟವಾದಷ್ಟು ಪಡೆಯಬಹುದು. ಶರೀರವೇ ಬೇಡವೆಂದು ಸಂಕಲ್ಪಿಸಿದರೆ ಶರೀರವಿಲ್ಲದೆಯೂ ಇರಬಹುದು. ಇವೆರಡಕ್ಕೂ ವಿರೋಧವಿಲ್ಲವೆಂದು ವ್ಯಾಸಮಹರ್ಷಿಗಳು ಹೇಳುವರು. ಇದೇ ಸಿದ್ಧಾನ್ತವು.

ಒಂದು ಆತ್ಮಕ್ಕೆ ಒಂದೇ ಶರೀರವಿರಬೇಕು. ಅನೇಕ ಶರೀರಗಳು ಹ್ಯಾಗೆ ಸಮನ್ವಯಿಸುವುವು—ಎಂಬ ಪ್ರಶ್ನೆಯು ಹೊರಡಬಹುದು. ಈ ವಿಷಯದಲ್ಲಿ ಸೌಭರಿಋಷಿಯ ಚರಿತ್ರದಲ್ಲಿ ಅವರು ತಮ್ಮ ಜ್ಞಾನವ್ಯಾಪ್ತಿಯಿಂದ ಅನೇಕ ಶರೀರಗಳನ್ನು ಏಕಕಾಲದಲ್ಲಿ ಪರಿಗ್ರಹಿಸಿದ ವಿಷಯವನ್ನು ಪುರಾಣಾದಿಗಳಲ್ಲಿ ಕೇಳಿರುತ್ತೇವೆ. ಇದರಿಂದ ಮುಕ್ತನ ವಿಷಯದಲ್ಲಿ ಅನುಮಾನಪಡಬೇಕಾದ ಅವಶ್ಯಕವೇ ಇಲ್ಲ. ತನ್ನ ಜ್ಞಾನವ್ಯಾಪ್ತಿಯಿಂದ ಮುಕ್ತನು ಎಷ್ಟು ಶರೀರಗಳನ್ನಾದರೂ ಪರಿಗ್ರಹಿಸಬಲ್ಲನು. ಇದು ತನ್ನ ಸತ್ಯಸಂಕಲ್ಪದಿಂದಲೂ ಸಿದ್ಧಿಸುವುದು.

**ಮುಕ್ತನ ಸೃಷ್ಟ್ಯಾದಿ ಶಕ್ತಿವಿಚಾರವು:—**

ಮುಕ್ತನು ತನಗೆ ಇಷ್ಟವಾದ ಪದಾರ್ಥಗಳನ್ನು ಇಷ್ಟಪ್ರಕಾರ ಸೃಷ್ಟಿಸಿಕೊಂಡು ಅನುಭವಿಸಬಹುದು. ಹಾಗೆ ಸೃಷ್ಟಿಸಿದಾಗ ಜಾಗ್ರದವಸ್ಥೆಯಲ್ಲಿ ಜೀವನು ಸುಖವನ್ನು ಅನುಭವಿಸುವಂತೆ ಅವನು ಅನುಭವಿಸುತ್ತಾನೆ. ಪರಮಪುರುಷನು ಲೀಲಾಪ್ರಪಂಚದಲ್ಲಿ ವಸುದೇವಾದಿಗಳನ್ನು ಸೃಷ್ಟಿಸಿ ನಂತರ ತಾನೂ ಅವತರಿಸಿ ಅವರೊಡನೆ ಲೀಲಾರಸವನ್ನು ಅನುಭವಿಸಿದಂತೆ ಮುಕ್ತನೂ ತನ್ನ ಇಷ್ಟಪ್ರಕಾರ ಸೃಷ್ಟಿಯನ್ನು ಮಾಡಿ ಅನು

ಗಳಲ್ಲಿ ತಾನೂ ಸೇರಿ ಲೀಲಾರಸವನ್ನು ಅನುಭವಿಸಬಲ್ಲನು. ಹಾಗೆ ಸೃಷ್ಟಿಸಲು ಇಷ್ಟವಿಲ್ಲದೆಯೇ ಸ್ವಪ್ನಪದಾರ್ಥಗಳಂತೆ ಸೂಕ್ಷ್ಮವಸ್ತುಗಳೊಡನೆ ಸೇರಿ ಪಿತೃಲೋಕಾದಿಗಳಲ್ಲಿ ಲೀಲಾರಸವನ್ನು ಅನುಭವಿಸಬಲ್ಲನು.

**ಮುಕ್ತಜೀವನು ಸರ್ವಜ್ಞನು :—**

ಮುಕ್ತನು ಸರ್ವಜ್ಞತ್ವವನ್ನೂ ಇತರ ಗುಣಗಳೊಡನೆ ಪಡೆಯುವನು. "ಸ್ವೇನರೂಪೇಣ" ಎಂಬ ಅವನ ಸ್ವಸ್ವರೂಪವಾದ ಸ್ವಯಂಪ್ರಕಾಶ ಜ್ಞಾನಸ್ವರೂಪವು ಬಂದಾಗಲೇ ಸರ್ವಜ್ಞತ್ವವೂ ಉಂಟಾಗಲೇಬೇಕು.

ಇಲ್ಲಿ ಪೂರ್ವಪಕ್ಷದವರ ಒಂದು ಆಕ್ಷೇಪಣೆಯಿರುವುದು. "ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ । ನ ಬಾಹ್ಯಂ ಕಿಂಚ ನ ವೇದನಾನ್ತರಂ" (ಬೃ. ಉ. ೪-೩-೨೧) ಎಂದರೆ ಜೀವನು ಪರನಲ್ಲಿ ಸೇರಿದಾಗ (ಎಂದರೆ ಸಂಪರಿಷ್ವಕ್ತನಾದಾಗ) ಅವನಿಗೆ ತನ್ನ ಒಳಗಿನ ಮತ್ತು ಹೊರಗಿನ ವಿಷಯಗಳೊಂದೂ ತಿಳಿಯುವುದಿಲ್ಲ—ಎಂದು ಹೇಳಿರುವುದರಿಂದ ಮುಕ್ತಜೀವನು ಸರ್ವಜ್ಞನೆಂದು ಹ್ಯಾಗೆ ಹೇಳಬಹುದು—ಎಂದು ಪ್ರಶ್ನೆ.

**ಸಿದ್ಧಾನ್ತ :—**

ಮೇಲಿನ ಶ್ರುತಿಯು ಮುಕ್ತಜೀವನವಿಷಯವಾಗಿ ಹೇಳಲಿಲ್ಲ. ಸುಷುಪ್ತಿಯಲ್ಲಿರುವ ಪ್ರಾಕೃತಜೀವನ ವಿಷಯವನ್ನು ಹೇಳುತ್ತದೆ.

"ನಾಹಖಲ್ವಯಮೇವಂ ಸಂಪ್ರತ್ಯಾತ್ಮಾನಂ ಜಾನಾತ್ಯಯ ಮಹಸ್ಮೀತಿ ನೋ ಏವೇಮಾನಿ ಭೂತಾನಿ ವಿನಾಶಮೇ ವಾಪಿತೋಭವತಿ" (ಛಾ. ಉ. ೮-೧೧-೧) ಎಂದರೆ ಸುಷುಪ್ತಾತ್ಮನು ಮೃತಿಹೊಂದಿದವನಂತೆಯೇ ತನ್ನನ್ನೂ ಮತ್ತು ಇತರ ಭೂತಗಳನ್ನೂ ಅರಿಯದಂತೆ ಜ್ಞಾನವೂ ಪ್ರಕಾಶವಿಲ್ಲದೆ ಹೋಗಿ ಇರುವನು.

"ಏತೇಭ್ಯೋ ಭೂತೇಭ್ಯಸ್ಸಮುತ್ಥಾಯತಾನ್ಯೇವಾನುವಿನಶ್ಯತಿ" (ಬೃ. ಉ. ೨-೪-೧೨) ಎಂದರೆ—ಮರಣದೆಸೆಯಲ್ಲಿ ಜೀವನು ಇಂದ್ರಿಯ

ಗಳೊಡನೆಯೂ, ಭೂತಸೂಕ್ಷ್ಮಗಳೊಡನೆಯೂ, ಪರಮಾತ್ಮನಲ್ಲಿ ಲೀನ ವಾಗಲೂ ಜ್ಞಾನವಿಲ್ಲದವನಾಗುವನು—ಎಂದು ಹೇಳಿದೆ.

ಆದರೆ ಮುಕ್ತ ಜೀವನ ವಿಷಯದಲ್ಲಿ ಇದೇ ಛಾಂದೋಗ್ಯೋಪ ನಿಷತ್ತಿನಲ್ಲಿ "ಸರ್ವಂಹಪಶ್ಯಃ ಪಶ್ಯತಿ ಸರ್ವಮಾಪ್ನೋತಿ ಸರ್ವಶಃ" (ಛಾಂ. ಉ. ೭-೨೭-೨) ಎಂದರೆ–ಮುಕ್ತನು ಸರ್ವಜ್ಞನಾಗಿ ಸಮಸ್ತ ವನ್ನೂ ನೋಡಬಲ್ಲವನು ಎಂದೂ, "ಮನಸೈತಾರ್ ಕಾಮಾರ್ ಪಶ್ಯಾ‌ ರಮತೇ'' (ಛಾಂ. ಉ. ೮-೧೨-೫) ಎಂದರೆ—ಮುಕ್ತನು ತನ್ನ ಸಂಕಲ್ಪ ಮಾತ್ರದಿಂದಲೇ ಸಕಲಭೋಗ್ಯವಸ್ತುಗಳನ್ನೂ ನೋಡುವನು ಎಂದು ಹೇಳಿರುವುದರಿಂದ ಮುಕ್ತನು ಸರ್ವಜ್ಞನೆಂಬ ವಿಷಯದಲ್ಲಿ ಯಾವ ಅನುಮಾನವೂ ಇಲ್ಲ. ಈ ಶ್ರುತಿವಾಕ್ಯಗಳಿಗೆಲ್ಲಾ ವಿರೋಧವು ಬಾರದಂತೆ "ಪ್ರಾಜ್ಞೇನ" ಎಂಬ ಶ್ರುತಿಯು ಮುಕ್ತನ ವಿಷಯವಲ್ಲವು; ಸುಪ್ತನು ಅಥವಾ ಮೃತನು ಇವರಿಬ್ಬರಲ್ಲಿ ಒಬ್ಬನ ವಿಷಯವಾಗಿ ಹೇಳಿರುವುದಾಗಿ ಗ್ರಹಿಸಬೇಕು.

**ಮುಕ್ತನ ಜಗದ್ವ್ಯಾಪಾರವರ್ಜನ :—**

ಮುಕ್ತನು ಪರಬ್ರಹ್ಮನ ಸಾಮ್ಯವನ್ನು ಹೊಂದುವನು ಎಂದು ಶ್ರುತಿ ಯಲ್ಲಿ ಹೇಳಿರುವುದರಿಂದ ಮುಕ್ತನಿಗೆ ಪರಬ್ರಹ್ಮನಂತೆ ಜಗತ್ಸೃಷ್ಟಿ, ಸರ್ವ ಜಗನ್ನಿಯಮನಾದಿಸಾಮರ್ಥ್ಯಾದಿ ಸಕಲ ಐಶ್ವರ್ಯಗಳೂ ಇರುವುವೇ? ಎಂದು ಪ್ರಶ್ನೆ.

"ನಿರಂಜನಃ ಪರಮಂ ಸಾಮ್ಯಮುಪೈತಿ" (ಮು. ಉ. ೩-೧೩) ಎಂದರೆ ಪರಮಾತ್ಮನೊಡನೆ ಅತ್ಯಂತ ಸಾಮ್ಯವನ್ನು ಹೊಂದುವನು ಎಂದು ಹೇಳಿರುವುದರಿಂದ ಜಗತ್ಸೃಷ್ಟ್ಯಾದಿವ್ಯಾಪಾರಗಳೂ ಉಂಟಾಗ ಬೇಕು—ಎಂದು ಪೂರ್ವಪಕ್ಷವು.

**ಸಿದ್ಧಾನ್ತ :—**

ಪರಬ್ರಹ್ಮಪ್ರಕರಣಗಳಿಗೆ ಇದು ವಿರುದ್ಧವಾಗುವುದರಿಂದ ಇದು ಅನ್ವಯಿಸಲಾರದು. "ಯತೋವಾ ಇಮಾನಿ ಭೂತಾನಿ ಜಾಯನ್ತೆ"

"ಸದೇವ ಸೋಮ್ಯೇದಮಗ್ರ ಆಸೀತ್...." "ಆತ್ಮಾವಾ ಇದಮೇಕಮೇವಾಗ್ರ ಆಸೀತ್'' — "ಏಕೋಹವೈ ನಾರಾಯಣ ಆಸೀತ್...." ಇತ್ಯಾದಿ ಜಗತ್ಕಾರಣತ್ವ, ಸರ್ವನಿಯಮನಸಾಮರ್ಥ್ಯಾದಿಗಳು ಪರಮಪುರುಷನಿಗೊಬ್ಬನಿಗೇ ಹೇಳಿರುವುದರಿಂದಲೂ, ಜೀವನು ಪರಮಾತ್ಮನಿಗಿಂತಲೂ ಭಿನ್ನನಾದ್ದರಿಂದಲೂ ಪರಮಾತ್ಮಸಾಮ್ಯವೆಂದರೆ ಪರಮಾತ್ಮನ ಗುಣಾದಿಗಳಲ್ಲಿ ಸಾಮ್ಯವನ್ನು ಮಾತ್ರ ಹೇಳಿದೆ.

"ಭಿಷಾಸ್ಮಾದ್ವಾತಃ ಪವತೇ...." (ತೈ. ಆನ. ೮-೧) ಎಂದರೆ— ಪರಮಾತ್ಮನ ಭಯದಿಂದಲೇ ವಾಯು, ಸೂರ್ಯ, ಅಗ್ನಿ, ಇಂದ್ರ, ಯಮಾದಿಗಳು ತಮ್ಮ ತಮ್ಮ ಕಾರ್ಯಗಳನ್ನು ಸರಿಯಾಗಿ ನಡೆಯಿಸುತ್ತಿದ್ದಾರೆ ಇತ್ಯಾದಿ ಶ್ರುತಿವಾಕ್ಯವೂ, ''ಅಹಂ ಸರ್ವಸ್ಯ ಪ್ರಭವಃ ಪ್ರಳಯಾಸ್ತಥಾ" (ಭ. ಗೀ. ೧೦-೮) ಇತ್ಯಾದಿ ಸ್ಮೃತಿವಾಕ್ಯಗಳೂ ಪರಮಪುರುಷನ ಜಗದೇಕ ಕಾರಣತ್ವವನ್ನು ಪ್ರತಿಪಾದಿಸುತ್ತವೆ. ಇದೂ ಅಲ್ಲದೆ ''ಸೋಕಾಮಯತ ಬಹುಸ್ಯಾಂ ಪ್ರಜಾಯೇಯೇತಿ'' "ಯಃ ಪೃಥಿವೀ ಮಂತರೋ ಯಮಯತಿ'' "ಯ ಆತ್ಮನಮನ್ತರೋಯಮಯತಿ" ಇತ್ಯಾದಿ ಶ್ರುತಿವಾಕ್ಯ ರೀತ್ಯಾ ಜಗತ್ಸೃಷ್ಟ್ಯಾದಿಗಳೂ, ಜಗನ್ನಿಯಂತ್ರತ್ವಾದಿಗಳೂ ಪರಮಪುರುಷನಿಗೇ ಹೇಳಿರುವುವೇ ವಿನಾ ಸೃಷ್ಟಿಪ್ರಕರಣಗಳಲ್ಲಿ ಜೀವಾತ್ಮನ ಪ್ರಸಕ್ತಿಯೇ ಇಲ್ಲ. ಇದರಿಂದ ಮುಕ್ತಜೀವನಿಗೆ ಬ್ರಹ್ಮಸಾಮ್ಯವು ''ಭೋಗಮಾತ್ರ"ದಲ್ಲೇ ಇರುವುದು.

## ಮುಕ್ತನು ಪುನರಾವರ್ತಿ ಇಲ್ಲದ ಶಾಶ್ವತಭೋಗವನ್ನು ಅನುಭವಿಸುವನು:—

"ತಸ್ಯಸರ್ವೇಷು ಲೋಕೇಷು ಕಾಮಚಾರೋಭವತಿ" (ಛಾಂ. ಉ. ೭-೨೫-೨) "ಇಮಾ್ಂ ಲೋಕಾ್ಂ ಕಾಮಾನ್ನೀ ಕಾಮರೂಪ್ಯನು ಸಂಚರ್ನ್'' (ತೈ. ಭೃಗು. ೧೦-೫) ಎಂದರೆ—ಜಗತ್ಸೃಷ್ಟಿಯಲ್ಲಿರುವ ಲೋಕಗಳಲ್ಲಿ ತನ್ನ ಇಷ್ಟಪ್ರಕಾರ ಸುಖಾನುಭವವು ಮುಕ್ತನಿಗೆ ಸಿದ್ಧಿಸುವುದು. ಈ ಲೀಲಾವಿಭೂತಿಯಲ್ಲಿಯೂ ಅವನು ಸುಖಾನುಭವಕ್ಕಾಗಿ ಬರಬಹುದು.

ಇಲ್ಲಿ ಒಂದು ಅನುಮಾನವುಂಟಾಗುವುದು. ಅನೇಕ ಜನ್ಮಗಳು ಅಜ್ಞಾನಕರ್ಮಗಳಿಂದ ನೊಂದು ಉಪಾಸನಾದಿ ಶ್ರಮಗಳಿಂದ ಸಂಸಾರ ವಿಮುಕ್ತನಾಗಿ ಪರಮಪದಕ್ಕೆ ಹೋದ ಮುಕ್ತನು ಪುನಃ ಹೇಯವಾದ ಈ ಪ್ರಕೃತಿಮಂಡಲದಲ್ಲಿ ಸುಖಾನುಭವವನ್ನು ಪಡೆಯುವುದಕ್ಕೆ ಯಾತಕ್ಕೆ ಬರುವನು ಎಂದು ಕೇಳಬಹುದು.

ಲೀಲಾವಿಭೂತಿಯಲ್ಲಿ ಪರಿಣಮಿಸಿರುವ ಪರಮಪುರುಷನ ವಿಭೂತ್ಯೈಶ್ವರ್ಯಗಳು ಸಾಂಸಾರಿಕರ ಅಜ್ಞಾನದಿಂದಾವರಿಸಲ್ಪಟ್ಟು ದುಃಖರೂಪವಾಗಿ ಪರಿಣಮಿಸುವುದೇ ವಿನಾ, ಅಜ್ಞಾನದಿಂದ ವಿಮುಕ್ತರಾದ ಪರಿಶುದ್ಧಾತ್ಮನಿಗೆ ಆ ವಿಭೂತ್ಯೈಶ್ವರ್ಯಗಳು ಪರಮಭೋಗ್ಯವಾಗಿರುವುವು. ಪರಬ್ರಹ್ಮನ ಪರಿಶುದ್ಧವಾದ ಗುಣವಿಭೂತಿಗಳೇ ಮುಕ್ತನಿಗೆ ಭೋಗ್ಯವಾದುದರಿಂದ ಪರಮಪುರುಷನ ಏಕದೇಶವಾದ ಈ ಬ್ರಹ್ಮಾಂಡದಲ್ಲಿಯೂ, ಪರಮಾತ್ಮನ ಆ ಪರಿಶುದ್ಧವಾದ ವಿಭೂತಿಗಳನ್ನು ಅನುಭವಿಸುವುದಕ್ಕಾಗಿ ಮುಕ್ತನು ಬರುವನು. ಮುಕ್ತಜೀವನಾದ್ದರಿಂದ ಅಜ್ಞಾನಾದಿಗಳಿಂದಲೂ, ನಶ್ವರವಾಗಿಯೂ, ಹೇಯವಾಗಿಯೂ ಇರುವ ಸಾಂಸಾರಿಕ ಸುಖಗಳು ಮುಕ್ತನನ್ನು ಅಂಟುವುದಿಲ್ಲ. “ಯದಾಹ್ಯೇವೇಷ ಏಕಸ್ಮಿನ್ನದೃಶ್ಯೇಽನಾತ್ಮ್ಯೇಽನಿರುಕ್ತೇಽನಿಲಯೇಽಭಯಂ ಪ್ರತಿಷ್ಠಾಂ ವಿಂದತೇ ಅಥಸೋಽಭಯಂಗತೋ ಭವತಿ” (ತೈ. ಆನಂ. ೭-೭) ಇತ್ಯಾದಿ ಶ್ರುತಿವಾಕ್ಯಗಳೇ ಮುಕ್ತನು ಸವಿಭೂತಿಕ ಬ್ರಹ್ಮಾನುಭವವನ್ನು ಮಾಡುವುದಕ್ಕೆ ಪ್ರಮಾಣವೆಂದು ಹೇಳುತ್ತಾರೆ.

“ಏತೇನ ಪ್ರತಿಪದ್ಯಮಾನಾ ಇಮಂ ಮಾನವ ಮಾವರ್ತಂ
ನಾವರ್ತಂತೇ”
“ಸಖಲ್ವೇ ವರ್ತಯನ್ ಯಾವದಾಯುಷಂ ಬ್ರಹ್ಮಲೋಕಮಭಿ
ಸಂಪದ್ಯತೇ ನಪುನರಾವರ್ತತೇ”
“ಮಾಮುಪೇತ್ಯ ಪುನರ್ಜನ್ಮದುಃಖಾಲಯಮಶಾಶ್ವತಂ”
“ನಾಪ್ನುವಂತಿ ಮಹಾತ್ಮಾನಸ್ಸಂಸಿದ್ಧಿಂ ಪರಮಾಂಗತಾಃ”
(ಭ. ಗೀ. ೮-೧೫)

"ಮಾಮುಪೇತ್ಯತುಕಾಂತೇಯ ಪುನರ್ಜನ್ಮನವಿದ್ಯತೇ"
(ಭ. ಗೀ. ೮-೧೬)

"ಇದಂಜ್ಞಾನಮುಪಾಶ್ರಿತ್ಯಮಮಸಾಧರ್ಮ್ಯಮಾಗತಾಃ"
"ಸರ್ಗೇऽಪಿನೋಪಜಾಯನ್ತೇ ಪ್ರಳಯೇನವ್ಯಥನ್ತಿಚ"
(ಭ. ಗೀ. ೧೪-೨)

ಇತ್ಯಾದಿ ಶ್ರುತಿ ಮತ್ತು ಸ್ಮೃತಿವಾಕ್ಯಗಳಿಂದ ಮುಕ್ತನಿಗೆ "ಪುನರಾವರ್ತಿಯಿಲ್ಲದ" ಪರಮಪದವೂ, ಪರಮಾತ್ಮಸಾಧರ್ಮ್ಯವೂ ಅಪರಿಚ್ಛಿನ್ನ ಪರಿಪೂರ್ಣ ಬ್ರಹ್ಮಾನುಭವವೂ ಇರುವುದು ಎಂದು ಸಿದ್ಧಿಸುವುದು.

ಓಂ ಯೋನಿತ್ಯಮಚ್ಯುತಪದಾಂಬುಜಯುಗ್ಮರುಗ್ಮ |
ವ್ಯಾಮೋಹತಸ್ತದಿತರಾಣಿ ತೃಣಾಯಮೇನೇ |
ಅಸ್ಮದ್ಗುರೋರ್ಭಗವತೋಸ್ಯ ದಯೈಕಸಿಂಧೋಃ |
ರಾಮಾನುಜಸ್ಯ ಚರಣೌ ಶರಣಂ ಪ್ರಪದ್ಯೇ ||

|| ಶ್ರೀಮತೇ ರಾಮಾನುಜಾಯನಮಃ ||

—: **ಸಂಪೂರ್ಣಂ** :—

# ಶುದ್ಧಾಶುದ್ಧಪತ್ರಿಕೆ

| ಪುಟ | ಪಂಙ್ತಿ | ಅಶುದ್ಧ | ಶುದ್ಧ |
|---|---|---|---|
| ೧೦ | ೯ | ಪ್ರತಿಬಿಂಬಿಸ | ಪ್ರತಿಬಿಂಬಿಸು |
| ೧೧ | ೧೮ | ಲಯಿಸುವುದು | ಲಯಿಸುವನು |
| ೧೭ | ೧೮ | ಮಾಯನಾವಾದವು | ಮೃಷಾವಾದವು |
| ೨೨ | ೪ ಮತ್ತು ೫ | ಮೊದಲಿಂದ ಎಲ್ಲಾ ಭಾಗವೂ | ಮೊದಲಿನ ಅರ್ಧಭಾಗವು |
| ೨೮ | ೨೭ | ಅಜ್ಞಾನ | ಆ ಜ್ಞಾನ |
| ೫೩ | ೬ ಮತ್ತು ೭ | ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು | ತ್ವಕ್, ಚಕ್ಷು, ಶ್ರೋತ್ರ, ಜಿಹ್ವಾ, ಘ್ರಾಣಗಳು |
| ೫೭ | ೭ | ಇಂದ್ರಜಾಲವಿದ್ಯೆಯಲ್ಲಿ | ಇಂದ್ರಜಾಲವಿದ್ಯೆಯಲ್ಲ |
| ೫೯ | ೧೯ | ನಿದ್ರಾವಸ್ಥೆಯಲ್ಲ | ನಿದ್ರಾವಸ್ಥೆಗಳಲ್ಲ |
| ೬೧ | ೧೨ | ಗುಣನಿಧಿಸ್ವರೂಪ | ಗುಣಗಳಿಗೆ ನಿಧಿಸ್ವರೂಃ |
| ೮೦ | ೧೬ | ವಿಧಿಯಪ್ರಕಾರ ಅದು | ವಿಧಿಯಪ್ರಕಾರ ಮಾ( ದರೂ ಅದು |
| ೯೬ | ೫ | ಪರಮಾತ್ಮೋಪಾಸಕ | ಪರಮಾತ್ಮೋಪಾಸಕರಿ |